
# ದೆಹಲಿ ಕರ್ನಾಟಕ ಸಂಘದ ಅಭಿಮತ

ಜನವರಿ 2013
ಬೆಲೆ ರೂ. 1



ಚೆಲುವಿನ ಹೂ ನಗೆಯಲಿ ಜಗವೆಲ್ಲ ನಲಿಯುತಿರಲಿ

ಅಭಿನಂದನೆ

# ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ

**ಕರ್ನಾಟಕದ ಖ್ಯಾತ ಹಿಂದುಸ್ತಾನಿ ಗಾಯಕ ರಾಜಶೇಖರ ಮನ್ಸೂರ್, ಜಾನಪದ ತಜ್ಞ ಗೊ.ರು. ಚನ್ನಬಸಪ್ಪ ಹಾಗೂ ವಯೋಲಿನ್ ವಾದಕ ಮೈಸೂರು ಎಂ. ನಾಗರಾಜ್ ಸೇರಿದಂತೆ ಸಂಗೀತ, ನಾಟಕ, ನೃತ್ಯ, ಗೊಂಬೆಯಾಟದ ಕ್ಷೇತ್ರದ ಒಟ್ಟು 36 ಜನರು 2012ರ ಸಾಲಿನ ಪ್ರತಿಷ್ಠಿತ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ. ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು ಮತ್ತು ತಾಮ್ರ ಪತ್ರ, ಅಂಗವಸ್ತ್ರಗಳನ್ನು ಒಳಗೊಂಡಿದೆ.**



**ಪಂ. ರಾಜಶೇಖರ್ ಮನ್ಸೂರ್ :** ಜೈಪುರ, ಅತ್ರಾಳಿ ಘರಾನಾದ ಖ್ಯಾತ ಹಿಂದೂಸ್ತಾನಿ ಗಾಯಕ ಪಂ. ರಾಜಶೇಖರ್ ಮನ್ಸೂರ್ ಅವರು ಹುಟ್ಟಿದ್ದು 1942ರಲ್ಲಿ. ಅವರು ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಪುತ್ರರು. ರಾಜಶೇಖರ್ ಹುಟ್ಟು ಕಲಾವಿದ. ಕಲೆ ರಕ್ತಗತವಾಗಿ ಬಂದದ್ದು. ತಮ್ಮ ಹದಿನಾರನೇ ವಯಸ್ಸಿಗೆ ರಾಗ 'ಮಾಲಕೌಂಸ'ನ್ನು ನುಡಿಸಿದ ಹೆಗ್ಗಳಿಕೆಯ ರಾಜಶೇಖರ್ ತಮ್ಮ ತಂದೆಯಿಂದಲೇ ಸಂಗೀತಾಭ್ಯಾಸವನ್ನು ಮಾಡಿದ್ದರು. ಇಂಗ್ಲಿಷ್ ಸಾಹಿತ್ಯ ಮತ್ತು ಭಾಷಾಶಾಸ್ತ್ರದಲ್ಲಿ ಎಂ.ಎ. ಮಾಡಿದ ಅವರು ವೇಲ್ಸ್ ವಿಶ್ವವಿದ್ಯಾಲಯದಿಂದ ಬ್ರಿಟಿಷ್ ಕೌನ್ಸಿಲ್ ಸ್ಕಾಲರ್‌ಶಿಪ್ ಪಡೆದಿದ್ದಾರೆ. ಅವರು ಸಾಹಿತ್ಯ ಮತ್ತು ಭಾಷಾಶಾಸ್ತ್ರದ ಉಪನ್ಯಾಸಕರಾಗಿ 35 ವರ್ಷ ಸೇವೆ ಸಲ್ಲಿಸಿ ಕರ್ನಾಟಕ ವಿಶ್ವವಿದ್ಯಾಲಯ ವಿಭಾಗದ ಅಧ್ಯಕ್ಷರಾಗಿ ನಿವೃತ್ತಿ ಹೊಂದಿದ್ದಾರೆ. ಆಕಾಶವಾಣಿಯ ಮೇರು ಶ್ರೇಣಿಯ ಗಾಯಕರಾಗಿರುವ ರಾಜಶೇಖರ್ ಮನ್ಸೂರ್ ಅವರು ದೇಶದಾದ್ಯಂತ ಅನೇಕ ಜನಪ್ರಿಯ ಕಛೇರಿಗಳನ್ನು ನಡೆಸಿದ್ದಾರೆ. ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾಶ್ರೀ ಗೌರವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ಪಡೆದ ಮನ್ಸೂರ್ ಅವರು 2005–2008ರ ಸಾಲಿನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು.



**ಗೊ.ರು. ಚನ್ನಬಸಪ್ಪ :** ಜಾನಪದ, ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಗೊ. ರು.ಚ. ಹುಟ್ಟಿದ್ದು ಚಿಕ್ಕಮಗಳೂರು ಜಿಲ್ಲೆಯ ಗೊಂಡೇದಹಳ್ಳಿಯಲ್ಲಿ. ವಿದ್ಯಾರ್ಥಿ ಜೀವನದಿಂದಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. 1948ರಲ್ಲಿ ಶಾಲಾ ಶಿಕ್ಷಕರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದ ಅವರು ಶಿಕ್ಷಣ ಇಲಾಖೆ, ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆ ಹೀಗೆ ತಮ್ಮ ವೃತ್ತಿ ಜೀವನದುದ್ದಕ್ಕೂ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಭಾರತದ ಜನಸಂಖ್ಯಾ ನಿಯಂತ್ರಣ ಯೋಜನೆಯ ಪ್ರಕಟಣಾ ವಿಭಾಗದಲ್ಲಿ ಉಪನಿರ್ದೇಶಕರಾಗಿ 1988ರಲ್ಲಿ ನಿವೃತ್ತಿ ಹೊಂದಿದರು. ಗ್ರಾಮೀಣ ಬದುಕು, ಸಾಹಿತ್ಯದಲ್ಲಿ ವಿಶೇಷ ಒಲವು ಹೊಂದಿದ ಗೊ.ರು.ಚ. ಅವರಿಗೆ ಜಾನಪದ ಆಸಕ್ತಿಯ ಕ್ಷೇತ್ರ. ಜಾನಪದ ಸಂಪತ್ತನ್ನು ಸಂಗ್ರಹಿಸಿ ಕಾಪಾಡುವಲ್ಲಿ ಗೊ.ರು. ಚನ್ನಬಸಪ್ಪನವರು ಅಪಾರ ಶ್ರಮ ವಹಿಸಿದ್ದಾರೆ.

'ಹೊನ್ನ ಬಿತ್ತೇವು ಹೊಲಕೆಲ್ಲ' ಹಾಗೂ 'ಗ್ರಾಮಜ್ಯೋತಿ' ಇವೆರಡೂ ಕೃತಿಗಳು. ಗೊ.ರು.ಚ. ಅವರು ಸಂಪಾದಿಸಿದ ವಿಶಿಷ್ಟ ಆಕರಗ್ರಂಥಗಳು. ಜಾನಪದ ವಸ್ತುವನ್ನಾಧರಿಸಿ ಬರೆದ ಸಾಕ್ಷಿ ಕಲ್ಲು, ಬೆಳ್ಳಕ್ಕಿ ಹಿಂಡು ಬೆದರ್ಯಾವೋ ರಂಗಭೂಮಿಯ ಮೇಲೆ ಅಪೂರ್ವ ಯಶಸ್ಸು ಕಂಡ ನಾಟಕಗಳು. ವಿಭೂತಿ, ದಾಸೋಹ, ಸೇವಾ ಸಂಪದ ಮೊದಲಾದ ವಿಶಿಷ್ಟ ಕೃತಿ ರಚನೆಗಳಲ್ಲದೆ, ಅವರು ಅನುವಾದಿಸಿದ–ಚೆಗೆವಾರ ಇವರಿಗೆ ಖ್ಯಾತಿ ತಂದ ಕೃತಿ.

ಸಾಹಿತ್ಯವಲ್ಲದೆ ಚಿತ್ರರಂಗದಲ್ಲೂ ಗಮನಾರ್ಹ ಸಾಧನೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ, ಕರ್ನಾಟಕ ಜಾನಪದ ಕಲೆ, ಕನ್ನಡ ಪತ್ರಿಕೋದ್ಯಮ, ಸುತ್ತೂರ ಸಿರಿ ಮೊದಲಾದ 40ಕ್ಕೂ ಹೆಚ್ಚು ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸಿದ್ದಾರಲ್ಲದೇ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಾಡಿನಾದ್ಯಂತ ಪ್ರವಾಸ ಕೈಗೊಂಡಿದ್ದಾರೆ. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಗಣನೀಯವಾದ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಮುಂತಾದ ಹತ್ತು ಹಲವು ಪ್ರಶಸ್ತಿಗಳನ್ನು ಗೊ.ರು. ಚನ್ನಬಸಪ್ಪನವರು ಪಡೆದಿದ್ದಾರೆ.



**ಮೈಸೂರು ನಾಗರಾಜ್ :** ಖ್ಯಾತ ವಯೋಲಿನ್ ವಾದಕ ಮೈಸೂರಿನ ಎಂ. ನಾಗರಾಜ್ ಬಾಲಕಲಾವಿದರಾಗಿ ತಮ್ಮ ಒಂಭತ್ತನೇ ವಯಸ್ಸಿನಲ್ಲಿಯೇ ಅಸಾಧಾರಣ ಸಂಗೀತ ಪ್ರತಿಭೆಯನ್ನು ನಾಡಿನಾದ್ಯಂತ ಮೆರೆದರು. ಖ್ಯಾತ ವಯೋಲಿನ್ ವಾದಕ, ಸಂಗೀತ ವಿದ್ಯಾನಿಧಿ, ಪ್ರೊ.ಎಸ್. ಮಹಾದೇವಪ್ಪ ಅವರ ಪುತ್ರರೂ ಹಾಗೂ ಶಿಷ್ಯರೂ ಆಗಿ ಸಂಗೀತ ಕ್ಷೇತ್ರದ ಮೇರು ಕಲಾವಿದರಾಗಿ ಗುರುತಿಸಿಕೊಂಡ ಎಂ. ನಾಗರಾಜ ಹಾಗೂ ಅವರ ಸೋದರ ಎಂ. ಮಂಜುನಾಥ್ ಇಬ್ಬರೂ ಮೈಸೂರು ಸಹೋದರರು ಎಂದೇ ಖ್ಯಾತಿ ಗಳಿಸಿದ್ದಾರೆ. ತಾಳ, ಶೃತಿ ಬದ್ಧತೆ, ನಾದ ಲಯಗಳಲ್ಲಿ ಸೂಕ್ಷ್ಮತೆಯನ್ನು ಮೇಳೈಸಿಕೊಂಡ ಅನುಪಮ ಸಂಗೀತಗಾರರು. ಸದ್ಯ ಕರ್ನಾಟಕದಲ್ಲಷ್ಟೇ ಅಲ್ಲದೇ ದಕ್ಷಿಣ ಭಾರತದಲ್ಲಿ ಅತೀ ಬೇಡಿಕೆಯಲ್ಲಿರುವ ಕಲಾವಿದರೆಂದು ಖ್ಯಾತಿ ಪಡೆದಿದ್ದಾರೆ. ದೇಶದ "ಎ" ಗ್ರೇಡಿನ ಸಂಗೀತ ಕಲಾವಿದರಲ್ಲಿ ಅಗ್ರಗಣ್ಯರು. ಮೈಸೂರು ಸಹೋದರರೆಂದೇ ಹೆಸರು ಗಳಿಸಿದ ಇವರು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಅಮೆರಿಕ ಸಂಸ್ಥೆಯ ವಿಶ್ವಸಂಸ್ಕೃತಿಯು Excellance ಅವಾರ್ಡ್ ನೀಡಿ ಗೌರವಿಸಿದೆ. ಸಂಗೀತ ಸಾಮ್ರಾಟ್, ಸಂಗೀತ ರತ್ನ, ಗಣಕಲಾಶ್ರೀ ಮುಂತಾದ ಪ್ರಶಸ್ತಿಗಳನ್ನು ಕರ್ನಾಟಕ ರಾಜ್ಯ ನೀಡಿ ಗೌರವಿಸಿದರು. ದೇಶದ ಸಂಗೀತ ರಾಯಭಾರಿಗಳಾಗಿ ಮೈಸೂರು ನಾಗರಾಜ್ ಅಮೆರಿಕಾ, ಕೆನಡಾ, ಮಲೇಷಿಯಾ, ಸಿಂಗಾಪುರ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳಿಗೆ ತಮ್ಮ ಸಂಗೀತ ಕಾರ್ಯಕ್ರಮ ನೀಡಿ ನಮ್ಮ ಕರ್ನಾಟಕವಷ್ಟೇ ಅಲ್ಲದೇ ನಮ್ಮ ಭಾರತ ದೇಶದ ಹಿರಿಮೆಯನ್ನು ಮೆರೆದಿದ್ದಾರೆ.

**ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕೃತರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**



ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಉಪ ಮುಖ್ಯಮಂತ್ರಿಗಳಾದ ಕೆ.ಎಸ್. ಈಶ್ವರಪ್ಪ ಮತ್ತು ಆರ್. ಅಶೋಕ್, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಹಾಗೂ ಅನಂತ್‌ಕುಮಾರ್ ಅವರನ್ನು ಭೇಟಿ ಮಾಡಿದ ಸಂಘದ ಪದಾಧಿಕಾರಿಗಳು

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ : ಪುಟಾಣಿ ಅನೀಹ ಮಲ್ಯ
ಹಿಂಬದಿ ಚಿತ್ರ : ಕಲಾವಿದೆ ಜ್ಯೋತಿ ಪೊದ್ದಾರ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 23 ಸಂಚಿಕೆ 4
ಜನವರಿ 2013, ಬೆಲೆ ರೂ. 1

# ಮನದ ಮಾತು

"ಮಹಿಳೆಯರು ದುರ್ಬಲ ವರ್ಗದವರು ಎಂದು ಹೇಳುವುದು ಅಕ್ಷಮ್ಯ ಅಪರಾಧ; ಇದು ಪುರುಷರು ಮಹಿಳೆಗೆ ಮಾಡಿದ ಅನ್ಯಾಯ. ಶಕ್ತಿಯನ್ನು ನೀವು 'ಮೃಗೀಯತೆ'ಯಿಂದ ನಿರ್ಧರಿಸುವುದಾದರೆ, ಹೌದು ಮಹಿಳೆಯರಲ್ಲಿ ಮೃಗೀಯತೆ ಪುರುಷರಿಗಿಂತ ಕಡಿಮೆ. ಶಕ್ತಿಯನ್ನು ನೀವು ನೈತಿಕ ಸಬಲತೆಯಿಂದ ಅಳೆಯುವುದಾದರೆ ಮಹಿಳೆ ಅಪರಿಮಿತ ಶಕ್ತಿವಂತಳು ಹಾಗೂ ಪುರುಷನನ್ನು ಮೀರಿಸಬಲ್ಲಳು. ಮಹಿಳೆ ಇಲ್ಲದಿದ್ದರೆ ಪುರುಷನಿಗೆ ಅಸ್ತಿತ್ವವಿಲ್ಲ. ಅಹಿಂಸೆ ನಮ್ಮ ಬದುಕಿನ ನಿರ್ಣಾಯಕ ಅಧಿನಿಯಮವಾದಲ್ಲಿ ಭವಿಷ್ಯದ ದಿನಗಳಲ್ಲಿ ಮಹಿಳೆಯದ್ದೇ ಮೇಲುಗೈ"–ಮಹಾತ್ಮ ಗಾಂಧೀಜಿ

ಗಾಂಧೀಜಿಯವರ ಈ ಮಾತುಗಳನ್ನು ಗಾಂಧೀತತ್ವವನ್ನು ಬದಿಗಿಟ್ಟಂತೆ ಜನ ಮರೆತಿದ್ದಾರೆ. ಹೆಣ್ಣಿನ ಬಗ್ಗೆ ಗೌರವವಿರಲಿ ಕಿಂಚಿತ್ ಮಾನವೀಯತೆಯೂ ಇಲ್ಲದಂತಾಗಿದೆ. ಇದಕ್ಕೆ ನಿದರ್ಶನ–ಇಡೀ ದೇಶವನ್ನು ಬೆಚ್ಚಿ ಬೀಳಿಸಿದ ಹೆಣ್ಣೊಬ್ಬಳ ಅಮಾನುಷ ಅತ್ಯಾಚಾರ. ಇದು ನಡೆದದ್ದು ಈ ದೇಶದ ರಾಜಧಾನಿ ದೆಹಲಿಯಲ್ಲಿ !!!! 'ಇದೇನ ಸಭ್ಯತೆ? ಇದೇನ ಸಂಸ್ಕೃತಿ' ಎಂಬ ಹಳೆಯ ಕನ್ನಡ ಸಿನಿಮಾ ಹಾಡು ತತ್‌ಕ್ಷಣ ಗಂಟಲಾಳದಿಂದ ಹೊರಬಂದಿತು; ಕಣ್ಣ ಹನಿಗಳು ಉದುರಿದವು. ಒಬ್ಬ ಮುಗ್ಧ ಹೆಣ್ಣು ಮಗಳನ್ನು ಆರು ಜನ ಪಾತಕಿಗಳು ಬಸ್ಸೊಂದರಲ್ಲಿ ಹಿಂಸಿಸಿ ಅತ್ಯಾಚಾರವೆಸಗಿದ್ದು ಇಡೀ ದೇಶವನ್ನು ರೊಚ್ಚಿಗೆಬ್ಬಿಸಿತು. ದೇಹ ಮನಸ್ಸುಗಳನ್ನು ಆ ಪಾತಕಿಗಳು ಕಿತ್ತು ತಿಂದರೂ ಅಸಾಧಾರಣ ಮನೋಬಲದಿಂದ ಹೆಚ್ಚು ಕಡಿಮೆ ಎರಡು ವಾರ ಜೀವವನ್ನು ಹಿಡಿಯಾಗಿಟ್ಟುಕೊಂಡು ಆ ಕ್ರೂರಿಗಳಿಗೆ ಶಿಕ್ಷೆಯಾಗುವಂತೆ ಸಹಕರಿಸಿದ ಈ ಬಾಲೆಯ ಛಲ ನಿಜಕ್ಕೂ ಮೆಚ್ಚುವಂತಹದ್ದು. ಅಷ್ಟೇ ಅಲ್ಲ, ನಮ್ಮ ಯುವಕ ಯುವತಿಯರು ಲಕ್ಷ ಲಕ್ಷಗಟ್ಟಲೆ ಸೇರಿ ದನಿಯೆತ್ತಿ ಅವ್ಯಾಹತವಾಗಿ ದೇಶದಾದ್ಯಂತ ಜರುಗುತ್ತಿರುವ ಅತ್ಯಾಚಾರಕ್ಕೆ ಕಠಿಣ ಶಿಕ್ಷೆ ವಿಧಿಸಲು ಅವಶ್ಯಕವಾದ ಕಾನೂನು ರೂಪಿಸುವಂತೆ ಸರ್ಕಾರಕ್ಕೆ ತಾಕೀತು ಮಾಡಿದರು. ಮೊಟ್ಟಮೊದಲ ಬಾರಿಗೆ ಒಬ್ಬ ಅಮಾಯಕ ಬಡ ಹೆಣ್ಣು ಮಗಳ ಶೋಷಣೆಯ ವಿರುದ್ಧ ಜನತೆ ಅದರಲ್ಲೂ ಯುವ ಜನತೆ ಒಕ್ಕೊರಲಿನಿಂದ ಪ್ರತಿಭಟಿಸಿದ್ದು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆಯಿತು. ಯಾವುದೋ ಮೂಲೆಯಲ್ಲಿ, ಎಲ್ಲೋ ಒಂದು ಕಡೆ ನಡೆದಿರಬಹುದಾದ ಸಣ್ಣ ಘಟನೆಯೆಂದು ಲೀಲಾಜಾಲವಾಗಿರುತ್ತಿದ್ದ ಸರ್ಕಾರ ಮೈ ಕೊಡವಿಕೊಂಡು ಎಚ್ಚೆತ್ತಿತು. ಸಾಗರದ ಸುನಾಮಿಯಂತೆ ಧಾವಿಸುತ್ತಿದ್ದ ಯುವ ಜನತೆಯ ಆಕ್ರೋಶಕ್ಕೆ ಮಣಿದು ಓಬೀರಾಯನ ಕಾಲದ ಹಲ್ಲಿಲ್ಲದ ಕಾನೂನನ್ನು ಸದೃಢಗೊಳಿಸಲು ಕ್ಷಿಪ್ರ ತೀರ್ಮಾನಗಳನ್ನು ಕೈಗೊಂಡಿತು. ಈ ನಿಟ್ಟಿನಲ್ಲಿ ಕಾನೂನಾತ್ಮಕ ಸಲಹೆಗಳನ್ನು ಪಡೆಯಲು ಆಯೋಗವನ್ನು ರಚಿಸಿತು. ಅಷ್ಟೇ ಅಲ್ಲ, ಮರಣ ಶಯ್ಯೆಯಲ್ಲಿದ್ದ ಆ ಹೆಣ್ಣುಮಗಳನ್ನು ದೂರದ ಸಿಂಗಾಪುರಕ್ಕೆ ಉತ್ತಮ ಚಿಕಿತ್ಸೆಗಾಗಿ ಕರೆದೊಯ್ಯಿತು. ಆದರೆ ದುರಾದೃಷ್ಟವಶಾತ್ ಆ ದಿಟ್ಟ ಹೆಣ್ಣು ಮಗಳು ಪಾತಕಿಗಳ ಘೋರ ಕೃತ್ಯಕ್ಕೆ ಬಲಿಪಶುವಾದಳು. ಒಂದು ಭರವಸೆಯ ಸಂಗತಿಯೆಂದರೆ ಈ ಹುಡುಗಿಯ ಸಾವು ಅತ್ಯಾಚಾರದ ಕುರಿತು ಕಾನೂನು ಸದೃಢಗೊಳ್ಳಲು, ಮುಂದೆ ಇಂತಹ ಅಪರಾಧಗಳನ್ನು ಎಸಗುವವರಿಗೆ ಜೀವಭಯ ಹುಟ್ಟಿಸಲು ನಾಂದಿಯಾಯಿತು. ತ್ವರಿತ ಕಾನೂನು ಕ್ರಮ, ಅಪರಾಧಿಗಳಿಗೆ ಕಠಿಣ ಶಿಕ್ಷೆ, ಮಹಿಳೆಯರ ರಕ್ಷಣೆಗೆ ಸರ್ಕಾರ ಆದ್ಯತೆ ನೀಡಿ ಸೂಕ್ತ ಕ್ರಮಗಳನ್ನು ತತ್‌ಕ್ಷಣ ಕೈಗೊಳ್ಳಬೇಕು. ಆ ದಿಟ್ಟ ಹೆಣ್ಣುಮಗಳ ಬಲಿದಾನ ಮುಂಬರುವ ದಿನಗಳಲ್ಲಿ ಅವಳಂತಹ ಅಸಂಖ್ಯಾತ ಹೆಣ್ಣುಮಕ್ಕಳ ಸಂರಕ್ಷಣೆಗೆ ಬುನಾದಿಯಾಗಲಿ, ಮುಂದೆಂದೂ ಇಂತಹ ಘಟನೆ ಮರುಕಳಿಸದಿರಲಿ, ಎಂದೆಂದೂ ನಮ್ಮ ದೇಶದಲ್ಲಿ ಸ್ತ್ರೀ ಸಂಪೂರ್ಣ ಸುರಕ್ಷಿತಳು ಎಂದಾಗಲಿ ಎಂಬುದು ನಮ್ಮ ಕಳಕಳಿಯ ಮನವಿ.

"ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ"–ಮಹಿಳೆಗೆ ಪರಮಪೂಜ್ಯ ಸ್ಥಾನ ನಮ್ಮಲ್ಲಿದೆ. ಕ್ರೌರ್ಯದ ತುತ್ತತುದಿ ಎನ್ನಬಹುದಾದ ಈ ಘಟನೆ ನಮ್ಮ ಪರಂಪರೆ ಹಾಗೂ ಸಂಸ್ಕೃತಿಗೆ ಪರಕೀಯವಾದದ್ದು. ದೇವರಿರಬಹುದು, ದಾನವರಿರಬಹುದು–ಎಂದೂ ಈ ತೆರೆನ ಕ್ರೌರ್ಯ ಪ್ರಕಟಿಸಿಲ್ಲ. ರಾವಣಾಸುರ ಸೀತೆಯನ್ನು ಅಪಹರಿಸಿದರೂ ಆಕೆಯನ್ನು ಬಲಾತ್ಕಾರ ಮಾಡಲಿಲ್ಲ. ಅವಳಾಗಿ ಒಲಿಯುವವರೆಗೆ ಕಾಯುವ ನಿರ್ಧಾರ ಮಾಡಿದ್ದ. ಕೇವಲ ಸೀರೆ ಸೆಳೆದಿದ್ದಕ್ಕೆ ದುಶ್ಯಾಸನನಿಗೆ ಒದಗಿದ ಗತಿ, ದ್ರೌಪದಿ ಅಪರಾಧಿಯ ರಕ್ತದಿಂದ ತಲೆಸ್ನಾನ ಮಾಡದ ಹೊರತು ಮುಡಿ ಕಟ್ಟುವುದಿಲ್ಲ ಎಂಬ ಶಪಥ ತಳೆದದ್ದು–ನಮ್ಮ ಪರಂಪರೆಯಲ್ಲಿ ಅಪರಾಧಕ್ಕೆ ಒದಗುತ್ತಿದ್ದ ಘೋರ ಶಿಕ್ಷೆ ಹಾಗೂ ಈ ನಿಟ್ಟಿನಲ್ಲಿ ಮಹಿಳೆ ತಳೆಯುತ್ತಿದ್ದ ದಿಟ್ಟ ನಿಲುವುಗಳಿಗೆ ಸಾಕ್ಷಿಗಳಾಗಿವೆ. ಜೀವನವನ್ನು ರೂಪಿಸುವ, ಆ ಜೀವನಕ್ಕೆ ಶಕ್ತಿ ನೀಡುವ ಅಲೌಕಿಕ ಶಕ್ತಿಗಳನ್ನು ನಾವು ಲಕ್ಷ್ಮೀ, ಸರಸ್ವತಿ, ದುರ್ಗೆ ಮೊದಲಾದ ದೇವತೆಗಳೆಂದು ಪೂಜಿಸುತ್ತೇವೆ. ಕನ್ನಡ ನಾಡಿನಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ಸಮಾನತೆಯನ್ನು ಸಾರಿದ ಬಸವ, ಅಲ್ಲಮರ ಕಾಲದಲ್ಲಿ ಹೆಣ್ಣು ಹೇಗೆ ನಿರ್ಭಿಡೆಯಿಂದ ಧೀರೋದಾತ್ತವಾಗಿ ಬದುಕಿದಳು ಎಂಬುದಕ್ಕೆ ಮಹದೇವಿ ಅಕ್ಕಳೇ ಸಾಕ್ಷಿ. ತನ್ನೆಲ್ಲ ವಸ್ತ್ರಗಳನ್ನು ಬಿಸುಟು ಕೇವಲ ಮುಡಿಯ ಕೇಶರಾಶಿಯಿಂದ ತನ್ನ ಮೈ ಮುಚ್ಚಿಕೊಂಡು ಅಲೌಕಿಕ ಸತ್ಯಗಳನ್ನು ಆವಿಷ್ಕಾರಗೊಳಿಸಿಕೊಳ್ಳಲು ಸಾಧನೆಯ ಹಾದಿಯಲ್ಲಿದ್ದ ಅಕ್ಕಳನ್ನು ಆ ಸಮಯದ ಯಾವ ಗಂಡಸೂ ಅನ್ಯ ದೃಷ್ಟಿಯಿಂದ ಕಂಡ ನಿದರ್ಶನಗಳಿಲ್ಲ, ಪುರಾವೆಗಳಿಲ್ಲ. ಇದು ನಮ್ಮದು ಎಂತಹ ಆರೋಗ್ಯಕರ ಸಮಾಜ ಎಂಬುದನ್ನು ಸಾಬೀತುಪಡಿಸುತ್ತದೆ. ಇಂತಹ ಆರೋಗ್ಯಕರ ಪರಂಪರೆಯಿದ್ದರೂ ಕೆಲವು ಪ್ರಕ್ಷುಬ್ಧ, ವಿಕ್ಷಿಪ್ತ ಪುರುಷರು ತಮ್ಮ ವಿಕೃತತೆಯನ್ನು ತೋರುತ್ತಲೇ ಬಂದಿದ್ದಾರೆ. ಇದಕ್ಕೆ ಮುಖ್ಯ ಕಾರಣ–ಹೆಣ್ಣು ಮಕ್ಕಳ ಬಗ್ಗೆ ಅವರಿಗಿರುವ ಬೀಭತ್ಸ ದೃಷ್ಟಿಕೋನ. ಈ ಮನೋಭಾವ ಸಂಪೂರ್ಣ ಬದಲಾಗಿ ಮುಂಬರುವ ದಿನಗಳಲ್ಲಿ ಮಹಿಳೆ ನಿರ್ಭಯಳಾಗಿ, ನಿರಾಂತಕವಾಗಿ, ನೆಮ್ಮದಿಯಾಗಿ ಮುನ್ನಡೆಯಲಿ ಎಂಬುದು ನಮ್ಮ ಸದಾಶಯ.

ಹೆಣ್ಣು ಮಕ್ಕಳ ಅತ್ಯಾಚಾರದ ಅಕ್ಷಮ್ಯ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸಬೇಕು, ಅಪರಾಧಿಗಳಿಗೆ ಅವರ ಪುರುಷತ್ವವನ್ನೇ ಧ್ವಂಸಗೊಳಿಸುವ ಶಿಕ್ಷೆ ಕಡ್ಡಾಯವಾಗಬೇಕು. ಯಾವ ಪುರುಷತ್ವದ ಅಹಂಕಾರದಿಂದ ಅಪರಾಧವೆಸಗಿದನೋ ಆ ಪುರುಷತ್ವವೇ ಇಲ್ಲದಂತಾಗಿ ಜೀವನವಿಡೀ ನರಳಬೇಕು. ಆಗ, ಆಗ ಮಾತ್ರ ಈ ತೆರೆನ ಅಪರಾಧ ಎಸಗುವವರಿಗೆ ನಡುಕ ಹುಟ್ಟುತ್ತದೆ. ಹೆಣ್ಣು ಸುರಕ್ಷಿತಳಾಗುತ್ತಾಳೆ.

**2013 ಹೊಸ ಭರವಸೆಗಳನ್ನು ತರಲಿ, ಎಲ್ಲರಿಗೂ ನೆಮ್ಮದಿ ತರಲಿ ಎಂದು ಹಾರೈಸುತ್ತೇವೆ. ಸಂಕ್ರಾಂತಿ ಹಾಗೂ ಗಣರಾಜ್ಯೋತ್ಸವದ ಶುಭಾಶಯಗಳು.**

❑ ಉಷಾ ಭರತಾದ್ರಿ

ಅಂತರಾಳದಿಂದ...

# ದೆಹಲಿಯ ತಳಮಳ

ಹೊಸ ವರ್ಷದ ಹೊಸ್ತಿಲಲ್ಲಿ ನಾವೆಲ್ಲ ಹೊಸ ಆಶಯಗಳೊಂದಿಗೆ ಪ್ರತಿ ವರ್ಷದಂತೆ ಕಾದುಕೊಂಡು ಕುಳಿತಿದ್ದೇವೆ. ದೆಹಲಿ ಕನ್ನಡಿಗರೆಲ್ಲರಿಗೂ ಹೊಸ ವರ್ಷದ ಹರ್ಷೋಲ್ಲಾಸದ ಶುಭಾಶಯಗಳನ್ನು ಕೋರುವುದರೊಂದಿಗೆ ಈ ಬಾರಿಯ ಅಂತರಾಳವನ್ನು ಪ್ರಾರಂಭಿಸುತ್ತಿದ್ದೇನೆ.

ಜನವರಿ ತಿಂಗಳ ಗದಗುಟ್ಟಿಸುವ ಚಳಿಯೊಂದಿಗೆ ನಿಮ್ಮೆಲ್ಲರ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ತನ್ನ ಅರ್ಥಪೂರ್ಣ ಎರಡು ವರ್ಷಗಳ ಕಾರ್ಯಕಾಲವನ್ನು ಮುಗಿಸುತ್ತಿದೆ. ಹಲವಾರು ಹೊಸ ಆವಿಷ್ಕಾರಗಳನ್ನು ಹಾಗೂ ವಿವಿಧ ಜನಪರ ಸಾಂಸ್ಕೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಸಮಿತಿ ತನ್ನ ಎರಡು ವರ್ಷಗಳನ್ನು ತಮ್ಮೆಲ್ಲರೊಂದಿಗೆ ಕಳೆದಿದೆ. ಕರ್ನಾಟಕ ಸರಕಾರದ ವಿವಿಧ ಅಂಗಗಳ ಸಹಾಯಹಸ್ತವನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನಪಿಸಿಕೊಳ್ಳಬೇಕು. ಹಲವಾರು ಹಿರಿಯರು, ಕಿರಿಯರು, ಸಾಹಿತ್ಯದ ದಿಗ್ಗಜರು, ಸಾಂಸ್ಕೃತಿಕ ಜಗತ್ತಿನ ಮಹೋದಯರು, ರಾಜಕೀಯ ಮುತ್ಸದ್ದಿಗಳು ಹಾಗೂ...ಹೀಗೆ ಹತ್ತು ಹಲವಾರು ಕೈಗಳು ಕರ್ನಾಟಕ ಸಂಘವನ್ನು ಕಳೆದ ಈ ಎರಡು ವರ್ಷಗಳಲ್ಲಿ ಓಲೈಸಿವೆ. ಮುಖ್ಯವಾಗಿ ತಮಗೆ, ದೆಹಲಿ ಕನ್ನಡಿಗರಿಗೆ ನಮ್ಮೆಲ್ಲರ ಆತ್ಮೀಯ ನಮನಗಳು.

ಹೊಸ ವರುಷದಲ್ಲಿ ಈಗಾಗಲೇ ಹತ್ತಾರು ದಿನಗಳು ಉರುಳಿ ಹೋಗಿವೆ. ನಾವೆಲ್ಲ ಬಾರಿಬಾರಿ ನೆನಪಿಸಿಕೊಳ್ಳುವಂತೆ...ಈ ಕಾಲವೆಂಬುದು ಯಾರಿಗೂ ಕಾಯದು. ಮೊನ್ನೆಮೊನ್ನೆಯಷ್ಟೆ 2012 ಬಂದ ನೆನಪು. ಈಗಾಗಲೇ 2013 ದಾಪುಗಾಲಿಡುತ್ತ ನಡೆದು ಬಿಟ್ಟಿದೆ. ಈ ಕಾಲದ ಗತಿಯಲ್ಲಿ ನಾವೆಲ್ಲ ಒಂದು ಬಗೆಯ ತಳಮಳದಲ್ಲಿ ಸಿಲುಕಿಕೊಂಡಿದ್ದೇವೆ.

ಅದೂ ನಾವೆಲ್ಲ ಹಲವಾರು ವರ್ಷಗಳಿಂದ ಕಂಡ ಈ ದೆಹಲಿಯಲ್ಲಿ. ಕಳೆದ ನಾಲ್ಕಾರು ವಾರಗಳಿಂದ ದೆಹಲಿಯಲ್ಲಿ ಏನೆಲ್ಲ ಘಟನಾವಳಿಗಳು ನಡೆಯುತ್ತಿವೆ? ಅದಕ್ಕೆ ಜನಮನಗಳು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿವೆ? ಒಟ್ಟಾರೆ ನಮ್ಮ ದೇಶದ ಸಮುದಾಯದ ಮಾನಸಿಕ ಸ್ಥಿತಿಯನ್ನು ಕಲುಕಿಸುವ ಘಟನೆಯ ಹಿನ್ನೆಲೆಯಲ್ಲಿ ನಾವು ಹೊಸ ವರ್ಷದ ಉಡಿಯಲ್ಲಿ ಕಾಲಿಡುತ್ತಿದ್ದೇವೆ. ಒಂದು ಬಗೆಯ ವೈರುಧ್ಯ ನಮ್ಮನ್ನು ಕಾಡುತ್ತಿದೆ. ಆರ್ಥಿಕ ಬೆಳವಣಿಗೆಯ ಕನಸು ಒಂದೆಡೆ. ಸಮಾಜದ ಬೇರುಗಳಲ್ಲಿ ಆಳವಾಗಿ ಇಳಿದ ಗೀರುಗಳು. ಈ ಗೀರುಗಳನ್ನು ಅಳಿಸಿಕೊಳ್ಳಲಾಗದೆ ನಾವೆಲ್ಲ ಹಪಹಪಿಸುತ್ತೀದ್ದೇವೆ. ದೆಹಲಿಯಲ್ಲಿ ನಡೆದ ಒಂದು ಘಟನೆಯಿಂದಾಗಿ ಈ ಸಾಮಾಜಿಕ ಹಾಗೂ ಮಾನಸಿಕ ಸತ್ಯಗಳು ನಮ್ಮೆಲ್ಲರ ಎದುರಿಗೆ ಹಿಡಿದ ಕನ್ನಡಿಯಂತಿದೆ. ರಾಜಕೀಯದವರು, ಕಾನೂನಿನ ಸೂತ್ರ ಹಿಡಿದವರು, ಪೋಲಿಸರು, ಸರಕಾರದವರು, ಓದುಗರು, ಬರೆಯುವವರು, ದೆಹಲಿಗರು, ದೇಶದವರು...ಒಟ್ಟಾರೆ ಎಲ್ಲರೂ ಪ್ರತಿಕ್ರಿಯಿಸುತ್ತಿದ್ದಾರೆ. ಕಳೆದು ಹೋಗುತ್ತಿರುವ ಸಂವೇದನಾಶೀಲತೆಯ ಹುಡುಕಾಟದಲ್ಲಿ ನಾವೆಲ್ಲ ಇದ್ದೇವೆ. ದಿನನಿತ್ಯದ ಜಂಜಡದಲ್ಲಿ ಈ ಸಂವೇದನಾಶೀಲತೆಗೆ ನಮಗೆ ವ್ಯವದಾನವೆಲ್ಲಿದೆ?

ಬರಿ ಒಣ ಮಾತುಗಳನ್ನೇ ಬರೆಯುವದರಲ್ಲಿ ಯಾವ ಅರ್ಥವಿದೆ? ನನ್ನ ನೆನಪಿನ ಬುತ್ತಿಯಿಂದ ನಡೆದ ಒಂದು ಘಟನೆಯನ್ನು ಇಲ್ಲಿ ತೆಗೆದಿಡುವುದು ಉಚಿತ. ಸುಮಾರು ಎರಡು ವರ್ಷಗಳ ಹಿಂದೆ ನವದೆಹಲಿಯ ರೈಲ್ವೇ ನಿಲ್ದಾಣದಲ್ಲಿ ನಡೆದದ್ದು. ಯಾರೊ ಸ್ನೇಹಿತರನ್ನು ಬೀಳ್ಕೊಡಲು ನಿಲ್ದಾಣಕ್ಕೆ ನಾನು ಮತ್ತು ನನ್ನ ಹೆಂಡತಿ ಹೋಗಿದ್ದೇವು. ಪ್ಲಾಟ್‌ಫಾರಂನಲ್ಲಿ ಎಂದಿನ ಗಿಜಿಬಿಜಿ. ನೂರಾರು ಜನ ರೈಲು ಹತ್ತಲು ಕಾತುರರಾಗಿದ್ದರು. ನಾವು ಗಡಿಬಿಡಿಯಿಂದ ಬೋಗಿಯನ್ನು ಹುಡುಕುತ್ತ ಬರುತ್ತಿರುವಾಗ ಕಂಡ ದೃಶ್ಯ ನಮ್ಮನ್ನು ವಿಚಲಿತಗೊಳಿಸಿತು. ಈ ಪ್ಲಾಟ್‌ಫಾರಂನಲ್ಲಿ ಮಧ್ಯ ವಯಸ್ಸಿನ ಮಹಿಳೆಯೊಬ್ಬಳು ಅರೆಬರೆ ಜಾಗೃತ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದಳು. ಮಲಗಿದ್ದಲ್ಲೆ ಅವಳಿಗೆ ಅರಿವಿಲ್ಲದೆ ಮೂತ್ರ ವಿಸರ್ಜನೆಯೂ ಆದಂತಿತ್ತು. ಆಗಾಗ್ಗೆ ಏನೊ ಕನವರಿಸುವಂತಹ ಸದ್ದು ಅವಳಿಂದ ಹೊರಡುತ್ತಿತ್ತು. ಸ್ವಲ್ಪ ಸ್ಥೂಲಕಾಯ, ಉಟ್ಟಿದ್ದ ಸೀರೆಯೂ ಅಲ್ಲಲ್ಲಿ ಒದ್ದೆಯಾಗಿತ್ತು. ಪ್ರಪಂಚದ ಅರಿವೆ ಇಲ್ಲದೆ ಅವಳು ಮಲಗಿಕೊಂಡಿದ್ದಳು. ಅವಳು ಎಲ್ಲಿಂದಲೋ ಬಂದ ಪ್ರಯಾಣಿಕಳಂತೆ ನಮಗೆ ತೋರುತ್ತಿದ್ದಳು. ಅವಳು ಸುತ್ತಿಕೊಂಡು ಮಲಗಿದ್ದ ಸೀರೆಯನ್ನು ಕಂಡಾಗ ನವದೆಹಲಿಯ ನಿಲ್ದಾಣದ ನೂರಾರು ನೊಂದಬೆಂದ ಜೀವಿಗಳಂತೆ ತೋರಲಿಲ್ಲ. ಎಲ್ಲಿಂದಲೋ ಬಂದವಳು ಯಾವುದೋ ಆರೋಗ್ಯದ ಏರುಪೇರಿನಿಂದಾಗಿ ಪ್ಲಾಟ್‌ಫಾರಂನ ಮೇಲೆ ಎಚ್ಚರತಪ್ಪಿ ಉರುಳಿಕೊಂಡಿದ್ದಳು. ಆದರೂ ನೂರಾರು ನಮ್ಮಂತಹ ಜನ ಏನೂ ಆಗದವರಂತೆ ಓಡಾಡಿಕೊಂಡಿದ್ದರು. ರೈಲ್ವೆ ನಿಲ್ದಾಣವೆಂದರೆ ಇಂತಹದು ಆಗುತ್ತಲೆ ಇರುತ್ತದೆ ಎಂಬ ಭಾವ ಅಲ್ಲಿದ್ದವರಿಗೆ ಇದ್ದಂತಿತ್ತು. ನನ್ನ ಹೆಂಡತಿಗಂತೂ ತೀರಾ ಕಸಿವಿಸಿಯಾಗಿ ಏನಾದರೂ ಸಹಾಯ ಮಾಡಬೇಕೆಂಬ ಹಂಬಲ. ನಾವು ಅಲ್ಲೆ ಹತ್ತಿರದಲ್ಲಿದ್ದ ಟಿಸಿಯ ಬಳಿ ಅವಳ ಪಾಡನ್ನು ವಿವರಿಸಿ ಯಾರೊ ಸಂಬಂಧಪಟ್ಟವರಿಗೆ ತಿಳಿಸುವಂತೆ ಕೇಳಿಕೊಂಡದ್ದಾಯಿತು. ಅವನು ಇದು ತನ್ನ ಸುಪರ್ದಿಯಲ್ಲಿ ಬರುವ ಕೆಲಸವಲ್ಲವೆಂದು ಹೇಳಿಕೊಂಡು ಮುಖ ತಿರುವಿ ಹೊರಟಿದ್ದು ಸಹಜ ವರ್ತನೆಯೆಂದು ಅಂದುಕೊಳ್ಳೋಣವೆ? ಯಾರ ಬಳಿ ಹೇಳುವುದು. ಮೈ ಸವರಿಕೊಂಡು ಹೋದ ಕೋವಿಧಾರಿ ಪೋಲಿಸನವನನ್ನು ಕೇಳಿದಾಗ 'ಪಹಾಡ್‌ಗಂಜ್ ಬದಿಯಲ್ಲಿರುವ ರೈಲ್ವೆ ಪೋಲಿಸರಿಗೆ ರಿಪೋರ್ಟ್ ಮಾಡಿದರೆ ಅವರು ಏನಾದರೂ ಮಾಡಿಯಾರು' ಎಂದು ರಾಗವೆಳೆದ. ನಾವು ಬಂದ ಕೆಲಸ ಮುಗಿದಿತ್ತು. ನಾವು ಬೀಳ್ಕೊಡಲು ಬಂದಿದ್ದವರ ರೈಲು ನಿಧಾನವಾಗಿ ಹೊರಟು ಹೋಗಿತ್ತು. ಬೀಸುವ ಗಾಳಿ ಪ್ಲಾಟ್‌ಫಾರಂನ ಮೇಲೆ ರಪ್ ಎಂದು ರಾಚತೊಡಗಿತ್ತು,

ಈ ಘಟನೆಯ ತಳ ಮುಟ್ಟುವ ಛಲದಿಂದ ನಾವು ಪಹಾಡ್‌ಗಂಜ್‌ನ ಬದಿಯಿರುವ ರೈಲ್ವೆ ಪೋಲಿಸರ ಕಛೇರಿಯನ್ನು ಹುಡುಕಿಕೊಂಡು ಹೋದೆವು. ಅಲ್ಲಿ ಒಬ್ಬಿಬ್ಬ ಪೋಲಿಸರು ಕೂತುಕೊಂಡು ಹರಟೆ ಹೊಡೆಯುತ್ತಿದ್ದರು. ನಾವು ಹೇಳಿದ ವಿಚಾರವನ್ನು ಕೇಳಿ ಅವರೇನೂ ವಿಚಲಿತರಾಗಲಿಲ್ಲ. ನಮ್ಮದೇ ಅತಿಯಾಗಿ ಹೋಯಿತೇನೋ ಎಂಬ ಭಾವ ನಮಗೆ ಉದಿಸಿತು.'ಆಸ್ಪತ್ರೆಗೆ ಸುದ್ದಿ ಮುಟ್ಟಿಸಿದ್ದೇವೆ. ಸ್ಟ್ರೆಚರ್, ನರ್ಸುಗಳು ಎಲ್ಲ ಬರ್ತಾ ಇದ್ದಾರೆ. ಚಿಂತೆ ಮಾಡಬೇಡಿ' ಎಂಬ ತಾಕೀತು ಬೇರೆ ನಮಗೆ. 'ಯಾರಾದರೂ ಬರುವವರೆಗೂ ನಾವು ಅಲ್ಲಿಂದ ಕಾಲುಕೀಳುವುದಿಲ್ಲ' ಎನ್ನುತ್ತ ನಾವು ಕುಳಿತುಕೊಂಡಾಗ ಅವರ ಚಟುವಟಿಕೆಯ ಬಗೆಯಲ್ಲಿ ಲವಲವಿಕೆ ಕಾಣಿಸಿತು. ಕೆಲಹೊತ್ತಿನಲ್ಲಿ ಪ್ಲಾಟ್‌ಫಾರಂನಲ್ಲಿ ಮಲಗಿದ್ದವಳನ್ನು ಸ್ಟ್ರೆಚರ್‌ನ ಮೂಲಕ ಕರೆದೊಯ್ಯಲಾಯಿತು. ನಂತರದಲ್ಲಿ ನಮ್ಮನ್ನು ಅಲ್ಲಿಇಲ್ಲಿ ಪೋಲಿಸು ಠಾಣೆಗೆ ಬನ್ನಿ ಎನ್ನುತ್ತಾರೇನೊ ಅಂದುಕೊಂಡಿದ್ದೆವು. ಹಾಗೇನೂ ಮಾಡಲಿಲ್ಲ. ಒಂದು ಬಗೆಯ ಉದಾಸೀನತೆ ಅವರ ಮಾತಿನಲ್ಲಿ ಗೋಚರವಾಗುತ್ತಿತ್ತು.

ದಿನಾಲು ಇದೇ ಕೆಲಸದಲ್ಲಿರುವವರಿಗೆ ಈ ಬಗೆಯ ಸಮಸ್ಯೆಗಳು ಹಾಗೂ ಘಟನೆಗಳು ಯಾವ ರೀತಿಯ ಸಂವೇದನಾಶೀಲತೆಯನ್ನು ಹುಟ್ಟು ಹಾಕುವುದಿಲ್ಲ. ಯಾಕೆ ಹೀಗಾಗುತ್ತದೆ ಎಂಬುದಕ್ಕೆ ಮಾನಸಿಕ ತಜ್ಞರೇ ಉತ್ತರ ಹೇಳಬೇಕು.

ನಾವು ಬಹುಬೇಗ ಈ ಕುರಿತಾದ ವಿಚಾರಗಳಿಗೆ, ಘಟನೆಗಳಿಗೆ ಸಂವೇದನಾಶೀಲತೆಯನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಘಟನೆಗಳನ್ನೇ ನೋಡಿದರೆ ಸಾಕು. ನಾವು ಬೆಳವಣಿಗೆಯೆಂಬ ಮಾಂತ್ರಿಕ ಶಕ್ತಿಯ ಅಡಿಯಾಳಾಗಿದ್ದೇವೆ. ಬೇರೇನೂ ಕಾಣುತ್ತಿಲ್ಲ. ಹಿಂಸೆಯ ಪರಿಗಳು ಹೆಚ್ಚುತ್ತಿವೆ. ಅದರ ರೂಪಗಳು ಇನ್ನೂ ವಿಚಿತ್ರವಾದ ಬಣ್ಣಗಳನ್ನು ಪಡೆಯುತ್ತಿವೆ. ದೆಹಲಿಯ ಘಟನೆಗಳು ಈ ಕುರಿತಾಗಿ, ನಮ್ಮ ಸಮಾಜದ ಈ ಬಗೆಯ ಸಮಸ್ಯೆಗಳ ಬಗೆಗೆ ನಮ್ಮನ್ನು ವಿಚಾರ ಮಾಡಲು ಹಚ್ಚಿವೆ. ಅದು ಸಾಂಕೇತಿಕವಾಗಬಾರದು. ಒಂದು ಬಗೆಯ ಉದ್ವೇಗದ ಪ್ರತಿಕ್ರಿಯೆಯಾಗಿ ಅದು ಪರಿಣಮಿಸಬಾರದು. ಬದಲಾವಣೆಗೆ ಇದು ಸೂತ್ರವಾಗಬೇಕು. ಆದರೆ, ಇದು ಅಷ್ಟೊಂದು ಸುಲಭವೂ ಅಲ್ಲ. ಸಾವಿರಾರು ವರ್ಷಗಳ ಸ್ವಭಾವ ಹತ್ತಾರು ವರ್ಷಗಳಲ್ಲಿ ಬದಲಾಗುವುದಿಲ್ಲ. ಇದೊಂದು ಪ್ರಾರಂಭ. 2013 ರಲ್ಲಿ ಇದಕ್ಕೊಂದು ಹೊಸ ರೂಪ ದೊರೆಯಲಿ ಎಂದು ನಾವೆಲ್ಲ ಹಾರೈಸೋಣ.

ಬರೀ ಚರ್ಚೆಗಳಲ್ಲೇ ನಮ್ಮ ಶಕ್ತಿಗಳೆಲ್ಲ ವ್ಯಯವಾಗಿ ಹೋದರೆ ಏನು ಉಪಯೋಗ? ಕಾನೂನಿನಲ್ಲಿ ಬದಲಾವಣೆಯ ಅಗತ್ಯವಿದೆ. ಜನಕ್ಕೆ ಪೋಲಿಸರೆಂದರೆ ಅಂತಹ ಭಯವೇನೂ ಇಲ್ಲ. ಆದರೆ, ಪೋಲಿಸರ ಹಿಡಿತದಲ್ಲಿ ಸಿಕ್ಕು, ಹತ್ತಾರು ಬಾರಿ ಕಛೇರಿ–ಕೋರ್ಟು ಅಂತ ಅಲೆಯಲು ಯಾರಿಗಿದೆ ವ್ಯವಧಾನ? ಅದಕ್ಕೆ ನಾವೆಲ್ಲ ಈ ಬಗೆಯ ಘಟನೆಗಳಿಂದ ದೂರದೂರವಿರುತ್ತೇವೆ. ಆದರೆ, ಈ ಬಗೆಯ ಘಟನೆಗಳಿಂದ ನಾವ್ಯಾರು ದೂರವಿಲ್ಲ. ನಮ್ಮ ಮೂಗಿನ ನೇರಕ್ಕೇನೆ ಈ ಬಗೆಯ ಘಟನೆಗಳು ನಡೆಯುತ್ತಿವೆ. ನಮ್ಮ ಮನೆಯ ಅಂಗಳದಲ್ಲೇ ನಡೆಯುತ್ತಿವೆ. ಕಣ್ಣು ಮುಚ್ಚಿಕೊಂಡು ಎಲ್ಲಿಯ ತನಕ ಕುಳಿತರಯ್ಯಾ?

❑ ಡಾ। ವೆಂಕಟಾಚಲ ಹೆಗಡೆ

## ಮುನ್ನೋಟ

ಆತ್ಮೀಯ ಕನ್ನಡಿಗರಿಗೆ ಗಣರಾಜ್ಯೋತ್ಸವದ ಶುಭಾಶಯಗಳು. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಅದ್ಭುತವಾಗಿ ನಡೆಯುತ್ತಿವೆ. ಈ ಬಾರಿಯ 'ಹೊರನಾಡ ಕನ್ನಡಿಗರ ಕನ್ನಡ ಸಂಸ್ಕೃತಿ ಉತ್ಸವ' ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮತ್ತು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಡಿಸೆಂಬರ್ 15ರಂದು ನಡೆಯಿತು. ಸಂಸ್ಕೃತಿ ಉತ್ಸವದಲ್ಲಿ ಕರ್ನಾಟಕದಿಂದ ನೂರಕ್ಕೂ ಹೆಚ್ಚು ಜಾನಪದ ಕಲಾವಿದರು ಪಾಲ್ಗೊಂಡಿದ್ದರು.

ದೆಹಲಿ ಕರ್ನಾಟಕ ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವ ನಮ್ಮವರೇ ಆದ ಡಾ. ವೈ. ಅವನೀಂದ್ರನಾಥ್ ರಾವ್ ಅವರಿಗೆ ಡಾಕ್ಟರೇಟ್ ಸಿಕ್ಕಿರುವುದು ನಮ್ಮ ಕನ್ನಡಿಗರೆಲ್ಲರಿಗೂ ಸಂತೋಷದ ವಿಷಯ. ಇವರಿಗೆ ಸಂಘದ ಪರವಾಗಿ ಅಭಿನಂದನೆಗಳು ಹಾಗೂ ತಮ್ಮೆಲ್ಲರ ಪರವಾಗಿ ಅವನೀಂದ್ರನಾಥ್ ರಾವ್ ಅವರಿಗೆ ಅಭಿನಂದನೆಗಳು.

ಫೆಬ್ರವರಿ 1ರಿಂದ 15ರವರೆಗೆ ಸೂರಜ್‌ಕುಂಡ್‌ನಲ್ಲಿ ನಡೆಯಲಿರುವ ಮೇಳದಲ್ಲಿ ಈ ಬಾರಿ ನಮ್ಮ ಕರ್ನಾಟಕ ರಾಜ್ಯವನ್ನು ಫೋಕಸ್ ಸ್ಟೇಟ್ ಆಗಿ ಪರಿಗಣಿಸಿದ್ದಾರೆ. 1987ರ ನಂತರ ಈ ಬಾರಿಯ ಸೂರಜ್‌ಕುಂಡ್ ಮೇಳದ ಹೆಚ್ಚುವರಿ ಕೆಲಸಗಳು ಹಾಗೂ ಎಲ್ಲಾ ಕೆಲಸ ಕಾರ್ಯಗಳನ್ನು ಕರ್ನಾಟಕಕ್ಕೆ ನೀಡಲಾಗಿದೆ. ಈ ಬಾರಿ ಸುಮಾರು 12 ದೇಶಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು ಕರ್ನಾಟಕದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಕನ್ನಡ ಚಲನಚಿತ್ರ ಮಂಡಳಿ ಹಾಗೂ ಇನ್ನೂ ಹಲವಾರು ಇಲಾಖೆಗಳು ಇದರಲ್ಲಿ ಭಾಗವಹಿಸಲಿವೆ. ದೆಹಲಿ ಮತ್ತು ಸುತ್ತಮುತ್ತಲಿನ ಎಲ್ಲಾ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

ಸಂಘದಲ್ಲಿ ಇನ್ನೂ ಸಾಕಷ್ಟು ಕಾರ್ಯಕ್ರಮಗಳು ನಡೆಯಬೇಕಾಗಿದೆ. ಈ ಬಾರಿಯ ಸಂಘದ ವಾರ್ಷಿಕೋತ್ಸವದ ಆಟೋಟ ಸ್ಪರ್ಧೆಗಳು, ಅಂಬಿಕೇಶ್ ಕ್ರಿಕೇಟ್ ಪಂದ್ಯಾವಳಿ ನಡೆಯಬೇಕಾಗಿವೆ. ಹಾಗೆ ಇದೆಲ್ಲದರ ಜೊತೆಗೆ ಜನವರಿ 9ಕ್ಕೆ ಸಂಘದ ಈಗಿನ ಕಾರ್ಯಕಾರಿ ಸಮಿತಿಯ ಅವಧಿ ಪೂರ್ಣಗೊಂಡಿದೆ. ಈ ಎರಡು ವರ್ಷದಲ್ಲಿ ನಮಗೆ ಸಾಧ್ಯವಾದ ಉತ್ತಮ ಕಾರ್ಯಕ್ರಮಗಳು ಹಾಗು ಉತ್ತಮ ಆಡಳಿತವನ್ನು ನೀಡುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಇದಕ್ಕೆ ಸಹಕರಿಸಿದ ಕಾರ್ಯಕಾರಿ ಸಮಿತಿಯ ಎಲ್ಲರಿಗೂ ಹಾಗೂ ತಮಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

❑ ಸಿ. ಎಂ. ನಾಗರಾಜ

# ವಚನಗಾನಾಮೃತದ ಸವಿ ನೀಡಿದ

## ಕು. ಪೂಜ್ಯಾ ಮೋಹನ್




ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ ಯಮುನೆಯ ತಡಿಯಲ್ಲಿ ಕನ್ನಡ ನುಡಿ–ಸಾಂಸ್ಕೃತಿಕ ಮಾಲಿಕೆಯಲ್ಲಿ ಡಿಸೆಂಬರ್ 8, ಶನಿವಾರದಂದು ತುಮಕೂರಿನ ಕು. ಪೂಜ್ಯಾ ಮೋಹನ್ ಅವರು ಸುಮಧುರವಾದ ವಚನ ಹಾಗೂ ಕೆಲವು ಜನಪ್ರಿಯ ಭಾವಗೀತೆಗಳ ಗಾಯನವನ್ನು ನಡೆಸಿಕೊಟ್ಟರು. ಅರ್ಥಪೂರ್ಣವಾದ ಗೀತೆಗಳನ್ನು ಭಾವಪೂರ್ಣವಾಗಿ ಪ್ರಸ್ತುತಪಡಿಸಿದ ಪೂಜ್ಯಾ ಅವರೊಡನೆ ಅವರ ತಾಯಿ ಶ್ರೀಮತಿ ವೀಣಾ ಮೋಹನ್ ಅವರೂ ತಮ್ಮ ಸುಶ್ರಾವ್ಯ ಗೀತಗಾಯನ ನೀಡಿದರು. ಇವರಿಗೆ ಸುಬ್ರಹ್ಮಣ್ಯಂ ಎಚ್.ಸಿ.–ಕೀಬೋರ್ಡ್‌ನಲ್ಲಿ, ಹರೀಶ್ ಬಿದರೆ ಮ್ಯಾಂಡೋಲಿನ್‌ನಲ್ಲಿ ಹಾಗೂ ತಬಲಾದಲ್ಲಿ ಜಯಚಂದ್ರ ಅವರು ಸಾಥ್ ನೀಡಿದರು.

ಸಂಗೀತ ಮನೆತನದ ನಾಲ್ಕನೇ ತಲೆಮಾರಿನ ಯುವ ಗಾಯಕಿ ಕು. ಪೂಜ್ಯಾ ಸಂಗೀತ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ಮಹಾನ್ ಪ್ರತಿಭಾವಂತ ಕಲಾವಿದೆ. ಕೆ.ಎನ್. ಮೋಹನ್ ಪ್ರಸಾದ್ ಹಾಗೂ ಸಂಗೀತ ವಿದೂಷಿ ವೀಣಾ ಮೋಹನ್‌ರವರ ಪುತ್ರಿಯಾದ ಈಕೆ ಕರ್ನಾಟಕದ ಶಾಸ್ತ್ರೀಯ ವಿದ್ವತ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಕರ್ನಾಟಕಾದ್ಯಂತ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿ ಜನಮನ್ನಣೆ ಪಡೆದಿರುವ ಪೂಜ್ಯಾ ಅವರು ಇತ್ತೀಚೆಗೆ ಅಮೇರಿಕಾದ 'ಅಕ್ಕಾ' ಸಮಾವೇಶದಲ್ಲಿ ಕೂಡಾ ಸುಗಮ ಸಂಗೀತ ಕಾರ್ಯಕ್ರಮವನ್ನು ನೀಡಿದ್ದಾರೆ.

ಮ್ಯಾಂಡೋಲಿನ್ ವಾದಕ ಹರೀಶ್ ಬಿದರೆ ಅವರೂ ಕೂಡ ಕೆಲವು ಶಿಶುನಾಳ ಷರೀಫರ ತತ್ವಪದಗಳನ್ನು ಮನದುಂಬಿ ಹಾಡಿ ಪ್ರಶಂಸೆಗೆ ಪಾತ್ರರಾದರು.

ಕು. ಪೂಜ್ಯಾ ಮೋಹನ್ ಮತ್ತು ತಂಡದವರ ಇಂಪಾದ ಸಂಗೀತ ಸಂಜೆ ದೆಹಲಿ ಕನ್ನಡಿಗರಿಗೆ ಮುದ ನೀಡಿತು.

### ದೆಹಲಿ ಕರ್ನಾಟಕ ಸಂಘ

**ಜನವರಿ 20 ಭಾನುವಾರ**
**ಸಂಜೆ 5 ಗಂಟೆಗೆ**
**ಸ್ಥಳ: ಸಂಘದ ಸಭಾಂಗಣ**

**'ಕಿನ್ನರ ಮೇಳ' ಹೆಗ್ಗೋಡು ಅರ್ಪಿಸುವ**
**ಏಕವ್ಯಕ್ತಿ ನಾಟಕ**

## ಗಿರಿಬಾಲೆ

**ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಅವರ ಆತ್ಮಕಥೆ**

ನಿರೂಪಣೆ : ವೈದೇಹಿ
ಅಭಿನಯ : ಸುಶೀಲ ಕೆಳಮನೆ
ನಿರ್ದೇಶನ : ಬಿ.ಆರ್. ವೆಂಕಟರಮಣ ಐತಾಳ

## ಹಾಗೂ

**ನಿರಂತರ ಫೌಂಡೇಶನ್, ಮೈಸೂರು**
**ಅರ್ಪಿಸುವ ನಾಟಕ**

## ಶಿವರಾತ್ರಿ

ರಚನೆ : ಡಾ. ಚಂದ್ರಶೇಖರ ಕಂಬಾರ
ರಂಗವಿನ್ಯಾಸ : ಇಕ್ಬಾಲ್ ಅಹಮದ್
ನಿರ್ದೇಶನ : ಚಿದಂಬರ ರಾವ್ ಜಂಬೆ

## ಎಲ್ಲರಿಗೂ ಸುಸ್ವಾಗತ

**ಡಾ.ವೆಂಕಟಾಚಲ ಹೆಗಡೆ**
ಅಧ್ಯಕ್ಷರು


**ಸಿ ಎಂ ನಾಗರಾಜ**
ಪ್ರಧಾನ ಕಾರ್ಯದರ್ಶಿ

# ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ನಾಟಕಕಾರ, ಕವಿ ಎಚ್.ಎಸ್. ಶಿವಪ್ರಕಾಶ್ ಅವರ 'ಮಬ್ಬಿನ ಹಾಗೆ ಕಣಿವೆಯಾಸಿ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2012ನೇ ಸಾಲಿನ ಪ್ರಶಸ್ತಿ ದೊರೆತಿದೆ. ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.**

**ಯುವ ಲೇಖಕರ ಸಾಲಿನಲ್ಲಿ ಆರಿಫ್ ರಾಜಾ ಅವರ 'ಜಂಗಮ ಫಕೀರನ ಜೋಳಿಗೆ' ಕವನ ಸಂಕಲನಕ್ಕೆ ಅಕಾಡೆಮಿಯ 2012ನೇ ಸಾಲಿನ 'ಯುವ ಪುರಸ್ಕಾರ' ನೀಡಲಾಗಿದ್ದು, 50 ಸಾವಿರ ರೂಪಾಯಿ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.**

**ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮಾನಪೂರ್ವಕ ಅಭಿನಂದನೆಗಳು**



## 'ಮಬ್ಬಿನ ಹಾಗೆ ಕಣಿವೆಯಾಸಿ' ಕವನ ಸಂಕಲನ

### ಲೇಖಕ : ಡಾ. ಎಚ್.ಎಸ್. ಶಿವಪ್ರಕಾಶ್

### ಹರಿ ನೀ ಹೊರಜಗಕೆ

*ಜಗದ ಜನವು ತನ್ನಲ್ಲಿನ ಹೊರೆ ಹೊರೆ*
*ತಾಳಲಾರದೆದೆಯು ಕುಸಿದು ಬೀಳುತಿರೆ*
*ನೀನು ನಿನ್ನ ಎದೆಬಾವಿಗೆ ನೋವಿಗೆ*
*ಕೊರಗಿ ಕೊರಗಿ ನಿನ್ನೂಹೆಯ ದೀವಿಗೆ*
*ಹಿಡಿದು ನಡೆವೆನೆಂದೆನುವೆಯ ಸಗ್ಗಕೆ ?*
*ಕನಸು ಸಮೆದ ಮಳೆಬಿಲ್ಲಿನ ಅಗ್ಗಕೆ ?*
*ಹರಿ ನೀ ಹೊರಜಗಕೆ*
*ಬಯಲಿನ ಸಮತಳಕೆ*
*'ಎಲೆ ಕವಿ'*

**– ಗೋಪಾಲಕೃಷ್ಣ ಅಡಿಗ**

ಕನ್ನಡ ಸಾಹಿತ್ಯದ ಅತ್ಯಂತ ಪ್ರಜ್ಞಾಶೀಲ ಹಾಗೂ ಸಂವೇದನೆಯ ಕವಿ ಎಚ್. ಎಸ್. ಶಿವಪ್ರಕಾಶರ ಹೊಸ ಕವನ ಸಂಕಲನ ಹೊರಬರುತ್ತಿರುವುದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಒಂದು ಸಂಭ್ರಮದ ಸಮಯ.

'ಮಬ್ಬಿನ ಹಾಗೆ ಕಣಿವೆಯಾಸಿ' ಶಿವಪ್ರಕಾಶರ ಅನುಭವಗಳ, ಅನುಬಂಧಗಳ, ಅನುಮಾನಗಳ, ಅನ್ವೇಷಣೆಗಳ, ಅನುಕಂಪಗಳ ಹೂರಣ. ಜೀವದ ಆಳಕ್ಕೆ ಹೋಗುವ ಈ ಕೃತಿ ಶಿವಪ್ರಕಾಶರ ತೀಕ್ಷ್ಣದೃಷ್ಟಿಯಲ್ಲಿ ಯಾವುದೇ ಸಣ್ಣ ವಿಷಯವೂ ಕವನಕ್ಕೆ ಗಹನ ವಸ್ತುವಾಗಬಲ್ಲದು. ಜನಜಂಗುಳಿಯ ಮಧ್ಯೆ, ನೆಂಟರಿಷ್ಟರ ಮಧ್ಯೆ, ಪ್ರೀತಿಸುವವರ ಮಧ್ಯೆ, ಅಭಿಮಾನಿಗಳ ಒಡನಾಟದಲ್ಲಿ– ಇವೆಲ್ಲದರ ನಡುವೆ ಕಾಡುವ, ಕಾತರಿಸುವ ಏಕಾಂತತೆ ಶಿವಪ್ರಕಾಶರಿಗೆ ಒಂದು ಆಪ್ಯಾಯಮಾನವಾದ ಭಾವನೆ ನೀಡುತ್ತದೆ ಮತ್ತು ಅವರು ಅದರ ಬೇರಿನ ತನಕ ಹೋಗುತ್ತಾರೆ. ಹಿಂದಿನ ದಿನಗಳು, ಹಳೆಯ ಸಂಬಂಧಗಳು, ಒಂದೊಂದು ದಿನದ ಮಾತುಗಳು, ಮುರಿದು ಹೋದ ಸ್ನೇಹಗಳು ತಮ್ಮ ನೆರಳನ್ನು ಇಂದಿಗೆ ಮತ್ತು ನಾಳೆಗೆ ಚಾಚುವ ಬಗ್ಗೆ ಮತ್ತು ಈ ಬಂಧಗಳ ಭಾರದ ಬಗ್ಗೆ ಶಿವಪ್ರಕಾಶ್ ಚಿಂತಿಸುತ್ತಾರೆ.

ಈ ಕವನ ಸಂಕಲನ ಬರೀ ಭಾವನೆಗಳ ಬುಗ್ಗೆಯಲ್ಲ. ಇಲ್ಲಿಯ 33 ಕವನಗಳನ್ನು ಕೇವಲ ಭಾಷೆಗೋಸ್ಕರವೇ ಓದಬಹುದು ಮತ್ತು ಅವು ಗಹನವಾಗುವುದು ಅವುಗಳ ಭಾಷೆಯ ಮೂಲಕ. ಐವರು ಕುರುಡರು ಮತ್ತು ಆನೆ ನಮಗೆಲ್ಲಾ ಗೊತ್ತಿರುವ ಕಥೆಯೇ. ಆದರೆ ಶಿವಪ್ರಕಾಶರಿಗೆ ಈ ಕುರುಡನನ್ನು ಆನೆ ಹೇಗೆ ಗುರುತಿಸುತ್ತದೆ ಎಂಬ ಚಿಂತೆ.

ಐದನೆಯವ ಹೇಳಿದ: ಆನೆ ಒಂದು ಪೀಪಿ
ಅವನ ಮೂಸಿತಾನೆ; ಏಯ್ ನೀನು ಭಜಂತ್ರಿ.

ಪದಸಂಬಂಧ ಸಾಮಾನ್ಯವಾಗಿ ಮನೋವಿಜ್ಞಾನದಲ್ಲಿ ಬಳಕೆಯಾಗುವಂತದು. ಅದನ್ನು ಶಿವಪ್ರಕಾಶ್ ಕವಿತೆಯಲ್ಲಿ ಸಮರ್ಥವಾಗಿ ಉಪಯೋಗಿಸಿ ಕಿರುನಗೆ ತರಿಸುತ್ತಾರೆ. ಅಲ್ಲದೆ ಮನುಷ್ಯರು ಉಪಯೋಗಿಸುವ ಪ್ರತಿಮೆಗಳ, ಉಪಮೆಗಳ ಬಗ್ಗೆ ಆಳವಾಗಿ ಚಿಂತಿಸುವಂತೆ ಮಾಡುತ್ತಾರೆ. ಈ ಕವನದಲ್ಲಿ ಹಾಸ್ಯವಿದೆ. ಆದರೆ ನಮ್ಮ ಕಾಲದ ಸಾಮೂಹಿಕ ಮತ್ತು ವ್ಯಕ್ತಿಗತ ಸಮಸ್ಯೆಗಳು, ನೋವು–ನಿರರ್ಥಕತೆಗಳು ಹೆಚ್ಚಾಗಿ ಕವಿತೆಯ ವಸ್ತುವಾಗುತ್ತವೆ.

ಕವಿ ಎಲ್ಲರ ಬಗ್ಗೆ ಯೋಚಿಸುತ್ತಿರುವಾಗ ಅವರ ಕಾವ್ಯದ ಕಣ್ಣು ತನ್ನನ್ನೇ ಬಿಡುವುದಿಲ್ಲ. ಒಂದು ದೀರ್ಘ ಮುಕ್ತಕದಲ್ಲಿ ಅವರು ಶಿವಪ್ರಕಾಶ 'ಉಪಮೆಯ ರೋಗಿ' ಎಂದು ತಮ್ಮನ್ನು ಬಣ್ಣಿಸಿಕೊಳ್ಳುತ್ತಾರೆ. ಪ್ರತಿಯೊಬ್ಬ ಕವಿ ಮತ್ತು ಸಾಹಿತ್ಯಾಸಕ್ತ ಓದಲೇಬೇಕಾದ ಕವಿತೆ ಇದು. ಯುಗಗಳ, ಋತುಗಳ, ನಾಗರಿಕತೆಗಳ, ಸಂಪರ್ಕಗಳ ಬಗ್ಗೆ ಬರೆಯುವ ಕವಿಯ ಅಂತರಾಳದಲ್ಲಿ ಆಗುವ ಸಂವಾದ ಹಾಗೂ ಜಗಳಗಳು ಈ ಕವಿತೆಯಲ್ಲಿ ಸ್ಪಷ್ಟವಾಗಿ ಮೂಡಿಬರುತ್ತವೆ. ಶಿವಪ್ರಕಾಶ್ ಅವರ ಕಾವ್ಯ ಪ್ರತಿಭೆಯಲ್ಲಿ ಇದು ಅವರ ಪೊಯೆಟಿಕ್ ಜೀನಿಯಸ್ ವಿಶ್ವರೂಪ ದರ್ಶನ.

ಶಿವಪ್ರಕಾಶರ ಮೂಲ ವೃತ್ತಿ ಮತ್ತು ಪ್ರವೃತ್ತಿ ಜೀವನದ ಎಲ್ಲಾ ವಿಷಯಗಳ ಅರ್ಥ ಮತ್ತು ಗೂಢಾರ್ಥಗಳನ್ನು ಹುಡುಕುವಂಥದು. ಇಬ್ಬಂದಿ ಬದುಕಿನ ಸಂಕೀರ್ಣತೆಗಳು, ವಿರೋಧಾಭಾಸಗಳು ಅವರನ್ನು ಕಾಡುತ್ತಾ ಹೋಗುತ್ತವೆ. ಯಾವುದೇ ವ್ಯಕ್ತಿ ಅಥವಾ ವಿಷಯ ಮೇಲುನೋಟಕ್ಕೆ ಕಾಣುವಂತೆ ಇರುವುದೇ ಇಲ್ಲ. ಮೇಲುಪದರ ತೆಗೆದರೆ ಒಳಪದರವೇ ಬೇರೆ. ಆದ್ದರಿಂದ ಗಗನಸಖಿಯ ತೋರುನಗೆಯೂ ಅವರ ಕವನದ ವಸ್ತುವಾಗುತ್ತದೆ. ಆ ನಗುವಿನ ಹಿಂದಿರುವ ಯಾಂತ್ರಿಕತೆ ಮತ್ತು ಯಾತ್ರಿಗಳ ಮನಸಲ್ಲಿ ಮೂಡುವ ಚಿತ್ರಗಳ ಮೂಲಕ ಈ ಅಪರಿಚಿತ ನಗೆಯ ಹಿಂದಿರುವ ಬೇಸರವನ್ನು ಈ ಕವಿತೆ ಚಿತ್ರಿಸುತ್ತದೆ.

ಪ್ರಕೃತಿ ಮತ್ತು ಪರಿಸರದ ಬಗ್ಗೆ ಶಿವಪ್ರಕಾಶರ ಕಾಳಜಿ ತುಂಬಾ ಅರ್ಥಪೂರ್ಣ. ಮನುಷ್ಯ ಮತ್ತು ಭೂಮಿಯ ಕ್ಲಿಷ್ಟ ಸಂಬಂಧವನ್ನು ಎಳೆಎಳೆಯಾಗಿ ಬಿಡಿಸುತ್ತಾರೆ. 'ನೀರಿನ ಜೋಗಿ' ಕವಿತೆಯಲ್ಲಿ ಕಲ್ಮಶ ಮತ್ತು ವಿಷದಿಂದ ತುಂಬಿರುವ ಜಗದ ನೀರಿನ ಬಗ್ಗೆ ಚಿಂತಿಸುತ್ತಾರೆ. ಅವರ ನೀರಿನ ಜೋಗಿ ಒಬ್ಬ ಮಾಂತ್ರಿಕ. ಅವನಿಗೆ ಇಡೀ ಜಗತ್ತಿನ ಕೆರೆ, ಬಾವಿ, ನದಿ ಮತ್ತು ಸಾಗರಗಳಿಗೆ ಮರುಜೀವ ತರುವ ಶಕ್ತಿಯಿದೆ. ಆದರೆ ಅವನಿಗೂ ನೀರಿನ ಕಣ್ಣು ತೋರುವ ಆಸಕ್ತಿಯಿಲ್ಲ.

ಕುಡಿದೂ ಕುಡಿದೂ ಕುಡಿದೂ ಕುಡಿದೂ
ಸಾಕುಸಾಕುಸಾಕಾಗಿ ಹೋಗಿದೆ
ನಾಲಗೆ ಕಾದ ಓಡಿನಂತಾಗಿದೆ
ಗುಂಡಿಗೆಯೊಳಗೆ ಕಿಚ್ಚು ಹೊತ್ತಿದೆ
ಬಸಿರಿನ ಒಳಗೆ ಕ್ಷಾಮ ಬಂದಿದೆ . . . .

ಇಂಥಾ ಸಾಲುಗಳು ಶಿವಪ್ರಕಾಶರ ಅದ್ಭುತ ಕಾವ್ಯಶಕ್ತಿಯ ಉದಾಹರಣೆಗಳು. ಹಾಗೆಯೇ ಅವರ 'ಒಲೆ' ಕವನ ಇಂಧನ ಶಕ್ತಿಯ ಬಗ್ಗೆ ಚಿಂತಿಸಿ ಸೂರ್ಯನ ಮುಖ್ಯಸ್ಥಾನದ ಬಗ್ಗೆ ಹೇಳುತ್ತದೆ.

ಶಿವಪ್ರಕಾಶ್ 'ಮೂರು ಕುರುಡರು' ಕವನದಲ್ಲಿ ಆದಿಯಿಂದ ಬಹಳಷ್ಟು ತತ್ವಜ್ಞಾನಿಗಳು, ಕವಿಗಳು ಮತ್ತು ಧಾರ್ಮಿಕ ಗುರುಗಳು ವಿವೇಚಿಸಿರುವ ನಿನ್ನೆ, ಇಂದು, ನಾಳೆಗಳ

ಬಗ್ಗೆ ತಮ್ಮದೇ ಆದ ರೀತಿಯಲ್ಲಿ ಮಾತಾಡುತ್ತಾರೆ. ವರ್ತಮಾನದ ಕುರುಡೇ ನಮ್ಮನ್ನು ಭೂತ ಮತ್ತು ಭವಿಷ್ಯಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಥರ್ಡ್ ಡೈಮೆನ್ಷನ್ ಎನ್ನುವುದು ತತ್ವಜ್ಞಾನದಲ್ಲಿ ಮುಂಬರಿದು ನಾಲ್ಕು ಮತ್ತು ಐದನೆಯ ಅವಸ್ಥೆಗಳ ಬಗ್ಗೆಯೂ ಈಗ ಚಿಂತನೆ ನಡೆದಿದೆ.

ಅವರ ಸೃಜನಶೀಲ ಕ್ಯಾಂಪಾಸ್‌ನಲ್ಲಿ ದಿಗ್ಭ್ರಮೆಗೊಳಿಸುವ ಮಹಾನಗರದ ಅನುಭವದಿಂದ ಹಿಡಿದು ಬೆಂಗಾಡಿನವರೆಗಿನ ಏಕಾಂತತೆಯ ಸ್ಪರ್ಶವಾಗುತ್ತದೆ. ಮನುಷ್ಯ ಮನುಷ್ಯರ ಸಂಬಂಧದ ಬಗ್ಗೆ ಅವರ ಗಮನ ಹರಿಯುತ್ತದೆ. ಒಂದು ಸತ್ತ ಟೆಲಿಫೋನ್ ಅವರಿಗೆ ಸತ್ತ ಸ್ನೇಹಿತನ ನೆನಪು ತಂದು ಜೀವನದ ನಶ್ವರತೆಯ ಬಗ್ಗೆ ದಾರ್ಶನಿಕ ಅನುಭವ ಮಾಡಿಸುತ್ತದೆ.

ಮಿರ್ಜಾ ಘಾಲಿಬನ ತರ್ಜುಮೆಯ ಮೂಲಕ ತಮ್ಮ ವ್ಯಾಪಕ ಓದಿನ ಪರಿಚಯ ಮಾಡಿಸುತ್ತಾರೆ ಶಿವಪ್ರಕಾಶ್. ಆದರೆ ಇಲ್ಲಿ ಪದಕ್ಕೆ ಪದವಿಡುವ ನೇರ ತರ್ಜುಮೆಯಿಲ್ಲ. ಈ ಕವಿತೆಗಳು ಘಾಲಿಬ್ ಕನ್ನಡಕ್ಕೆ ಬಂದರೆ ಹೇಗಿರಬೇಕೋ ಹಾಗಿವೆ. ಕವಿತೆಯೊಂದನ್ನು ಅದರ ಭಾಷಾ ಚೌಕಟ್ಟಿನಿಂದ ತೆಗೆದು ಇನ್ನೊಂದು ಭಾಷೆಯಲ್ಲಿ ಸೊಗಡು ಕೊಡುವುದು ಕಠಿಣ ಕೆಲಸ. ಆದರೆ ಶಿವಪ್ರಕಾಶರಿಗಿದು ಸುಲಭ ಸಾಧ್ಯ.

ನೋವು, ನಲಿವು, ವಿಷಾದ ಮತ್ತು ಕೋಪಗಳೆಲ್ಲಾ ಒಂದೆಡೆ ಬೆರೆತರೂ ಈ ಕವನಗಳು ಆಪ್ತವಾಗಿ ಉಲಿಯುತ್ತವೆ. ಇದೇ ಒಬ್ಬ ದೊಡ್ಡ ಕವಿಯ ಲಕ್ಷಣ. ಓದುಗನನ್ನು ಎಂದೂ ದೂರ ಮಾಡುವುದಿಲ್ಲ. ವರ್ಡ್ಸ್‌ವರ್ತ್ ಹೇಳಿರುವ ಮಾತೊಂದು ಶಿವಪ್ರಕಾಶರಿಗೆ ಚೆನ್ನಾಗಿ ಅನ್ವಯಿಸುತ್ತದೆ. 'ಪೊಯೆಟ್ರಿ ಇಸ್ ದ ಬ್ರೆತ್ ಅಂಡ್ ಫೈನರ್ ಸ್ಪಿರಿಟ್ ಆಫ್ ಆಲ್ ನಾಲೆಡ್ಜ್'. 'ಮಬ್ಬಿನ ಹಾಗೆ ಕಣಿವೆಯಾಸಿ' ಸಂಕಲನದ ಮೂಲಕ ಶಿವಪ್ರಕಾಶ್ ಭಾರತದ ಹಾಗೂ ವಿಶ್ವದ ಕಾವ್ಯಲೋಕದಲ್ಲಿ ಬೆಳಗಿದ್ದಾರೆ.

ನೀರಿನ ಜೋಗಿಗೆ ನೀರಿನ ಕಣ್ಣು ಸಿಗುವುದು ಕಷ್ಟವಾದರೂ, ಶಿವಪ್ರಕಾಶರ ಕಾವ್ಯದ ಕಣ್ಣು ಎಂದೂ ಮಬ್ಬಾಗುವುದಿಲ್ಲ.

❑ **ಕೆ.ಎಸ್. ಸಚ್ಚಿದಾನಂದ ಮೂರ್ತಿ**
ಸ್ಥಾನಿಕ ಸಂಪಾದಕರು, 'ದೀ ವೀಕ್'
('ಮಬ್ಬಿನ ಹಾಗೆ ಕಣಿವೆಯಾಸಿ' ಮುನ್ನುಡಿ)

## ನನ್ನ ಬೇಸಿಗೆ ತೋಟದೊಳಗೆ

ನನ್ನ ಬೇಸಿಗೆ ತೋಟದೊಳಗೆ ಅಗಲ ಚಪ್ಪರದಲ್ಲಿ
ಹಬ್ಬಿದ್ದ ಬಳ್ಳಿ ಬಿಟ್ಟ ರಸ ತುಂಬಿದ
ಗೋಳ ಗೋಳ ದ್ರಾಕ್ಷಿ
ಹೇಳು ಯಾವಳ ಕಂಗಳಲ್ಲಿ ಯಾವಾಗ ಗುಡ್ಡೆಯಾಗಿತ್ತು?

ತಪ್ತ ಭೂಮಿಯ ಮೈಗೆ ಹಿತವನು ತಂದ ದೂರದ
ಮಳೆಯ ನಾಡಿನ ತಂಗಾಳಿ
ಹೇಳು ಯಾವಳ ಉಸುರಿನುಸಿರಿನಂತಿತ್ತು?

ಕಡಲಿಗೆ ನಡೂಹಗಲಲಿ ಅಪ್ಪಟ ಉರಿವ ಚಿನ್ನದ
ಮುಲಾಂ ಬಳದು ಉರಿಸುತ ಉರಿವ ಸೂರ್ಯ
ಹೇಳು ಯಾವಳ ಅಂತರಂಗದ ಬಯಕೆಯಾಗಿದ್ದ?

ಅಬ್ಬರಿಸುವ ಹೆಬ್ಬಲೆಗಳ ರುದ್ರರೋಘಿನ ಮೊಸಳೆಮೀನುತಿಮಿಂಗಲಾದಿಯ
ನಡುವೆಯೂ ಫಳಫಳಫಳಸುತಿರುವ ಮುತ್ತು, ರತ್ನ, ಹವಳಮಣಿ
ಹೇಳು ಯಾವಳ ಘೋರನಿದ್ದೆಂದು ಕಾಳಬಸಿರಿನ ಸ್ವಪ್ನವಾಗಿದ್ದೊ?

ಕುಣಿತಗಾತಿಯ ಮಣಿವ, ಚಿಮ್ಮಿ ಒಲೆಯುವ ಒಡಲಿನಂತೆ
ಹತ್ತು ದಿಕ್ಕಿಗೆ ಒಲೆಯುತಿರುವ ಹಸಿರು ನೀಲಿ ಕಂದು ನೆಲ
ಹೇಳು ಯಾವಳ ಭಾವದುತ್ಕಟ ನಾಂಟ್ಯವಾಗಿತ್ತು?

## ಔಓ ಫಿರಾಕ್ ವ್ರೋ ಸಾಲ್ ಕಹಾ??

ಎಲ್ಲಿ  ಆ ದಿವಸಗಳು ಕೂಟದ ಆ ಗಳಿಗೆಗಳು, ಈಗೆಲ್ಲಿ?
ಆ ದಿವಸ ಆ ಇರುಳು ಆ ಮಾಸ ಆ ವರ್ಷ, ಈಗೆಲ್ಲಿ?

ಯಾರಿಗಿದೆ ಪುರುಸೊತ್ತು ಪ್ರೇಮದಾರಾಧನೆಗೆ?
ಚಲುವ ಧ್ಯಾನಿಸೊ ಆಳ, ಆತುರ-ಈಗೆಲ್ಲಿ?

ಹೃದಯದ ಕತೆಯ ಬಿಡು, ಮೆದುಳೂನು ಉಳಿದಿಲ್ಲ
ಒಂದು ಕಪ್ಪನೆ ಮಚ್ಚೆ, ದಟ್ಟ ಕೇಶದ ಹುಚ್ಚು-ಈಗೆಲ್ಲಿ?

ಎಲ್ಲ ಪ್ರೇರಣೆ ಇತ್ತು ಅವಳಲ್ಲಿ, ಹೂಂ, ಅವಳಲ್ಲಿಯೇ
ಎದೆಯಾಳ ಆ ಬಯಕೆ ಆ ಅಪಾರ ಬೆದೆ-ಈಗೆಲ್ಲಿ?

ನೆತ್ತರಿನ ಕಣ್ಣೀರೂ ಸುಲಭವಲ್ಲ ಇಂದು
ಹೃದಯದ ತಾಖತ್ತು, ಉಸಿರಿನ ಗಮ್ಮತ್ತು-ಈಗೆಲ್ಲಿ?

ಪ್ರೀತಿ ಜೂಜಿನ ಮನೆಗೆ ಕಾಲಿಡೆನು ಎಂದೂನು
ಇಟ್ಟರೂ ಕೂಡ ಆಪಾಟಿ ಸಿರಿ, ಹೊನ್ನು-ಈಗೆಲ್ಲಿ?

ಜಗದ ಬವಣೆಗಳಲ್ಲಿ ಸವೆದು ಹೋಗಿದೆ ಜೀವ
ನಾನೆಲ್ಲಿ? ಜಗವೆಂಬ ಶಾಪ ಈಗೆಲ್ಲಿ?

ನನ್ನ ಎಲ್ಲಾ ಶಕ್ತಿ, ಘಾಲಿಬ್, ಆಗಿ ಹೋಗಿದೆ ಖಾಲಿ
ಪಂಚ ಭೂತಗಳ ಸಮತೋಲ ಈಗೆಲ್ಲಿ?

**(ಡಾ. ಎಚ್.ಎಸ್. ಶಿವಪ್ರಕಾಶ್ ಅವರ 'ಮಬ್ಬಿನ ಹಾಗೆ ಕಣಿವೆಯಾಸಿ' ಕವನ ಸಂಕಲನದಿಂದ ಆಯ್ದ ಕವನ)**

# 79ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕೋ. ಚೆನ್ನಬಸಪ್ಪ



ವಿಜಾಪುರದಲ್ಲಿ ಫೆಬ್ರವರಿ 9ರಿಂದ 11ರವರೆಗೆ ನಡೆಯಲಿರುವ 79ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸಾಹಿತಿ ಕೋ. ಚೆನ್ನಬಸಪ್ಪ ಆಯ್ಕೆಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಜಿಲ್ಲಾ ಘಟಕಗಳ ಅಧ್ಯಕ್ಷರು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು ಚೆನ್ನಬಸಪ್ಪ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ. ಚೆನ್ನಬಸಪ್ಪ ಅವರು ಕನ್ನಡ ನಾಡು-ನುಡಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಈ ಜವಾಬ್ದಾರಿ ಅವರನ್ನು ಹುಡುಕಿಕೊಂಡು ಬಂದಿದೆ.

ಕೋ.ಚೆ. ಎಂದೇ ಚಿರಪರಿಚಿತರಾಗಿರುವ ಅವರು ಕಾನೂನು ಮತ್ತು ಸಾಹಿತ್ಯ ಎರಡನ್ನೂ ಪ್ರೀತಿಸುತ್ತ, ಅದಕ್ಕಾಗಿ ದುಡಿಯುತ್ತ ಬಂದವರು. ವೃತ್ತಿಯಲ್ಲಿ ನ್ಯಾಯಾಧೀಶರಾಗಿದ್ದುಕೊಂಡು, ಕನ್ನಡ ನಾಡು-ನುಡಿ ಬಗ್ಗೆ ಅದಮ್ಯ ಪ್ರೀತಿ ಬೆಳೆಸಿಕೊಂಡವರು. 'ಹಿಂದಿರುಗಿ ಬರಲಿಲ್ಲ', 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ', 'ಅರವಿಂದರು ಮತ್ತು ಅವರ ಆಶ್ರಮ' ಮತ್ತಿತರ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಇಳಿ ವಯಸ್ಸಿನಲ್ಲಿ ಸಮ್ಮೇಳನದ ಅಧ್ಯಕ್ಷರಾಗಿ ಹೊಸ ಜವಾಬ್ದಾರಿಯ ಹೊಣೆ ಹೊತ್ತಿದ್ದಾರೆ.

ವಿಜಾಪುರದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನ ಎರಡು ಕಾರಣಗಳಿಂದ ವಿಶೇಷವಾಗಿದೆ. 90 ವರ್ಷಗಳ ನಂತರ ಮತ್ತೆ ವಿಜಾಪುರದಲ್ಲಿ ಸಮ್ಮೇಳನ ನಡೆಯುತ್ತಿರುವುದು ಒಂದು ಕಾರಣ. ಎರಡನೆಯದಾಗಿ ಇಂತಹ ಐತಿಹಾಸಿಕ ಸ್ಥಳದಲ್ಲಿ ನಡೆಯಲಿರುವ ಸಮ್ಮೇಳನಕ್ಕೆ 90 ವರ್ಷದ ಉತ್ಸಾಹಿ ಸಾಹಿತಿಯನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದು.

90ರ ಹರೆಯದ ಉತ್ಸಾಹಿ ಕೋ. ಚೆನ್ನಬಸಪ್ಪ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವ ಪೂರ್ವಕ ಅಭಿನಂದನೆಗಳು. ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರುಗಲಿ; ಕನ್ನಡ ನಾಡು ನುಡಿ ಎಲ್ಲೆಡೆ ಪಸರಿಸಲಿ ಎಂದು ಶುಭ ಹಾರೈಸುತ್ತೇವೆ.

# ಅರೀಫ್ ರಾಜಾ



ಉದಯೋನ್ಮುಖ ಯುವ ಲೇಖಕ ಆರೀಫ್ ರಾಜಾ ಅವರು ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯ ಅರಕೇರ ಗ್ರಾಮದಲ್ಲಿ 1983, ಡಿಸೆಂಬರ್ 6ರಂದು ಜನಿಸಿದರು. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಯುವ ಸಂವೇದನೆಯ ಕವಿ ಅರೀಫ್ ರಾಜಾ ಅವರು ಇದುವರೆಗೂ 'ಸೈತಾನನ ಪ್ರವಾದಿ', 'ಜಂಗಮ ಫಕೀರನ ಜೋಳಿಗೆ' ಹಾಗೂ 'ಬೆಂಕಿಗೆ ತೊಡಿಸಿದ ಬಟ್ಟೆ' ಎಂಬ ಮೂರು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಮಾನವ ಸಂಬಂಧಗಳ ಪ್ರೀತಿ ಹಾಗೂ ಪ್ರಸ್ತುತ ಸಮಾಜದ ಸಾಮಾಜಿಕ-ಧಾರ್ಮಿಕ ಆಚರಣೆಗಳ ಕುರಿತಾದ ವಿಮರ್ಶಾತ್ಮಕ ಸೂಕ್ಷ್ಮಾತಿ ಸೂಕ್ಷ್ಮ ಸಂವೇದನೆಗಳನ್ನು ಅವರ ಕವನಗಳಲ್ಲಿ ಕಾಣಬಹುದು. ಈಗಾಗಲೇ ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದ ಅರೀಫ್ ಅವರು ಹಲವಾರು ಅಖಿಲ ಭಾರತ ಕವಿಗಳ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೇ ದಕ್ಷಿಣ ಭಾರತ ಹಾಗೂ ಉತ್ತರ ಭಾರತದ ಹಲವು ಭಾಷೆಗಳಿಗೆ ಅವರ ಕವನಗಳು ಭಾಷಾಂತರಗೊಂಡಿವೆ ಹಾಗೂ ಪರ್ಷಿಯನ್ ಭಾಷೆಯಲ್ಲಿ ಭಾರತೀಯ ಸಮಕಾಲೀನ ಕಾವ್ಯದ ಸಂಗ್ರಹದಲ್ಲಿ ಸೇರ್ಪಡೆಯಾಗಿದೆ.

## 'ಫಕೀರ'ನ ಜೋಳಿಗೆಗೆ ಅಕಾಡೆಮಿಯ ಪುರಸ್ಕಾರ

**ರಮೇಶ್ : 2012 ನೆಯ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ ಪಡೆದ 'ಜಂಗಮ ಫಕೀರನ ಜೋಳಿಗೆ' ಕವಿ ಅರೀಫ್ ರಾಜಾ ಅಭಿನಂದನೆಗಳು ನಿಮಗೆ. ಅರೀಫ್, ನಿಮ್ಮ ಸಂಕಲನದ ಹೆಸರಿನ ತಾತ್ಪರ್ಯ ತಿಳಿಸ್ತೀರಾ?**

**ಅರೀಫ್ :** ನನ್ನ ಮೊದಲ ಸಂಕಲನ 'ಸೈತಾನನ ಪ್ರವಾದಿ' 2006 ರಲ್ಲಿ ಬಂತು. ಆಮೇಲೆ ಎರಡನೆಯ ಸಂಕಲನ 'ಜಂಗಮ ಫಕೀರನ ಜೋಳಿಗೆ' 2009ರಲ್ಲಿ ಬಂತು. ಈ 'ಜಂಗಮ' ಮತ್ತು 'ಫಕೀರ' ತನ ಎಂಬುದು ಸಾಂಸ್ಕೃತಿಕ ಲೋಕದ ಎರಡು ಮೆಟಫರ್‌ಗಳು. ರೂಪಕಗಳು. ನಿಮಗೆಲ್ಲ ಗೊತ್ತಿರುವಂತೆ ನಮ್ಮ ಹೈದರಾಬಾದ್-ಕರ್ನಾಟಕ ಬಹು ಸಂಸ್ಕೃತಿಯ, ಬಹು ಭಾಷಿಕ ನೆಲ. ಇಲ್ಲಿಯ ಅನೇಕ ಪಂಥಗಳು, ರಾಜಕೀಯ ವಿಚಾರಗಳು ಮತ್ತು ಅನೇಕ ಸಾಂಸ್ಕೃತಿಕ ವಾಗ್ವಾದಗಳು ಏಕಕಾಲದಲ್ಲಿ ನಡೆದುಕೊಂಡು ಬಂದ ಪರಿಸರ ಇದು. ನಮ್ಮ ಹಿಂದಿನ ಪರಂಪರೆ ನೋಡಿದರೆ ವಚನಕಾರರು ವ್ಯವಸ್ಥೆಯ ವಿರುದ್ಧದ ವಿರೋಧವನ್ನು ತಮ್ಮ ಕಾವ್ಯದ ಮುಖಾಂತರ ಕೊಟ್ಟಿದ್ದಾರೆ. ಅವರು ನಮ್ಮ ಭಾಗದಿಂದ ಬಂದಿದ್ದಾರೆ. ಆನಂತರ ಬಂದ ಹದಿನೇಳು ಹದಿನೆಂಟನೆಯ ಶತಮಾನಗಳು ಏನು ನಮ್ಮ ಬುದ್ಧಿಜೀವಿವಲಯ ಆ ಕಾಲವನ್ನು ಅಂಧಕಾರ ಕಾಲ ಅಂತ ಕರೆಯುತ್ತದೋ ಆ ಕಾಲದಲ್ಲೂ ಕೂಡ ನಮ್ಮ ಭಾಗದಿಂದ ಉತ್ತಮ ಕಾವ್ಯ ಬಂದಿದೆ. ಕಡಕೋಳ ಮಡಿವಾಳಪ್ಪ, ಹೊನ್ನೂರು ಜಲಾಲ ಸಾಹೇಬ ತರಹದವರು ಬರೆದಿದ್ದಾರೆ. ಇವರ ರಚನೆಗಳು ಕೂಡ ಬಹುಭಾಷಿಕ/ಸಂಸ್ಕೃತಿಯಿಂದ ಬಂದಿರುವಂತಹುಗಳು. ಇವರು ದಕ್ಕನಿ, ತೆಲುಗು ಮತ್ತು ಕನ್ನಡ ಭಾಷೆಯನ್ನು ಏಕ ಕಾಲದಲ್ಲಿ ಬಳಸಿ ತಮ್ಮ ಸಂವಹನ ಸಾಧ್ಯತೆಯನ್ನು ಪರಿಹರಿಸಿಕೊಂಡಿದ್ದಾರೆ. ಮತ್ತು ತತ್ವಪದಕಾರರ, ದಾಸರ ಹಿನ್ನೆಲೆ ಕೂಡ ಭಿನ್ನವಾಗೇನಿಲ್ಲ. ಹೀಗೆ ಈ ಭಾಗ ಮನುಷ್ಯನನ್ನು ಹುಟ್ಟುತ್ತಲೇ ಸೆಕ್ಯುಲರ್‌ನನ್ನಾಗಿ ಮಾಡಿಬಿಡುತ್ತದೆ. ಪಠ್ಯದಿಂದಲೋ, ಸಂವಿಧಾನದಿಂದಲೋ ಕಲಿಯುವ ಅವಶ್ಯಕತೆಯಿಲ್ಲ. ಈ ಕಾರಣಕ್ಕಾಗಿ ನಾನು ಹೇಗೆ ರೀಚ್ ಆಗಬೇಕು ಎಂದು ಆಲೋಚಿಸತ್ತಾ ಒಂದು ಜನಾಂಗದ ಪ್ರತಿನಿಧಿಯಾಗು ವುದಕ್ಕಿಂತ ಇಡೀ ಈ ಭಾಗದ ಸಮಷ್ಟಿಯ ಸಾಂಸ್ಕೃತಿಕ ಧ್ವನಿಯಾಗಬೇಕು ಅಂತ ಅ-ಪ್ರಜ್ಞಾಪೂರಕವಾಗಿ ಅಂತ ಎಲ್ಲೋ ಈ ತರಹದ ನನ್ನ ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದಿರಬಹುದು. ಈ ಕಾರಣಕ್ಕಾಗಿ ನನ್ನ ಸಂವಹನ ಸಾಧ್ಯತೆಯನ್ನು ಸಾಧಿಸಿಕೊಳ್ಳಲು ಸಂಕಲನಕ್ಕೆ ಈ ಹೆಸರನ್ನು ಕೊಟ್ಟಿರಬೇಕು.

**ರಮೇಶ್ : ನೀವು ಸಾಹಿತ್ಯ ಅಭಿರುಚಿಯನ್ನು ಬೆಳೆಸಿಕೊಳ್ಳಲು ನಿಮಗೆ ಸಿಕ್ಕ ಅಭ್ಯಾಸದ ಸರಕು ಎಲ್ಲಿಯದು?**

**ಅರೀಫ್ :** ನೀವು ಕೇಳಿರುವ ಪ್ರಶ್ನೆಯನ್ನು ನಾನು ಸ್ವಲ್ಪ ಬೆಳೆಸಿಕೊಂಡು ಉತ್ತರಿಸಲು ಪ್ರಯತ್ನಿಸ್ತೀನಿ. ನಮ್ಮ ಭಾಗದ ಬಹುಪಾಲು ಹಳ್ಳಿಗಾಡಿನ ಶಾಲೆಗಳಲ್ಲಿ ಸರಿಯಾದ ಗ್ರಂಥಾಲಯಗಳಿಲ್ಲ, ಓದಿನ ಅಭಿರುಚಿ ಬೆಳೆಸಿಕೊಳ್ಳಲು ಯಾವುದೇ ವ್ಯವಸ್ಥೆಯಿಲ್ಲ. ಹೀಗೆ ಒಮ್ಮೆ ನಮ್ಮ ಶಾಲೆಯಲ್ಲಿ ನಮ್ಮ ಗುರುಗಳು ಕಾವ್ಯ ಗಾಯನ ಸ್ಪರ್ಧೆ ಇರುವುದಾಗಿ ಹೇಳಿದರು. ನಾನು ಅಷ್ಟೇನು ತಲೆ ಕೆಡಿಸಿಕೊಳ್ಳದೆ ಮನೆಗೆ ಬಂದು ಹೋಂ-ವರ್ಕ್ ಮಾಡುತ್ತಾ ಇದ್ದೆ. ಸಾಮಾನ್ಯವಾಗಿ ನಾನು ಅಮ್ಮನ ಹೊಲಿಗೆ ಯಂತ್ರದ ಮೇಲೆ ನೋಟ್ ಬುಕ್ ಇಟ್ಟು ಬರೆಯುತ್ತಿದ್ದೆ. ಹೀಗೆ ಒಮ್ಮೆ ಬರೆಯುತ್ತಾ ಕೂತಿರಬೇಕಾದರೆ ಕರೆಂಟ್ ಹೋಯ್ತು. ಕಂದೀಲು ಹಚ್ಚಿ ಬರೆಯುತ್ತಾ ಕೂತೆ. ಆಗ ಮೇಷ್ಟ್ರು ಹೇಳಿದ ಕಾವ್ಯ ಗಾಯನ ಸ್ಪರ್ಧೆ ನೆನಪಾಗಿ ಏನೋ ಫ್ಲ್ಯಾಶ್ ಆಗಿ 'ನರ ಮಾನವರೆ ಆ ದೇವರು ಈ ದೇವರು ಎಂದು ನೂರಾರು ದೇವರ ಹೆಸರು ಹೇಳಿ ಕೊನೆಗೆ ಮಾತೃದೇವರನ್ನೇ ಮರೆತಿರುವ ನಿಮಗೆ ಯಾವ ದೇವರಾದರೇನಯ್ಯ' ಅಂತ ಬರೆದಿಟ್ಟೆ. ಇದು ವಚನ ಶೈಲಿ. ನನಗೆ ಗೊತ್ತಿಲ್ಲದಂತೆ ನನ್ನೊಳಗೆ ಇದ್ದದ್ದು. ನಾನ್ಯಾಕೆ ಈ ಮಾತು ಹೇಳ್ತಿದೀನಿ ಅಂದರೆ ನನಗೆ ಓದಲು ಪುಸ್ತಕ ಸಿಕ್ಕಿಲ್ಲ. ಓದಲು ಏನಾದರು ಇದ್ದಿದ್ದರೆ ಅದು ಬರಿ ಪಠ್ಯಪುಸ್ತಕ ಮಾತ್ರ. ಅದು ರನ್ನ, ಪಂಪ, ಕುವೆಂಪು ಮತ್ತು ಬೇಂದ್ರೆ, ಇತ್ಯಾದಿ. ಮುಂದೆ ನನ್ನ ಶಾಲೆಯ ಗುರುಗಳು ನನಗಿದ್ದ ಓದುವ ಅಭಿರುಚಿ ಕಂಡು ಪ್ರೋತ್ಸಾಹಿಸಿದರು.

**ರಮೇಶ್ : ಅರೀಫ್ ನಿಮ್ಮ ಕಾವ್ಯದಲ್ಲಿ ಬರುವ ಬೈರಾಗಿ ಅಥವಾ ವಿರಕ್ತತೆಯ ಭಾವ ಎಲ್ಲಿಂದ ಬಂದಿರಬಹುದು ಅನಿಸ್ತಿದೆ?**

**ಅರೀಫ್ :** ನನಗನಿಸುತ್ತೆ ಎಲ್ಲಾ ಉನ್ನತವಾದ ಕಲೆಗಳು ಅಂದರೆ ಅದು ಮ್ಯೂಸಿಕ್, ಪೇಂಟಿಂಗ್, ಆರ್ಟ್ ಅಥವಾ ನಾಟಕವಿರಲಿ ಅದಕ್ಕೆ ಎಷ್ಟರಮಟ್ಟಿಗೆ ಲೌಕಿಕವಾದ ಆಕರ್ಷಣೆ ಇದೆಯೋ ಅಷ್ಟೇ ಅಲೌಕಿಕತೆಯೆಡೆಗೆ / ಅಮೂರ್ತತೆಯೆಡೆಗೆ ಸೆಳೆತ ಇರುತ್ತೆ ಅಂತ ನನಗನಿಸುತ್ತೆ. ವಿಜ್ಞಾನ ನಮಗೆ ಮೆಟಿರಿಯಲಿಸ್ಟಿಕ್ ವರ್ಲ್ಡ್ ಬಗ್ಗೆ ಕಲಿಸಿಕೊಡುತ್ತದೆ ಅಂತ ಅನಿಸಿದರೂ ಈ ಜಗತ್ತು ನಮ್ಮ ಪಂಚೇಂದ್ರಿಯಗಳಿಗೆ ದಕ್ಕುತ್ತೆ ಅಂತ ಅನಿಸಲ್ಲ. ಎಲ್ಲವನ್ನು ಮೀರಿ ಅದರಾಚೆಗೆ ಎಲ್ಲೆ ಮೀರಿ ಹೋಗ್ತಾ ಇದೆ. ಅದು ನಮ್ಮ ಕೈಗೆ ಸಿಗೋಲ್ಲ. ಗ್ರೀಕ್ ನಾಟಕಗಳನ್ನು ನೋಡಿದಾಗ ಮನುಷ್ಯ ಎಷ್ಟೆಲ್ಲ ಶೂರ ಇದ್ದಾನೆ, ಸುಂದರ ಇದ್ದಾನೆ ಮತ್ತು ಕೆಪೆಬಲ್ ಇದ್ದಾನೆ ಅಂತ ಅನಿಸಿದರೂ ಅವನ ಸಣ್ಣ ಹಂಬಲ ಇರುತ್ತದೆ. ಅದು ಸಿಕ್ಕಿರುವುದಿಲ್ಲ. ಆ ಸಿಗದಿರುವಿಕೆಯೊಂದಿಗಿನ ಅವನ ಗುದ್ದಾಟದಲ್ಲಿಯೇ ಅವನ ದುರಂತ ಅಡಗಿರುತ್ತದೆ. ಅಂಥ ದೊಡ್ಡ ವೀರನಿಗೆ ಸಣ್ಣ ಕ್ರೈಸಿಸ್ ಅನ್ನು ಬಗೆಹರಿಸಿಕೊಳ್ಳೋಕೆ ಆಗಲ್ಲ. ಅಂದರೆ ಮನುಷ್ಯನ ಈ ಅವಸ್ಥೆಗೆ ಕಾರಣ ಏನು ಅಂತ ಯೋಚಿಸಿದಾಗ ಏನೋ ಒಂದು ಮನುಷ್ಯನಿಗೆ ಸಿಗದಿರುವುದು ಇದೆ ಅನಿಸಿ ಅದು ಆಧ್ಯಾತ್ಮಿಕ ಇರಬಹುದಾ ಅನಿಸಿಬಿಡುತ್ತದೆ. ಈ ತರಹದ ಪರಿಕರಗಳನ್ನು ಹೇಗೆ ಕಾವ್ಯದಲ್ಲಿ ತರಬೇಕೆಂಬ ನನ್ನ ಶೋಧ ಫಕೀರರಿಗೆ, ವಿರಾಗಿಗಳಿಗೆ ಮತ್ತು ಜಂಗಮರಿಗೆ ನಮ್ಮ ಸಮಾಜ ಕೊಟ್ಟ ಮನ್ನಣೆಯನ್ನು ತಿಳಿದು ಇವರ ಮೂಲಕ ಲೌಕಿಕದ ಮಾತುಗಳನ್ನಾಡಿಸಲು ನಿರ್ಧರಿಸಿದೆ. ಅಂದರೆ ಫಕೀರರ, ಜಂಗಮರಿಂದ ವೈರಾಗ್ಯದ / ಆಧ್ಯಾತ್ಮಿಕ ಮಾತುಗಳನ್ನು ಆಡಿಸಬಾರದು. ಏಕೆಂದರೆ ಅತ್ಯಂತ ರಸಿಕತನದಿಂದ ಮತ್ತು ತೀವ್ರವಾಗಿ ಬದುಕನ್ನು ನೋಡಬಲ್ಲವರು ಇವರಾಗಿರುತ್ತಾರೆ. ಅದಕ್ಕಾಗಿ ನನ್ನ ಕಾವ್ಯಕ್ಕೆ ಅಂತಹ ತೀವ್ರತೆ ದಕ್ಕುತ್ತಾ ಅಂತ ಆಯ್ದು ಕೊಂಡಿರಬೇಕು.

**ರಮೇಶ್ : ಒಂದು ನಿರ್ವಾತ ಕಾಲಘಟ್ಟದಲ್ಲಿ ಬರೆಯುತ್ತಿರುವ ನಿಮಗೆ ಸಾಹಿತ್ಯದ ಯಾವುದಾದರು ಒಂದು ಪಂಥಕ್ಕೆ ಸೇರಬೇಕು ಇಲ್ಲ ಪ್ರಕಾರದೊಂದಿಗೆ ಗುರುತಿಸಿಕೊಳ್ಳಬೇಕು ಅನಿಸಿದೆಯಾ?**

**ಅರೀಫ್ :** ಪಂಥಗಳನ್ನು ನಿಜಕ್ಕೂ ಓದುಗರು ಸೃಷ್ಟಿಸಿದ್ದಾರೊ ಅಥವಾ ವಿಮರ್ಶಕರು ಸೃಷ್ಟಿಸಿದ್ದಾರೊ ನಿರ್ಧರಿಸಬೇಕು. ಏಕೆಂದರೆ ಓದುಗ ಯಾವತ್ತೂ

ಸಾಹಿತ್ಯವನ್ನು ವಿಂಗಡಿಸಿಕೊಂಡು ಓದುವುದಿಲ್ಲ. ಎಲ್ಲಾ ಬರಹಗಾರರ ಕೃತಿಗಳನ್ನು ಪಂಥಾತೀತವಾಗಿ ಓದಿಕೊಳ್ಳುತ್ತಾನೆ. ಒಂದು ಪಂಥಕ್ಕೆ ಕಟ್ಟು ನಿಟ್ಟಾಗಿಲ್ಲ. ಆದರೆ ವಿಮರ್ಶಕ ಅಥವಾ ಸಾಹಿತ್ಯ ಅಧ್ಯಯನದ ವಿದ್ಯಾರ್ಥಿ ಅವನಿಗೆ ಈ ಒಂದು ಪಂಥದ ಅವಶ್ಯಕತೆ ಇದೆ. ಅದು ಓದಿನ ಅನುಕೂಲಕ್ಕಾಗಿ. ಸಂಶೋಧನಾ ದೃಷ್ಟಿಯಿಂದ ಮಾತ್ರ ವಿಂಗಡಿಸಲ್ಪಟ್ಟಿದೆ. ಎಲ್ಲಾ 20-25 ವರ್ಷಕ್ಕೊಂದು ಪಂಥ ಆಗಿ ಹೋಗಿದೆ. ನವೋದಯ, ನವ್ಯ, ದಲಿತ, ಬಂಡಾಯ ಹೀಗೆ...ಆದರೆ ಇವತ್ತಿನ ಸಾಹಿತ್ಯ ಸೃಷ್ಟಿಗೆ ಯಾವ ಟ್ರೆಂಡ್ ಅಂತ ಹೆಸರಿಡಬೇಕೆಂಬುದು ನಮ್ಮ ಆತಂಕ. ಇವತ್ತಿನ ಸಂದರ್ಭದಲ್ಲಿ ತತ್ವ ಮತ್ತು ಪ್ರಣಾಳಿಕೆ ಸೃಷ್ಟಿ ಆಗುತ್ತಿಲ್ಲ. ಆದರೆ ಪ್ರಗತಿಶೀಲ ಘಟ್ಟದಿಂದಲೂ ಒಂದು ಸಿದ್ಧಾಂತಕ್ಕೆ ಹೊಂದಿಕೊಂಡಂತೆಯೇ ಸಾಹಿತ್ಯ ಹೊರ ಬಂತು. ಆದರೆ ಇಂದು ಪಂಥವನ್ನು ಗುರುತಿಸುವಿಕೆ ಆಗುತ್ತಿಲ್ಲ. ಏಕೆಂದರೆ ಒಂದು ಸಾಮಾನ್ಯ ಗುಣ ಲಕ್ಷಣಗಳನ್ನು ಹೊಂದಿದ ಸಾಹಿತ್ಯ ಸೃಷ್ಟಿ ಇಂದಿನದಲ್ಲ. ನವೋದಯದ ಭಾವಗೀತಾತ್ಮಕತೆ, ನವ್ಯದ ಆಕೃತಿ, ಭಾಷೆ ಬಳಕೆ ಮತ್ತು ದಲಿತ ಬಂಡಾಯದ ಮನೋಧರ್ಮ ಇವೆಲ್ಲವುಗಳನ್ನು ಏಕಕಾಲದಲ್ಲಿ ಇವತ್ತಿನ ಕವಿ, ಕಥೆಗಾರ ಬಳಸುತ್ತಿದ್ದಾನೆ. ಹೀಗಾಗಿ ಇನ್ನು ಕೆಲ ವರ್ಷಗಳಲ್ಲಿ ವಿಮರ್ಶಕ ಇದಕ್ಕೆ ಹೆಸರಿಡಬಹುದು ಎಂಬ ನಿರೀಕ್ಷೆಯಲ್ಲಿದ್ದೇನೆ.

**ರಮೇಶ್ :** 'ಕಲೆ ಕಲೆಗಾಗಿ ಅಲ್ಲ; ಕಲೆ ಬದುಕಿಗಾಗಿ' ಅನ್ನುವ ಮಾತಿದೆ. ಈ ಕಾಲದ ಸಾಹಿತ್ಯ ಸೃಷ್ಟಿಯ ಉದ್ದೇಶವನ್ನು ನೀವು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ?

**ಅರೀಫ್ :** ಇದು ಅಪ್ರಸ್ತುತ ಪ್ರಶ್ನೆ. ಸಂವಿಧಾನವನ್ನು ಹೇಗೆ ತಿದ್ದುಪಡಿ ಮಾಡಿ ಕೆಲ ಅನಾವಶ್ಯಕ ಅಂಶಗಳನ್ನು ತೆಗೆದು ಹಾಕುತ್ತೇವೊ ಹಾಗೆಯೇ ಈ ಮಾತನ್ನು ತೆಗೆದು ಹಾಕಬೇಕು. ಏಕೆಂದರೆ ಎಲ್ಲಾ ಕಲೆಗಳ ಉದ್ದೇಶ ಬದುಕಿಗಾಗಿ. ಲಂಕೇಶ್ ಒಂದು ಕಡೆ ಹೇಳುತ್ತಾರೆ ಕಲೆಯನ್ನು ಒಂದು ಕ್ಷಣ ಬಿಡಬಹುದು. ಆದರೆ ಬದುಕನ್ನು ಬಿಡುವುದಕ್ಕೆ ಬರುವುದಿಲ್ಲ ಅಂತ.

**ರಮೇಶ್ :** ಅರೀಫ್‌ರೆ, ಸಾಹಿತ್ಯ ಕೃತಿಯೊಂದರ ವಸ್ತು ದಲಿತರ ಬದುಕಿನ ಕುರಿತೋ, ಇಲ್ಲ ಮಹಿಳೆಯರ ಕುರಿತೋ ಇದ್ದಲ್ಲಿ ಅಂತಹ ಕೃತಿಯನ್ನು ಥಟ್ಟನೆ ಒಂದು ಕೆಟಗರಿಗೆ ಸೇರಿಸಿ ಬಿಡುವ ಚಾಳಿ ಚಾಲ್ತಿಯಲ್ಲಿದೆ. ಇದರ ಬಗ್ಗೆ ಏನಂತೀರಿ?

**ಅರೀಫ್ :** ಒಳ್ಳೆಯ ಪ್ರಶ್ನೆ. ಈ ಸಂವೇದನೆಗಳನ್ನು ಗುರುತಿಸುವ ಪರಿಪಾಠ ಶುರುವಾಗಿದ್ದು ನಮ್ಮ ದಲಿತ-ಬಂಡಾಯದ ಕಾಲಘಟ್ಟದಲ್ಲಿ. ಕಾರಣ ಏನೆಂದರೆ ಅಲ್ಲಿವರೆಗೂ ಶೋಷಿತ ಅಥವಾ ಡಿಪ್ರೆಸಡ್ ಕ್ಲಾಸ್ ಏನಂತ ಕರೀತೀವಿ ದಲಿತ, ಮುಸ್ಲಿಂ, ಮಹಿಳೆಯರು ಬರವಣಿಗೆಗೆ ತೊಡಗಿಕೊಂಡಾಗ ಅವರ ಆ ಹೊಸ ಬದುಕಿನ ಅಭಿವ್ಯಕ್ತಿಯನ್ನು ಗುರುತಿಸುವಿಕೆ ಒಂದು ಪ್ರಶ್ನೆಯಾಗಿ ಉದ್ಭವಿಸಿತು. ಈ ಹೊಸ ಸಂವೇದನೆಯನ್ನು ಗುರುತಿಸುವ ನಿಟ್ಟಿನಲ್ಲಿ ತಮ್ಮ ಅನುಕೂಲಕ್ಕಾಗಿ ಇದು ದಲಿತ ಸಂವೇದನೆ, ಇದು ಬಂಡಾಯ, ಇಲ್ಲವೆ ಇದು ಮುಸ್ಲಿಂ ಸಂವೇದನೆಯೆಂದು ಗುರುತಿಸುವಿಕೆ ನಡೆಯಿತು. ಇದು ಐಡೆಂಟಿಟಿ ಕ್ರೈಸಿಸ್‌ನ ಭಾಗವೂ ಆಗಿತ್ತು ಮತ್ತು ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಇದ್ದ ಅಸ್ಮಿತೆಯಾಗಿತ್ತು. ಆದರೆ ಈ ಅಸ್ಮಿತೆ ಎಷ್ಟು ಕ್ಲೀಷೆಗೊಂಡಿದೆ ಎಂದರೆ ಒಂದು ಜನಾಂಗಕ್ಕೆ ಸೇರಿದ ಹುಡುಗ ಏನನ್ನಾದರು ಬರೆದರೆ ಆ ಕೃತಿಗೆ ಮುಲಾಜಿಲ್ಲದೆ ಹಣೆಪಟ್ಟಿ ಹಚ್ಚಿಬಿಡಲಾಗುತ್ತದೆ. ಅವುಗಳ ಸೂಕ್ಷ್ಮತೆಯನ್ನೇ ಕಳೆದು ಹಾಕಿದ್ದೇವೆ.

❑ **ರಮೇಶ್ ಅರೋಲಿ, ದೆಹಲಿ**

(ದೆಹಲಿಯ ಕಮಲಾ ನೆಹರೂ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀ ರಮೇಶ್ ಅರೋಲಿ ಅವರು ಇತ್ತೀಚೆಗೆ ರಾಯಚೂರು ಆಕಾಶವಾಣಿಗಾಗಿ ನಡೆಸಿದ ಸಂದರ್ಶನದ ಭಾಗ ನಿಮಗಾಗಿ. . .)

# ಹೊಲಿಗೆಯಂತ್ರದ ಅಮ್ಮಿಯ ಕವಿತೆಗಳು

## ಭಾಗ ಎರಡು

ರೊಟ್ಟಿ ಪಾಲುಮಾಡಿದಂತೆ ಬಟ್ಟೆ ಗಡಿಕೊರೆದು
ಕತ್ತರಿಸಿದ ಅಮ್ಮಿ ತುಂಡು ತುಂಡು ಸೇರಿಸಿ
ಹೊಲಿದು ಒಂದು ಮಾಡುತ್ತಾಳೆ
ಒಂದು ಕೈಯಲ್ಲಿ ಕತ್ತರಿ:
ಮುಖವಾಡ ಒಡೆದು ಬಯಲಾಗಲು
ಮತ್ತೊಂದು ಕೈಯಲ್ಲಿ ಸೂಜಿ:
ಲೋಕದ ಮಾನ ಕಾಪಾಡಲು

ಕಾಲಿನಿಂದ ಪೆಡಲು ತುಳಿಯುವ ಅಮ್ಮಿ
ಚಕ್ರ ತಿರುಗಿಸಿದಂತೆಲ್ಲಾ ಇತಿಹಾಸ
ಒಂದು ಸುತ್ತು ಉರುಳುತ್ತದೆ

ಸೂಜಿ ಮೂಗಿಗೆ ದಾರಪೋಣಿಸುವ ಅಮ್ಮಿ
ಸಂಜೆಯಲ್ಲಿ ಕೊಂಡುತಂದ ನಿರಾಕಾರಮಾನಕ್ಕೆ ಹೊಲಿಗೆ ಹಾಕಿ
ರೂಪು ನೀಡುತ್ತಾಳೆ ಆಕಾಶದಂತಹ, ಕಡಲಿನಂತಹ ಬಟ್ಟೆಗೆ
ನಮೂನಮೂನೆಯ ಪಾತ್ರ ಕೊಡುವ ಅಮ್ಮಿಯೇ ಸೃಷ್ಟಿಕರ್ತೆ
ಅಮ್ಮಿಯಕಣ್ಣು, ಮೂಗು, ಹಣೆ, ರೋಮಗಳಿಂದ ಇಳಿಯುವ
ಉಪ್ಪು ನೀರಿನಿಂದಲೇ ಈ ನಿಗೂಢ ಬದುಕಿನೊಳಗೆ
ನಿರ್ಜೀವ ಬಟ್ಟೆಗೆ ಪ್ರವೇಶ

ಬಣ್ಣ ಬಣ್ಣದ ಬಟ್ಟೆಹೊಲಿದು ಜಗಕ್ಕೆ
ಉಡಿಸುವ ಅಮ್ಮಿ ಯಾವಾಗಲೂ ಧರಿಸುವುದು ಹಾಲುಬಿಳಿಸೀರೆ

ಚಿಂದಿಮನಸುಗಳನು ಜೋಡಿಸಲು ಸೂಜಿ ಇದೆ
ಗೋಲವಿಶ್ವ ದಾರಿ ಸಾಗಲು ರಾಟೆ ಇದೆ
ಲೋಕವಿಚಾರಗಳನ್ನು ಕಡಿದು ಹಾಕಲೆಂದೇ
ಕೈಯಲ್ಲಿ ಕತ್ತರಿ

ಹರಿದ ಚಂದ್ರ, ತೂತುಬಿದ್ದ ನಕ್ಷತ್ರ ಯಾರದೋ
ಚಾಟಿಏಟಿಗೆ ಗಿರ್ರನೆ ತಿರುಗುವ ಗ್ರಹ ಬುಗುರಿಗಳು
ದಿಕ್ಕುದೆಸೆಯಿಲ್ಲದೆ ಅಲೆಯುವ ಅಲೆಮಾರಿ
ಉಲ್ಕೆಗಳು, ಧೂಮಕೇತುಗಳು ನಿದ್ದೆ ಬಾರದೆ ಒದ್ದಾಡುತಿರಲು
ಒಂದು ಹಾಸಿಗೆಬೇಕು ಅಮ್ಮಿ ಹೊಲಿದುಕೊಡು

## ಭಾಗ ಒಂದು

ಕಟ್ಟಿಕೊಂಡ ಗಂಡನನ್ನು ಹೊಟ್ಟೆಯ ಮಗುವಿನಂತೆ ಸಾಕಿ
ಹೊಲಿಗೆಯಂತ್ರದ ಕೂಡ ಕಾಲುಶತಮಾನ ಕಳೆದ
ನಮ್ಮ ಅಮ್ಮಿಗೆ
ನಮಾಜ್ ಎಂದರೆ ಜುಮ್ಮಾ
ಈದ್ ಎಂದರೆ ದೂದ್‌ಖುರ್ಮಾ

ರಟ್ಟೆಬೀಳುವತನಕ ರಾಟೆ ತಿರುಗಿಸಿ
ಆರುಮಕ್ಕಳ ಹಸಿವು ನೀಗಿಸುವ ಅಮ್ಮಿಗೆ
ಕರುಳಕುಡಿಗಳೆಂದರೆ ಕನಸುಗಣ್ಣು,
ಮರುಭೂಮಿಯಲ್ಲೂ ಸಿಗುವ ಹಸಿರುಮಣ್ಣು.

ಪದಕೋಶ :-
ದೂದ್‌ಖುರ್ಮಾ-ರಮ್‌ಜಾನ್ ಹಬ್ಬದ ಸಾಮಾನ್ಯ ವಿಶೇಷ : ಹಾಲು ಶಾವಿಗೆ ರಸಾಯನ, ಜುಮ್ಮ-ಶುಕ್ರವಾರ

(ಅರೀಫ್ ರಾಜಾ ಅವರ 'ಜಂಗಮ ಫಕೀರನ ಜೋಳಿಗೆ' ಕವನ ಸಂಕಲನದಿಂದ ಆಯ್ದ ಕವನ)

# ಜಾನಪದ ಸೊಗಡನ್ನು ನೀಡಿದ ಹೊರನಾಡ ಕನ್ನಡಿಗರ ಕನ್ನಡ ಸಂಸ್ಕೃತಿ ಉತ್ಸವ

## ಬಹುಮುಖ ಸಂಸ್ಕೃತಿಯ ಕನ್ನಡದ ತೇರನ್ನು ಎಳೆವವರು ನಾವು. . .



ಕನ್ನಡಕ್ಕೆ ಭವ್ಯವಾದ ಪ್ರಾಚೀನ ಸಂಸ್ಕೃತಿಯಿದೆ, ಕನ್ನಡ ಸಂಸ್ಕೃತಿ ಉತ್ಸವದ ಮುಖ್ಯ ಆಶಯವೆಂದರೆ ಕನ್ನಡ ಸಂಸ್ಕೃತಿಯ ಸೊಗಡು–ಸೌಂದರ್ಯಗಳನ್ನು, ಸತ್ವ–ಸಾರಗಳನ್ನು, ಹಿರಿಮೆ–ಗರಿಮೆಗಳನ್ನು ನಮ್ಮ ಮುಂದಿನ ಪೀಳಿಗೆ ಮುಂದುವರಿಸಿಕೊಂಡು ಹೋಗುವಂತೆ ಮಾಡುವುದು. ಬಹು ಭಾಷೆಯ, ಬಹು ಸಂಪ್ರದಾಯದ ಸಮ್ಮಿಶ್ರ ಸಂಸ್ಕೃತಿಯಿರುವ ಕನ್ನಡದ ತೇರನ್ನು ಹತ್ತಿಬಂದವರು ನಾವೆಲ್ಲ. ಮುನ್ನಡೆಸಿಕೊಂಡು ಹೋಗುವ ಹೊಣೆ ನಮ್ಮ ಮುಂದಿನ ಪೀಳಿಗೆಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೊ.ರು.ಚೆನ್ನಬಸಪ್ಪ ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ನುಡಿದರು. ಅವರು ಡಿಸೆಂಬರ್ 15 ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ–ಬೆಂಗಳೂರು, ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ರಾಷ್ಟ್ರದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಜರುಗಿದ 'ಹೊರನಾಡ ಕನ್ನಡಿಗರ ಕನ್ನಡ ಸಂಸ್ಕೃತಿ ಉತ್ಸವ'ದಲ್ಲಿ ಮಾತನಾಡಿದರು. ದೆಹಲಿ ಕರ್ನಾಟಕ ಸಂಘವು ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಸಾಂಸ್ಕೃತಿಕ ರಾಯಭಾರಿಯಂತೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ನೀವೆಲ್ಲ ದೆಹಲಿ ಕನ್ನಡಿಗರು ಎಲ್ಲ ಭಾಷಿಕರ ಗಮನವನ್ನು ಸೆಳೆಯುವಂತಾಗಬೇಕು, ಎಲ್ಲ ಭಾಷಿಕರ ಕೇಂದ್ರವಾಗಬೇಕು, ಸಾಂಸ್ಕೃತಿಕ ಸಮೂಹವಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು. ನೀರು ಹಂಚಿಕೆ, ಉದ್ಯೋಗ ಮತ್ತು ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಬಗೆಯ ಸಮಸ್ಯೆಗಳು ರಾಷ್ಟ್ರವನ್ನು ಕಾಡುತ್ತಿವೆ. ಅವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಷ್ಟ್ರೀಯ ನೀತಿ ರೂಪಿಸುವಂತೆ ಪ್ರಾಧಿಕಾರದ ಅಧ್ಯಕ್ಷ ಡಾ. ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದಲ್ಲಿ 15 ಜನರ ನಿಯೋಗ ಪ್ರಧಾನಿ ಹಾಗೂ ಕೇಂದ್ರದ ವಿವಿಧ ಖಾತೆಗಳ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಇದೇ ಸಂದರ್ಭದಲ್ಲಿ ಪ್ರಾಧಿಕಾರ ಹೊರನಾಡ ಕನ್ನಡಿಗರ ಕನ್ನಡ ಸಂಸ್ಕೃತಿ ಉತ್ಸವವನ್ನು ಆಯೋಜಿಸಿದ್ದು ವೈವಿಧ್ಯಮಯ ಜಾನಪದ ಸೊಗಸಿನ ಮೆರವಣಿಗೆಯನ್ನು ರಾಘವೇಂದ್ರಸ್ವಾಮಿ ಮಠದಿಂದ ದೆಹಲಿ ಕರ್ನಾಟಕ ಸಂಘದವರೆಗೂ ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ ಮೊದಲಾದ ಕಲಾಪ್ರದರ್ಶನಗಳು ಬೀದಿಯುದ್ದಕೂ ಕನ್ನಡ ಕಹಳೆಯನ್ನು ಮೊಳಗಿಸಿ ರೋಮಾಂಚನವನ್ನುಂಟುಮಾಡಿದವು. ನಮ್ಮ ಸಂಸ್ಕೃತಿಯನ್ನು ಇತರರಿಗೆ ಪರಿಚಯಿಸುವ ಇಂಥ ಕನ್ನಡ ಜಾತ್ರೆಗಳು ಮತ್ತೆ ಮತ್ತೆ ನಡೆಯುತ್ತಿರಬೇಕು. ಈ ಸೊಬಗಿನ ಮೆರವಣಿಗೆಗೆ ಗೊ.ರು. ಚೆನ್ನಬಸಪ್ಪ ಹಾಗೂ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಚೆಂಡೆ ಬಾರಿಸುವುದರ ಮೂಲಕ ಚಾಲನೆ ನೀಡಿದರು.

ಇದಕ್ಕೂ ಮುನ್ನ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹಾಗೂ ಇತರೆ ಅತಿಥಿಗಳು ದೆಹಲಿಯ ಎಲ್ಲ ಕನ್ನಡಪರ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮುಕ್ತ ಸಂವಾದ ನಡೆಸಿದರು. ಸಂಘ, ಸಂಸ್ಥೆಗಳ ಪದಾಧಿಕಾರಿಗಳ ಹಲವು ಪ್ರಶ್ನೆಗಳಿಗೆ ಸೂಕ್ತ ಸಲಹೆ, ಸಮಾಧಾನಗಳನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ಮಾಜಿ ನ್ಯಾಯಮೂರ್ತಿ, ಮಾಜಿ ರಾಜ್ಯಪಾಲ, ರಾಜ್ಯಸಭೆಯ ಸಂಸದ ಡಾ. ರಾಮಾಜೋಯಿಸ್ ದಂಪತಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. "ಭಾರತೀಯ ಸಂಸ್ಕೃತಿ ಅತ್ಯಂತ ಶ್ರೇಷ್ಠವಾದದ್ದು. ಕನ್ನಡ ಭಾಷೆಯನ್ನು ಹೃದಯ ಸಿಂಹಾಸನದಲ್ಲಿ ಕೂರಿಸಿ, ಆರಾಧಿಸಬೇಕು. ಭಾಷೆ ಮನುಷ್ಯರನ್ನು ಬೆಸೆಯುವ ಬೆಸುಗೆ. ಮಾತೃಭಾಷೆಯನ್ನು ಎಂದೂ ಮರೆಯಬಾರದು" ಎಂದು ಹೇಳಿದ ಡಾ. ರಾಮಾ ಜೋಯಿಸ್ ಅವರು ಕನ್ನಡ ಮಾಧ್ಯಮ ಶಿಕ್ಷಣ ಪ್ರಾಥಮಿಕ ಹಂತದಲ್ಲಿ ಕಡ್ಡಾಯವಾಗಬೇಕು ಎಂದು ಒತ್ತಾಯಿಸಿದರು. ಈ ನಿಟ್ಟಿನಲ್ಲಿ ರಾಷ್ಟ್ರೀಯ ನೀತಿಯನ್ನು ರೂಪಿಸಲು ಕೇಂದ್ರಕ್ಕೆ ನಿಯೋಗ ಕರೆತಂದ ಅಭಿವೃದ್ಧಿ ಪ್ರಾಧಿಕಾರದ ಪ್ರಯತ್ನವನ್ನು ಶ್ಲಾಘಿಸಿದರು.

ಉದ್ಘಾಟನಾ ಸಮಾರಂಭಕ್ಕೆ ದೆಹಲಿ ಕರ್ನಾಟಕ ಸಂಘಕ್ಕೆ ಮೊದಲಬಾರಿಗೆ ಆಗಮಿಸಿದ ಮಾಜಿ ರಾಜ್ಯಪಾಲೆ ಶ್ರೀಮತಿ ರಮಾದೇವಿ ಅವರು ದೇಶದ ರಾಜಧಾನಿಯಲ್ಲಿ ಇಂಥದ್ದೊಂದು ಸಂಸ್ಕೃತಿ ಉತ್ಸವ ನಡೆಯುತ್ತಿದ್ದುದಕ್ಕೆ ಸಂತಸ ವ್ಯಕ್ತಪಡಿಸುತ್ತಾ, ಒಂದು ಕಾಲಕ್ಕೆ ಉತ್ತರಭಾರತೀಯರಿಗೆ ಕನ್ನಡ, ತೆಲುಗು, ಮಲೆಯಾಳ, ತಮಿಳು, ಭಾಷಾ ಬೇಧಗಳ ಬಗ್ಗೆ ಗೊತ್ತೇ ಇದ್ದಿಲ್ಲ. ದಕ್ಷಿಣದವರೆಲ್ಲರನ್ನೂ ಒಟ್ಟಾರೆ ಮದ್ರಾಸಿಗಳೆಂದು ಕರೆಯುತ್ತಿದ್ದರು. ಈಗ ಟಿವಿ ಮಾಧ್ಯಮಗಳಿಂದ, ಮಾಹಿತಿ ತಂತ್ರಜ್ಞಾನದಿಂದ, ಸಿಲಿಕಾನ್ ನಗರ ಬೆಂಗಳೂರು ಹೊರಜಗತ್ತಿಗೆ ತೆರೆದುಕೊಂಡಾಗಿನಿಂದ ಕನ್ನಡ ಭಾಷಿಗರ ಬಗ್ಗೆ, ಭಿನ್ನ ಭಿನ್ನ ಸಂಸ್ಕೃತಿ, ಭಾಷೆ, ಕಲೆಗಳ ಬಗ್ಗೆ ಇಲ್ಲಿನವರಿಗೆ ತಿಳುವಳಿಕೆ ಮೂಡಿದೆ. ಕನಿಷ್ಠಪಕ್ಷ ಈ ತಲೆಮಾರಿನವರಿಗೆ ತಮ್ಮ ಕಲೆ–ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳುವ ಎಲ್ಲ ಮಾಹಿತಿ ತಾಂತ್ರಿಕ ಅನುಕೂಲಗಳು ಲಭಿಸಿವೆ ಎಂದರು. ರಾಷ್ಟ್ರದ ರಾಜಧಾನಿಯಲ್ಲಿ ಉತ್ತಮ ಕೆಲಸಗಳನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಕಾರ್ಯವೈಖರಿಗೆ ತಮ್ಮ ಮೆಚ್ಚುಗೆ ಸೂಚಿಸಿದರು.

ಉದ್ಘಾಟನಾ ಸಮಾರಂಭದ ನಂತರ 'ಕನ್ನಡದಲ್ಲಿ ಇತ್ತೀಚಿನ ಸಾಂಸ್ಕೃತಿಕ ಬೆಳವಣಿಗೆಗಳು' ಕುರಿತ ಸಂವಾದ ಗೋಷ್ಠಿಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ವಹಿಸಿದ್ದರು. ಗೋಷ್ಠಿಯ ಆಶಯನುಡಿಗಳನ್ನಾಡಿದ ಶಿಕ್ಷಣ ತಜ್ಞರಾದ ಎಂ.ಎಚ್. ಕೃಷ್ಣಯ್ಯ ಅವರು ಸಾಂಸ್ಕೃತಿಕ ಬದಲಾವಣೆ–ಬೆಳವಣಿಗೆಯ ಒಂದು ಅಂಶವೇ ಎಂಬುದನ್ನು ವಿಶ್ಲೇಷಿಸುತ್ತ, ಸಂಸ್ಕೃತಿ ಬೇರೆ, ನಾಗರೀಕತೆ ಬೇರೆ. ವ್ಯಕ್ತಿಯ ನೆಲೆಯಲ್ಲಿ ಭತ್ತ–ಪ್ರಕೃತಿ, ಅನ್ನ ಸಂಸ್ಕೃತಿ. ಬದುಕಿನಲ್ಲಿ ಅನುಭವದಿಂದ ಬೆಂದು ಬೆಂದು ಪಕ್ವತೆಯನ್ನು ಪಡೆವುದೇ ಸಂಸ್ಕೃತಿ. ನಾಗರೀಕತೆಗೆ ಪ್ರಗತಿ ಎಂದಿರುತ್ತದೆ. ಆದರೆ ಸಂಸ್ಕೃತಿಗೆ ಪ್ರಗತಿ, ಮೇಲಾದ್ದು, ಕೀಳಾದ್ದು ಎಂದಿರುವುದಿಲ್ಲ. ನಾಗರೀಕತೆ ನಮ್ಮ ಜೀವನವನ್ನು ಕಲ್ಪಿಸಿಕೊಳ್ಳಲು ಅನುವಾದರೆ, ಜೀವನವನ್ನು ಹಸನಾಗಿಸಿಕೊಳ್ಳಲು ಪೂರಕವಾದುದು ಸಂಸ್ಕೃತಿ. ಸಂಸ್ಕೃತಿಯನ್ನು ಸಂಪಾದಿಸಬೇಕಾಗುತ್ತದೆ ಎಂದು ಸಂಸ್ಕೃತಿ ಮತ್ತು ನಾಗರೀಕತೆಯ ವ್ಯತ್ಯಾಸವನ್ನು ವಿದ್ವತ್ಪೂರ್ಣವಾಗಿ ವ್ಯಾಖ್ಯಾನಿಸಿದ ಕೃಷ್ಣಯ್ಯ ಅವರು ಜಾಗತೀಕರಣದ ಹಿನ್ನೆಲೆಯಲ್ಲಿ ನಮ್ಮ ನಮ್ಮ ಸಂಸ್ಕೃತಿಯ ಮೇಲಾಗುತ್ತಿರುವ ಪರಿಣಾಮಗಳನ್ನು ಎಳೆ ಎಳೆಯಾಗಿ ಬಿಡಿಸಿ ಒಂದು ಸಂಪೂರ್ಣ ಚಿತ್ರಣವನ್ನು ನೀಡಿದರು.

ಮೊದಲಿಗೆ ತಮ್ಮ ವಿಷಯವನ್ನು ಮಂಡಿಸಿದ ಭಾರತ–ಅಮೇರಿಕ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತ, ಸಾಂಸ್ಕೃತಿಕ ಬೆಳವಣಿಗೆಯೆಂದರೆ–ಒಂದು ಮಗು ಹುಟ್ಟಿನಿಂದ ಸಾವಿನವರೆಗಿನ ಪ್ರತಿಯೊಂದು ಘಟ್ಟವೂ ಸಂಸ್ಕೃತಿಯ ಭಾಗವೇ ಆಗಿದೆ. ವರುಷದಿಂದ ವರುಷಕ್ಕೆ ಆಗುವ ಬದಲಾವಣೆಯ ಬಾಹ್ಯ ಸಂಸ್ಕೃತಿಯೊಂದಾದರೆ ಅಂತರಂಗದ ಸಂಸ್ಕೃತಿಯಲ್ಲಿ ನಮ್ಮನ್ನು ಸಂತೋಷಪಡಿಸಲಾಗದ ಸಂಸ್ಕೃತಿಯೊಂದು ನಮ್ಮ ಸುತ್ತಮುತ್ತಲೂ ನಿರ್ಮಾಣಗೊಂಡಿದೆ. ಇಡೀ ಕರ್ನಾಟಕದ ರಾಜಕೀಯ, ಅರಾಜಕತೆ, ಅವ್ಯವಸ್ಥೆ, ಜಾತಿಯನ್ನು ಒಂದು ಉಲ್ಬಣಾವಸ್ಥೆಗೆ ತಂದಿದೆ. ಜಾತಿವ್ಯವಸ್ಥೆಯ ಉಲ್ಬಣಾವಸ್ಥೆಯಲ್ಲಿ ನಮ್ಮ ಸಾಂಸ್ಕೃತಿಕ ಸನ್ನಿವೇಶ ಭಯಾನಕವಾಗಿದೆ ಎಂದು ನುಡಿದ ಅವರು ಸಂಸ್ಕೃತಿಯ ಅಪಮೌಲ್ಯೀಕರಣವಾಗುತ್ತಿರುವ ಅನೇಕ ಉದಾಹರಣೆಗಳನ್ನು ನೀಡಿದರು. ಅಪಾರ ಸಸ್ಯಸಂಪತ್ತುಳ್ಳ ಪಶ್ಚಿಮ ಘಟ್ಟಗಳನ್ನು ವಿಶ್ವಪರಂಪರೆಯ ತಾಣಕ್ಕೆ ಸೇರಿಸುವ ಯುನೆಸ್ಕೋ ಮಾನ್ಯತೆಯನ್ನು ಯಾವ ತಾತ್ವಿಕ ವಿವೇಚನೆಯಿಲ್ಲದೇ ಸದನದಲ್ಲಿ ವಿರೋಧಿಸಲಾಯಿತು. ಒಂದು ಸಮುದಾಯದ ಸೊತ್ತಾಗಿದ್ದ

ಜನಪದ ಕಲೆಗಳು ಈಗ ಒಂದು ಜಾತಿಯ ಕೈವಶವಾಗಿ ಹೋಗಿವೆ ಎಂದ ಡಾ.ಬಿಳಿಮಲೆ ಅವರು ಜನಪದ ಕಥಾಕಾವ್ಯ ಕೋಟಿಚೆನ್ನಯ್ಯನ ಕಥೆಯ ಬಗ್ಗೆ ಮಾತನಾಡುವುದು ಕೂಡ ಈಗಿನ ಸಂದರ್ಭದಲ್ಲಿ ಸಂವೇದನಾಶೀಲವಾಗಿ ಬಿಡುವ ಸಾಧ್ಯತೆಗಳನ್ನು, ಕುಸಿಯುತ್ತಿರುವ ಸಂಸ್ಕೃತಿ ಹಾಗೂ ಸಾಮಾಜಿಕ ಮೌಲ್ಯಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ನಂತರ ವಿಷಯ ಮಂಡಿಸಿದ ಖ್ಯಾತ ಚಲನಚಿತ್ರ ನಿರ್ದೇಶಕ ಬಿ. ಸುರೇಶ್ ಅವರು ಈ ಶತಮಾನದ ಆಧುನಿಕ ಮಾಧ್ಯಮದ ಆತಂಕಕಾರಿ ಬದಲಾವಣೆಗಳ ಕುರಿತು ಮಾತನಾಡಿದರು. ಒಂದು ಕಾಲಕ್ಕೆ ನಿರಂತರವಾಗಿ ಸಂತೋಷ ಕೊಡುವ ರಂಗಭೂಮಿ, ಸಿನೆಮಾ, ದೂರದರ್ಶನಗಳು ಹಾಡಿನ ಉತ್ಸವ, ಸಂಗೀತ ಉತ್ಸವವಾಗಿ, ಮಾತಿನ ಮೂಲಕ ನಟರನ್ನು ಬೆಳೆಸುವ, ಸಂಸ್ಕೃತಿಯನ್ನು, ಕಲೆಯನ್ನು ಬೆಳೆಸುವ ಸಶಕ್ತ ಮಾಧ್ಯಮಗಳಾಗಿದ್ದವು. ಈ ಶತಮಾನದ ಉಪಗ್ರಹವಾಹಿನಿಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳು, ಸ್ಫೋಟ ಸುದ್ದಿಗಳು, ಪೀಪ್ಲೀ ಲೈವ್ ಮಾದರಿ ನಾವು ನೋಡುವ ಕ್ರಮವನ್ನೇ ಬದಲಾಯಿಸಿಬಿಟ್ಟಿವೆ. ಜನರ ಆಲೋಚನಾ ಕ್ರಮ ಬದಲಾಗಿದೆ. ಕ್ರಿಕೆಟ್ ಸಂಸ್ಕೃತಿ, ಸರಕು ಸಂಸ್ಕೃತಿಯಲ್ಲಿ ಆಯ್ಕೆಯೆಂಬುದು ಗೌಣವಾಗಿದೆ. ಈ ಶತಮಾನದ ಬದಲಾಗುತ್ತಿರುವ ಸಾಂಸ್ಕೃತಿಕ ಮೌಲ್ಯಗಳ ಸುತ್ತ ಬೆಳಕು ಚೆಲ್ಲಿದ ಸುರೇಶ್ ಅವರು ಇಂದಿನ ಸಿನೇಮಾ ಜಗತ್ತು ಪ್ರೇಕ್ಷಕರನ್ನು ಕಳೆದುಕೊಂಡ ಜಗತ್ತು ಎಂದರು.



ಗೋಷ್ಠಿಯ ಅಧ್ಯಕ್ಷತೆ ವಹಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಇತ್ತೀಚಿನ ಸಾಂಸ್ಕೃತಿಕ ಬೆಳವಣಿಗೆಗಳಲ್ಲಿ ಹೇಗೆ ಒಂದು ಜಾತಿಗೆ, ಒಂದು ಸಮುದಾಯಕ್ಕೆ ಸೀಮಿತವಾಗಿದ್ದ ಜನಪದರ ದೇಸೀ ಕಲೆಗಳು ಇಂದು ಕೇವಲ ಪ್ರದರ್ಶನ ಕಲೆಗಳಾಗಿ ಮತ್ಯಾರೋ ಅವುಗಳ ಕುಶಲತೆಯನ್ನು ಕಲಿತು ಬಳಸಿಕೊಂಡು ಲಾಭ ಪಡೆಯುತ್ತಿರುವಂತಾಗಿದೆ. ಆದ್ದರಿಂದ ಇಂಥ ಕಲೆಗಳನ್ನು ಡಿಜಿಟಲಿಕರಣಗೊಳಿಸಬೇಕು. ಅಸಲೀ ಹಕ್ಕುದಾರರಿಗೆ ಅದರ ಸ್ವಾಮ್ಯತೆ, ಪ್ರಯೋಜನಗಳು ಲಭಿಸುವಂತಿರಬೇಕೆಂಬ ಮಾತನ್ನು ತಿಳಿಸಿ ತಮ್ಮ ಕರ್ಮಕ್ಷೇತ್ರವಾದ ಅಂತಾರಾಷ್ಟ್ರೀಯ ಕಾನೂನು ಒಂದು ಕಾಲಕ್ಕೆ ಬೇಡಿಕೆಯಲ್ಲಿದ್ದಿಲ್ಲ. ಈಗ ಪಾಶ್ಚಾತ್ಯರೂ ಕಾನೂನು ವಿಷಯದಲ್ಲಿ ಭಾರತದತ್ತ ಭರವಸೆ ತಾಳುವಂತಾಗಿದೆ. ಕಾನೂನಿನ ಸಂವೇದನೆಗಳು ಅಲ್ಲಿಗಿಂತ ಇಲ್ಲಿ ಹೆಚ್ಚು ಪ್ರಸ್ತುತವಾಗಿವೆಯೆಂದು ನುಡಿದರು. ಈ ಗೋಷ್ಠಿಯಲ್ಲಿ ಕನ್ನಡ ಪ್ರಾಧಿಕಾರದ ಸಂಚಾಲಕರು, ಸಾಹಿತಿ ಚಿಂತಕರಾದ–ರಂಗಾರೆಡ್ಡಿ ಕೋಡಿರಾಂಪುರ, ಕಾರ್ಮಿಕ ಮುಖಂಡರು, ಕನ್ನಡ ಹೋರಾಟಗಾರ–ರಾ.ನಂ. ಚಂದ್ರಶೇಖರ್, ನಟ, ರಂಗಭೂಮಿ ಕಲಾವಿದ–ಕೆ.ವಿ. ನಾಗರಾಜಮೂರ್ತಿ ಹಾಗೂ ಕನ್ನಡ ಹೋರಾಟಗಾರ ಸಿದ್ದಯ್ಯ ಇವರುಗಳು ಉಪಸ್ಥಿತರಿದ್ದರು. ಕೊನೆಯಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ವಂದನಾರ್ಪಣೆ ಸಲ್ಲಿಸಿದರು, ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಕಾರ್ಯಕ್ರಮ ನಿರ್ವಹಿಸಿದರು.

ಗೋಷ್ಠಿಯ ನಂತರದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಉಷಾ ದಾತಾರ್ ತಂಡದ ಕಲಾವಿದೆಯರು ನೃತ್ಯರೂಪಕ ಪ್ರಸ್ತುತಪಡಿಸಿದರು. ತದನಂತರ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಮುಖ್ಯಮಂತ್ರಿ ಚಂದ್ರು ಅವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜೀ ಅಧ್ಯಕ್ಷ ಡಾ. ಹಂಪನಾಗರಾಜಯ್ಯ, ಖ್ಯಾತ ಸಾಹಿತಿಗಳು ಹಾಗೂ ಚಲನಚಿತ್ರ ನಿರ್ದೇಶಕ, ನಾಗತಿಹಳ್ಳಿ ಚಂದ್ರಶೇಖರ್, ಕರ್ನಾಟಕ ರಾಜ್ಯದ ದೆಹಲಿ ವಿಶೇಷ ಪ್ರತಿನಿಧಿ, ಬೈಕರೆ ನಾಗೇಶ್, ಮಾಜಿ ಪ್ರಧಾನಮಂತ್ರಿಗಳ ಪತ್ರಿಕಾ ಸಲಹೆಗಾರ, ಐ. ರಾಮಮೋಹನ ರಾವ್ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ. ಮುರಳೀಧರ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಮೊದಲಿಗೆ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು–ಈ ಸಂಸ್ಕೃತಿ ಉತ್ಸವವನ್ನು ರಾಷ್ಟ್ರದ ರಾಜಧಾನಿಯಲ್ಲಿ ಅದ್ದೂರಿಯಾಗಿ ಆಯೋಜಿಸಿದ್ದಲ್ಲದೇ ಶಿಕ್ಷಣ, ಜಲ, ಉದ್ಯೋಗ ನೀತಿ ಇವುಗಳನ್ನು ರಾಷ್ಟ್ರೀಕರಣಗೊಳಿಸಲು ಕೇಂದ್ರಕ್ಕೆ ಮನವಿ ಸಲ್ಲಿಸುವ ನಿಯೋಗವೊಂದನ್ನು ರಾಜಧಾನಿಗೆ ಕರೆತಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಾರ್ಥಕ ಪ್ರಯತ್ನವನ್ನು ಶ್ಲಾಘಿಸುತ್ತ ಎಲ್ಲರನ್ನೂ ಅಭಿನಂದಿಸಿ ಈ ಕಾರ್ಯಕ್ರಮಕ್ಕೆ ಸ್ವಾಗತ ಕೋರಿದರು.

ನಮ್ಮ ಕನ್ನಡ ಭಾಷೆ ಸಾಹಿತ್ಯದ ವಿಶ್ವಕೋಶವಿದ್ದಂತೆ. ಜೈನ ಸಾಹಿತ್ಯವಿರಲಿ, ವಚನ ಸಾಹಿತ್ಯವಿರಲಿ, ದಾಸ ಸಾಹಿತ್ಯವಿರಲಿ ಅದು ನೂರಾರು ಜನ ವಿದ್ವಾಂಸರನ್ನು ನಾಡಿಗೆ ನೀಡಿದ ಮಹಾನ್ ಚೇತನ ಎಂದು ನುಡಿದ ಮುಖ್ಯ ಅತಿಥಿಗಳಾದ ಹಂ.ಪ. ನಾಗರಾಜಯ್ಯ ಅವರು ಮುಂದುವರಿದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ, ಗತ ಇತಿಹಾಸವನ್ನು ಅವಲೋಕಿಸುವ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ನಿರ್ಯಾತವನ್ನು ಮೊಟ್ಟ ಮೊದಲಿಗೆ ಆರಂಭಿಸಿದ್ದು ನಮ್ಮ ಕರಾವಳಿಯ ಮಂಡಲೇಶ್ವರಿ ಚನ್ನಭೈರಾದೇವಿ. ಅಖಂಡ 50 ವರ್ಷಗಳ ಕಾಲ ಮಂಡಲೇಶ್ವರಿಯಾಗಿ ಮೆಣಸು, ಅಕ್ಕಿ, ದಂತ, ಸಾಂಬಾರ ಪದಾರ್ಥಗಳನ್ನು ನಿರ್ಯಾತ ಮಾಡುತ್ತಿದ್ದಳು. ಆಗ ಯುರೋಪಿನಲ್ಲಿ ಮಲೇರಿಯಾ ಇದ್ದ ಕಾಲಕ್ಕೆ ಕರಿಮೆಣಸು ಔಷಧವಾಗಿ ಬಹು ಬೇಡಿಕೆಯಲ್ಲಿತ್ತು. ಭಾರತಕ್ಕೆ ಮೊದಲು ಆಕ್ರಮಿಸಿದ ಪೋರ್ಚುಗೀಸರ ದಬ್ಬಾಳಿಕೆಯನ್ನು ವಿರೋಧಿಸಿ ಮೊಟ್ಟ ಮೊದಲು ಹೋರಾಟಕ್ಕಿಳಿದವರು ಕರಾವಳಿ ರಾಣಿಯರಾದ ಚನ್ನಭೈರಾದೇವಿ, ಪದುಮಲಾದೇವಿ, ಅಬ್ಬಕ್ಕರಾಣಿಯರು ಎಂದ ಹಂಪನಾ ಅವರು ನಮ್ಮ ದೇಶದ ಚರಿತ್ರೆಯನ್ನು ಸಂಸ್ಕೃತಿಯ ನೆಲೆಯಲ್ಲಿ ಪುನರಾವಲೋಕನ ಮಾಡುವ ಅಗತ್ಯವಿದೆಯೆಂಬ ಮಾತನ್ನು ಹೇಳಿದರು.

ಖ್ಯಾತ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್ ಅವರು ಎಲ್ಲೆಲ್ಲೂ ಇರುವ ಕನ್ನಡಿಗರನ್ನು ಹುಡುಕಿ ಕನ್ನಡವನ್ನು, ಭಾರತವನ್ನು ಕಟ್ಟುವ ಕೆಲಸ ಈ ಜಾಗತೀಕರಣದ ಸಂದರ್ಭದಲ್ಲಿ ಎಂದಿಗಿಂತಲೂ ಹೆಚ್ಚಿನ ಅಗತ್ಯವಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕನ್ನಡಿಗರು ತಮ್ಮ ಕೀಳರಿಮೆಗಳನ್ನು ಬದಿಗಿಟ್ಟು ಪ್ರಪಂಚದ ಎಲ್ಲ ಶ್ರೇಷ್ಠತೆಗಳನ್ನು ಗ್ರಹಿಸಿಕೊಂಡು ಶ್ರೀಮಂತರಾಗಬಹುದು. ಇಲ್ಲವಾದರೆ ಕನ್ನಡಿಗರು ಕೂಪಗಳಾಗಿ–ದ್ವೀಪಗಳಾಗಬಹುದು ಎಂಬ ಎಚ್ಚರಿಕೆಯ ಮಾತನ್ನು ನುಡಿದ ನಾಗತಿಹಳ್ಳಿ ಚಂದ್ರಶೇಖರ್ ದೆಹಲಿ ಕರ್ನಾಟಕ ಸಂಘದೊಡನೆ ತಮ್ಮ ಬಾಂಧವ್ಯ ಇಂದು ನಿನ್ನೆಯದಲ್ಲ. ನಿರಂತರವಾಗಿ ಒಡನಾಟವಿದ್ದೇ ಇದೆಯೆಂದು ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ 'ಕರಿಭಂಟ' ನಾಟಕವನ್ನು ಪ್ರದರ್ಶಿಸಿದ್ದನ್ನು ಸ್ಮರಿಸಿದರು.

ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಗಳಾದ ಬೈಕರೆ ನಾಗೇಶ್ ಅವರು ಮಾತನಾಡುತ್ತ ಮುಖ್ಯಮಂತ್ರಿ ಚಂದ್ರು ಅವರು ನಿಯೋಗದ ಪ್ರಸ್ತಾವನೆ ತಮ್ಮ ಮುಂದೆ ಇಟ್ಟಾಗಿನಿಂದ ಹಿಡಿದು ಇಂದಿನವರೆಗೂ ಅದನ್ನು ಅತ್ಯಂತ ಶಿಸ್ತು–ದಕ್ಷತೆಯಿಂದ ನಡೆಸಿಕೊಂಡು ಬಂದ ಅವರ ಕಾರ್ಯವೈಖರಿಯನ್ನು ಆಪ್ಯಾಯವಾಗಿ ಶ್ಲಾಘಿಸಿದರು. ಹೊರನಾಡ ಕನ್ನಡಿಗರನ್ನು ಒಂದುಗೂಡಿಸಿ ಸಂಸ್ಕೃತಿಯನ್ನು ಪರಿಚಯಿಸುವ ಉತ್ಸವಗಳು ಅರ್ಥಪೂರ್ಣ ಹಾಗೂ ಅತ್ಯವಶ್ಯಕ ಎಂದು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ಮಾಜಿ ವಾರ್ತಾಧಿಕಾರಿ ಐ. ರಾಮಮೋಹನ ರಾವ್ ಅವರು ರಾಜಧಾನಿಯಲ್ಲಿ ನಮ್ಮ ಕನ್ನಡಿಗರು ತಮ್ಮ ಹಿರಿಮೆಯನ್ನು ಮೆರೆದಿದ್ದಾರೆ. ಹಿಂದೆ ಕರ್ನಾಟಕದಿಂದ ದೆಹಲಿ ಕನ್ನಡಿಗರಿಗೆ ಸಹಾಯ ಬೇಕಿದ್ದಾಗ ತುಂಬಾ ಕಾಯಬೇಕಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸಮಾಡುತ್ತಿರುವ ದೆಹಲಿ ಕರ್ನಾಟಕ ಸಂಘವು ಕರ್ನಾಟಕದಲ್ಲಿ ಈಗಾಗಲೇ ತನ್ನ ಛಾಪು ಮೂಡಿಸಿದೆ. ಅದಕ್ಕಾಗಿ ವಿಶೇಷವಾಗಿ ದುಡಿದ ಅನೇಕ ಮಹನೀಯರಿದ್ದಾರೆಂಬ ಹೆಮ್ಮೆಯ ಮಾತುಗಳನ್ನು ನುಡಿದರು.

ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರಬೇಕಿದ್ದ ರಾಜ್ಯಸಭಾ ಸದಸ್ಯೆ, ರಂಗ



ಕೋಲಾಟ



ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ಗಣ್ಯರು



ಸಮು



ಯುವರಾಜ್ ಮತ್ತು ವೀಣಾ ಮರಡೂರ್ ಅವರಿಂದ ಗೀತಗಾಯನ



ಸವಿತಾ ಇನಾಂದಾರ್ ಮತ್ತು ಸಂಗಡಿಗರಿಂದ ಗೀತಗಾಯನ



ಕಂಸ



ಶ್ರೀ ಕಾಲಭೈರವೇಶ್ವರ ಯುವಕ ಸಂಘ ಜಾನಪದ ಕಲಾ ಸಂಘದವರಿಂದ ಪೂಜಾಕುಣಿತ



ಕಾರ್ಯಕ್ರಮ ಉದ್ಘಾಟಿಸಿದ ಗೊ.ರು.ಚ. ಮತ್ತು ಇತರ ಗಣ್ಯರು

ಕಲಾವಿದೆ ಬಿ. ಜಯಶ್ರೀ ಅವರು ಬೆಂಗಳೂರಿನಲ್ಲಿ ಬೇರೊಂದು ಕಲಾಪಕ್ಕೆ ತಮ್ಮ ವಿಶೇಷ ಪ್ರತಿನಿಧಿಕರಣವಿದ್ದುದರಿಂದ ಮೊದಲೇ ಸಂಘಕ್ಕೆ ಆಗಮಿಸಿ ಶುಭ ಹಾರೈಸಿದ್ದರು. ಕೊನೆಗೆ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಡಾ.ಮುಖ್ಯಮಂತ್ರಿ ಚಂದ್ರು ಅವರು ಮಾತನಾಡಿ ಕರ್ನಾಟಕ ಏಕೀಕರಣದ ನಂತರವೂ ಕನ್ನಡ ಕಡ್ಡಾಯ ಆಗಿಲ್ಲವೆಂದು ಖೇದವಾಗುತ್ತದೆ. ಎರಡು ಸಾವಿರಕ್ಕೂ ಹಿಂದಿನ ಇತಿಹಾಸವಿರುವ, ಸತ್ವವುಳ್ಳ ಕನ್ನಡವನ್ನು ಇಂದು ಉಳಿಸಿರುವವರು ಗ್ರಾಮೀಣ ಜನತೆ. ಭಾಷೆಯ ಜತೆ ಬದುಕಿದೆ, ಬದುಕಿನ ಜತೆ ಸಂಸ್ಕೃತಿಯಿದೆ, ಸಮಾಜವಿದೆ, ದೇಶದ ಹಿತವೂ ಇದೆ. ಒಕ್ಕೂಟದ ವ್ಯವಸ್ಥೆಯಲ್ಲಿ ವಿಭಿನ್ನ ಭಾಷೆ, ವಿಭಿನ್ನ ಸಂಸ್ಕೃತಿ ಹೊಂದಿರುವ ವಿಭಿನ್ನತೆಯಲ್ಲಿ ಏಕತೆಯನ್ನು ಕಾಣುತ್ತಿರುವ ದೇಶ ಭಾರತ ಎಂಬ ಎಂದು ಮುತ್ತಿನಂಥ ಮಾತನ್ನು ಹೇಳಿದರು. ಸ್ಥಳೀಯರಿಗೆ ಉದ್ಯೋಗ, ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ, ಜಲ ನೀಡಿಕೆ ಈ ಮೂರು ನೀತಿಗಳು ಮೂರು ಭಾಷೆಗಳಿಗೆ ಸಂಬಂಧಪಟ್ಟಿದ್ದು ಅನ್ಯ ಭಾಷಿಗರು ವೃದ್ಧಿಹೊಂದಿ ಆ ಮಣ್ಣಿನ ಮಕ್ಕಳು ಭಿಕ್ಷೆಬೇಡುವ ಪ್ರಸಂಗ ಬಂದಿದೆ. ಇಂಗ್ಲಿಷ್ ವ್ಯಾಮೋಹ ಜ್ಞಾನಾರ್ಜನೆಗಾಗಿ ಇರಲಿ, ಆದರೆ ಬದುಕಿಗೆ ನಮ್ಮ ಮಾತೃಭಾಷೆಯೇ ಬೇಕು ಎಂದು ಜನರಲ್ಲಿ ತಿಳಿವಿನ ಎಚ್ಚರಿಕೆ ಮೂಡಿಸಿದರು. ನಮ್ಮ ಭಾರತದಲ್ಲಿ 2300 ಸಾವಿರ ಭಾಷೆಗಳಿವೆ. ಆದರೆ ಯಾವ ಭಾಷೆಗೂ ಅಳಿವಿನ ಭಯವಿಲ್ಲ. ಯುರೋಪಿನಲ್ಲಿ ಹದಿನೈದು ದಿನಕ್ಕೊಂದು ಭಾಷೆ ಸಾಯುತ್ತಿದೆ. ಪ್ರಾಂತೀಯ ಭಾಷೆಗಳ ಸತ್ವವನ್ನು, ಪ್ರಾಚೀನ ಕಾವ್ಯದ ಸೊಗಡನ್ನು ಉಳಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಸಂಸ್ಕೃತಿಯನ್ನು ಬಿಂಬಿಸುವ ಚಟುವಟಿಕೆಗಳು



...ಹ ನೃತ್ಯ



ನಾಡಗೀತೆ ಪ್ರಸ್ತುತಪಡಿಸಿದ ದೆಹಲಿ ಕರ್ನಾಟಕ ಸಂಘದ ಕಲಾವಿದರು



ಶ್ರೀ ಸಿದ್ದರಾಮೇಶ್ವರ ಜಾನಪದ ಕಣಿ ಹಲಿಗೆ ಕಲಾವಿದರಿಂದ –ಕಣಿ ಹಲಿಗೆ



...ಾಳೆ



ಸ್ಫೂರ್ತಿ ಮಹಿಳಾ ವೀರಗಾಸೆ ಕಲಾ ತಂಡದಿಂದ ವೀರಗಾಸೆ



ಡೊಳ್ಳು ಕುಣಿತ




ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು

ನಿರಂತರ ನಡೆಯುತ್ತಿರಬೇಕೆಂಬ ಅಂಶವನ್ನು ಒತ್ತಿಹೇಳಿದರು. ಕಾರ್ಯಕ್ರಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕೆ.ವಿ. ನಾಗರಾಜಮೂರ್ತಿ ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಸ್ವಾಗತಿಸಿದರು ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

ನಂತರ ಗೀತಗಾಯನ ಕಾರ್ಯಕ್ರಮದಲ್ಲಿ ಖ್ಯಾತ ಜನಪದ ಗಾಯಕ ಯುವರಾಜ್ ಎಲ್ಲೋ ಜೋಗಪ್ಪ ನಿನ್ನರಮನೆ, ರೈತನ ಹಾಡು ಮೊದಲಾದ ಜನಪದ ಹಾಡುಗಳ ಸವಿಯುಣಿಸಿದರೆ, ದೆಹಲಿ ಕನ್ನಡತಿ, ಖ್ಯಾತ ಹಿಂದೂಸ್ತಾನಿ ಗಾಯಕಿ ವೀಣಾ ಮರಡೂರ್ ತಮ್ಮ ಸಿರಿಕಂಠದಲ್ಲಿ ಮಧುರವಾದ ಕುವೆಂಪುಗೀತೆ ಹಾಗೂ ವಚನಗಳನ್ನು ಹಾಡಿ ರಂಜಿಸಿದರು. ಜನಕಪುರಿ ಮಹಿಳಾ ಮಂಡಳಿಯ ಕಲಾವಿದೆಯರಾದ ಸವಿತಾ ಇನಾಂದಾರ್ ಮತ್ತು ಸಂಗಡಿಗರು ಗೀತಗಾಯನವನ್ನು ನೀಡಿದರು. ಇದರ ನಂತರ ಜಾನಪದ ಸೌರಭದಲ್ಲಿ ಶ್ರೀ ಕಾಲಭೈರವೇಶ್ವರ ಯುವಕ ಸಂಘ ಜಾನಪದ ಕಲಾ ಸಂಘದವರಿಂದ ಪೂಜಾ–ಕುಣಿತ, ಸ್ಫೂರ್ತಿ ಮಹಿಳಾ ವೀರಗಾಸೆ ಕಲಾ ತಂಡದಿಂದ ವೀರಗಾಸೆ, ಶ್ರೀ ಸಿದ್ದರಾಮೇಶ್ವರ ಜಾನಪದ ಕಣಿ ಹಲಿಗೆ ಸಾಂಸ್ಕೃತಿಕ ಕಲಾವಿದರು ಅಮದಿಹಾಳೆಯ ತಂಡದಿಂದ ಕಣಿ ಹಲಿಗೆ ಹಾಗೂ ಡೊಳ್ಳುಕುಣಿತ ಮತ್ತು ಕಂಸಾಳೆ ಕಾರ್ಯಕ್ರಮಗಳು ನಡೆದವು.

ಸಂಘದ ಕಲಾವಿದೆ ಕು. ಸಪ್ನಾ ಅತ್ತಾವರ್ ಭಾಗ್ಯದ ಲಕ್ಷ್ಮೀ ಬಾರಮ್ಮ, ವೀರ ಹನುಮ ಬಹು ಪರಾಕ್ರಮ ಮತ್ತು ಕೃಷ್ಣಾ ನೀ ಬೇಗನೆ ಬಾರೋ ಹಾಡಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದರು.

❑ **ರೇಣುಕಾ ನಿಡಗುಂದಿ**



ಸಪ್ನಾ ಅತ್ತಾವರ್

# ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗ ಕೇಂದ್ರಕ್ಕೆ ಭೇಟಿ



ಕರ್ನಾಟಕವನ್ನು ಮಾತ್ರವೇ ಅಲ್ಲದೆ ಇಡಿಯಾಗಿ ದೇಶವನ್ನು ಕಾಡುತ್ತಾ ಇರುವ ಹತ್ತು ಹಲವು ಸಮಸ್ಯೆಗಳಲ್ಲಿ ಅತೀ ಮಹತ್ವದ ಮೂರು ಸಮಸ್ಯೆಗಳಾದ ಶಿಕ್ಷಣ, ಉದ್ಯೋಗ ಮತ್ತು ಜಲ ಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ನೀತಿ ರೂಪಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಅಧ್ಯಕ್ಷರಾದ ಡಾ. ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದಲ್ಲಿ ಸಾಹಿತಿಗಳು, ಸಾಂಸ್ಕೃತಿಕ ಚಿಂತಕರು, ಕಾರ್ಮಿಕರು ಮತ್ತು ಕನ್ನಡಪರ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ನಿಯೋಗ ಒಂದನ್ನು ಡಿಸೆಂಬರ್ 10 ರಿಂದ 14ರವರೆಗೆ ದೇಶದ ರಾಜಧಾನಿಯಾದ ನವದೆಹಲಿಗೆ ಕರೆತಂದು ನಾಡಿನ ಎಲ್ಲಾ ಸಂಸದರನ್ನು ಹಾಗೂ ಸಂಬಂಧಪಟ್ಟ ಇಲಾಖೆಯ ಸಚಿವರನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿತು. ಈ ನಿಯೋಗದಲ್ಲಿ ಸಾಹಿತಿಗಳಾದ ಗೊ.ರು. ಚನ್ನಬಸಪ್ಪ, ಹಂ.ಪ. ನಾಗರಾಜಯ್ಯ, ಎಂ.ಎಚ್. ಕೃಷ್ಣಯ್ಯ, ಬರಗೂರು ರಾಮಚಂದ್ರಪ್ಪ, ರಂಗಾರೆಡ್ಡಿ ಕೋಡಿರಾಂಪುರ, ಚಲನಚಿತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಬಿ. ಸುರೇಶ ಮತ್ತು ಕಾರ್ಮಿಕ ಮುಖಂಡರಾದ ಮತ್ತು ಕನ್ನಡಪರ ಸಂಘಟನೆಗಳ ಪ್ರತಿನಿಧಿಗಳಾಗಿ ಸಿದ್ಧಯ್ಯ, ರಾ.ನಂ. ಚಂದ್ರಶೇಖರ್, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಯಾದ ಬೈಕೆರೆ ನಾಗೇಶ್ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಮುರಳೀಧರ್ ಕೆ. ಅವರುಗಳು ಭಾಗವಹಿಸಿದ್ದರು.

**1. ಶಿಕ್ಷಣ ತಜ್ಞರ ಅಭಿಪ್ರಾಯದಂತೆ ಪ್ರಾಥಮಿಕ ಶಿಕ್ಷಣದಲ್ಲಿ ರಾಜ್ಯಭಾಷೆ (ಮಾತೃಭಾಷೆ) ಮಾಧ್ಯಮಕ್ಕೆ ಆದ್ಯತೆ ದೊರೆಯುವಂತೆ ಮಾಡಲು 'ರಾಷ್ಟ್ರೀಯ ಶಿಕ್ಷಣ ನೀತಿ'ಯನ್ನು ಜಾರಿಗೆ ತಂದು, ಆ ಮೂಲಕ ಶಿಕ್ಷಣದಲ್ಲಿ ಸಮಾನತೆಯನ್ನು ತರಬೇಕಾದುದು ತುರ್ತು ಅಗತ್ಯವಾಗಿದೆ.**

ಯಾವುದೇ ದೇಶದಲ್ಲಿ ಪ್ರತಿಯೊಬ್ಬರಿಗೂ ಗುಣಮಟ್ಟದ ಹಾಗೂ ಸಮಾನ ಶಿಕ್ಷಣ ನೀಡಬೇಕೆಂಬ ಕನಸು ಎಲ್ಲರದ್ದಾಗಿದೆ. ಅಂತೆಯೇ ಇಂತಹ ಗುಣಮಟ್ಟದ ಶಿಕ್ಷಣ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಮೂಲಕ ನಡೆದಾಗ ಮಕ್ಕಳು ಹೆಚ್ಚು ಗಮನವಿಟ್ಟು ಕಲಿಯುತ್ತಾರೆ ಎಂಬುದು ಶಿಕ್ಷಣ ತಜ್ಞರ ಅಭಿಮತವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ (ಅಂದರೆ ಆಯಾ ರಾಜ್ಯಭಾಷೆಗಳ) ಮೂಲಕ ನಡೆಸಲು ಅನೇಕ ಹಿನ್ನಡೆಗಳಾಗಿವೆ. ಈ ಹೆಜ್ಜೆಗಳನ್ನು ಸ್ಪಷ್ಟಗೊಳಿಸಿ ರಾಷ್ಟ್ರೀಯ ನೀತಿಯನ್ನು ಜಾರಿಗೊಳಿಸಬೇಕಾಗಿದೆ.

**2. ಸ್ಥಳೀಯರಿಗೆ / ಸ್ಥಳೀಯ ಭಾಷಿಕರಿಗೆ ಉದ್ಯೋಗದಲ್ಲಿ ಆದ್ಯತೆ ದೊರೆಯುವಂತೆ ಮಾಡಲು 'ರಾಷ್ಟ್ರೀಯ ಉದ್ಯೋಗ ನೀತಿ'ಯನ್ನು ಜಾರಿಗೆ ತರುವುದು ಅಗತ್ಯವಾಗಿದೆ.**

ಭಾರತದ ಯಾವುದೇ ಪ್ರಜೆಯು ಯಾವುದೇ ರಾಜ್ಯದಲ್ಲಿ ನೆಲೆಸಿ ವೃತ್ತಿಯನ್ನು ಮಾಡುವ ಅವಕಾಶವನ್ನು ಭಾರತದ ಸಂವಿಧಾನವು ನೀಡಿದೆ. ಇದು ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಶ್ರೇಷ್ಠ ನಿಲುವು. ಆದರೆ ಈ ನಿಲುವನ್ನು ಪಾಲಿಸುವಲ್ಲಿ ಸ್ಥಳೀಯ ಭಾಷಿಕರಿಗೆ ಅನ್ಯಾಯವಾಗುತ್ತಾ ಇರುವುದನ್ನು ಅನೇಕ ವರದಿಗಳು ಸ್ಪಷ್ಟವಾಗಿ ತಿಳಿಸುತ್ತಿವೆ. ಭಾಷಾವಾರು ಪ್ರಾಂತ್ಯ ರಚನೆಯಾದ ಕಾಲಘಟ್ಟದಲ್ಲಿಯೇ ಸ್ಥಳೀಯರಿಗೆ ಹೆಚ್ಚು ಉದ್ಯೋಗಾವಕಾಶಗಳು ದೊರೆಯಬೇಕೆಂಬ ಬೇಡಿಕೆಯನ್ನು ಎಲ್ಲಾ ರಾಜ್ಯಗಳೂ ಕೇಂದ್ರದ ಮುಂದಿಟ್ಟಿವೆ. ದೇಶದ ಯಾವುದೇ ಪ್ರಜೆ ಯಾವುದೇ ಪ್ರದೇಶಕ್ಕೆ ಉದ್ಯೋಗ ಅಥವಾ ವ್ಯಾಪಾರದ ಕಾರಣವಾಗಿ ಹೋಗುವವರಿಗೆ ಇರುವ ಮುಕ್ತ ಅವಕಾಶಕ್ಕೆ ಧಕ್ಕೆ ಬಾರದಂತೆ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶ ದೊರೆಯುವಂತಹ ನೀತಿಯೊಂದನ್ನು ಕೇಂದ್ರ ಸರ್ಕಾರವು ಜಾರಿಗೆ ತರಬೇಕಾಗಿದೆ.

**3. ಜನರ ಮೂಲಭೂತ ಅಗತ್ಯವಾದ ನದಿನೀರು ಬಳಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯವೂ ಸೇರಿದಂತೆ ಇತರ ರಾಜ್ಯಗಳು ಅನೇಕ ಆತಂಕಗಳನ್ನು ಎದುರಿಸಬೇಕಾಗಿ ಬಂದಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು 'ರಾಷ್ಟ್ರೀಯ ಜಲ ನೀತಿ'ಯನ್ನು ಜಾರಿಗೆ ತರುವುದು ಅಗತ್ಯವಾಗಿದೆ.**

ನೀರು ಜೀವದ್ರವ್ಯ. ಅದು ಜೀವ ಸಂಕುಲದ ಮೂಲಭೂತ ಅಗತ್ಯ. ಈ ಸಂಪನ್ಮೂಲದ ಕೊರತೆಯು ಬದುಕಿನ ಚಕ್ರವನ್ನೇ ಕಂಗೆಡಿಸಬಲ್ಲದು. ಜಾಗತಿಕ ಜನಸಂಖ್ಯೆಯ ಶೇಕಡ 12ರಷ್ಟು ಜನ ಭಾರತದಲ್ಲಿದ್ದಾರೆ. ಇವರು ಬಳಸಲು ಯೋಗ್ಯವಾದ ನೀರಿನ ಪ್ರಮಾಣವು ಜಾಗತಿಕ ನೀರಿನ ಪ್ರಮಾಣದಲ್ಲಿ ಶೇಕಡಾ 4ರಷ್ಟು ಮಾತ್ರ ಇದೆ. ಇದೇ ಸಂಪನ್ಮೂಲದ ಬಳಕೆಯಿಂದ ಜಾಗತಿಕ ಕೃಷಿ ಯೋಗ್ಯ ಭೂಮಿಯ ಶೇಕಡ 2.6ರಷ್ಟು ಇರುವ ಭೂಮಿಯಲ್ಲಿ ಈ ದೇಶದ ಕೃಷಿಯೂ ನಡೆಯಬೇಕಿದೆ. ಇದೆಲ್ಲಾ ಅಂಕಿ ಸಂಖ್ಯೆಗಳು ಈ ದೇಶದಲ್ಲಿನ ನೀರಿನ ಕೊರತೆಯನ್ನು ಸ್ಪಷ್ಟವಾಗಿ ಸೂಚಿಸುತ್ತಿವೆ. ಇವುಗಳಿಗೆ ಸೇರಿ–ಕೊಂಡಂತೆ ಬಳಸಬಲ್ಲ ನೀರಿನ ಕೊರತೆಯು ದಿನೇ–ದಿನೇ ಹೆಚ್ಚುತ್ತಲೇ ಇದೆ. ಹೆಚ್ಚುತ್ತಲೇ ಇರುವ ಜನಸಂಖ್ಯೆಯ ಜೊತೆಗೆ ದೇಶದ ಒಂದೆಡೆ ಪ್ರವಾಹವಾದರೆ ಮತ್ತೊಂದೆಡೆ ಬರಬೀಳುವ ಸಮಸ್ಯೆಯಿಂದಾಗಿ ಈ ಅತೀವೃಷ್ಟಿ ಅನಾವೃಷ್ಟಿಯನ್ನು ಮುಂಚಿತವಾಗಿ ಸೂಚಿಸುವಂತಹ ಹವಾಮಾನ ಮುನ್ಸೂಚನೆಯನ್ನು ನೀಡುವ ನಂಬಲರ್ಹ ತಂತ್ರಜ್ಞಾನದ ಅಗತ್ಯವೂ ಇದೆ. ಇವೆಲ್ಲಾ ಅಗತ್ಯಗಳ ಪೂರೈಕೆ–ಯಾಗದ್ದರಿಂದ ನೀರಿನ ಕಾರಣವಾಗಿಯೇ ವಿವಾದಗಳು ಮತ್ತು ಗಲಭೆಗಳು ಸಹ ಹೆಚ್ಚುತ್ತಾ ಇದೆ. ಈ ಹಿನ್ನೆಲೆಯಲ್ಲಿ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಸದೃಢಗೊಳಿಸಲು ಜಲಸಂಪನ್ಮೂಲದ ಸದ್ಬಳಕೆಗೆ ಸರಿಯಾದ ಯೋಜನೆಯನ್ನು ರೂಪಿಸುವ, ಭಿನ್ನಾಭಿಪ್ರಾಯಗಳಿದ್ದಾಗ ಗಲಭೆಯೇಳದಂತೆ ನೋಡಿಕೊಳ್ಳಲು ಯೋಗ್ಯವಾದ ಕಾನೂನನ್ನು ರೂಪಿಸಿ ದೇಶದಾದ್ಯಂತ ಏಕರೂಪಿ ಜಲ ನಿರ್ವಹಣೆ ಸಾಧಿಸಲನುವಾಗುವಂತಹ "ರಾಷ್ಟ್ರೀಯ ಜಲ ನೀತಿ"ಯನ್ನು ರೂಪಿಸುವುದು ಸಮಕಾಲೀನ ಭಾರತದ ಒಗ್ಗಟ್ಟನ್ನು ಕಾಯ್ದುಕೊಳ್ಳುವ ಹಿನ್ನೆಲೆಯಲ್ಲಿ ತುರ್ತು ಅಗತ್ಯವಾಗಿದೆ.

ಈ ಕುರಿತಾಗಿ ನಿಯೋಗವು ಸಂಸದರಾದ ಶ್ರೀ ವೆಂಕಯ್ಯ ನಾಯ್ಡು ಹಾಗೂ ರಾಜ್ಯದ ಎಲ್ಲಾ ಸಂಸದರು ಮತ್ತು ಸಚಿವರಾದ ಶ್ರೀ ಶಶಿತರೂರ್, ಶ್ರೀ ರೆಹಮಾನ್ ಖಾನ್, ಶ್ರೀ ಹರೀಶ್ ರಾವತ್, ಡಾ. ಎಂ.ಎಂ. ಪಲ್ಲಂರಾಜು, ಶ್ರೀ ವೀರಪ್ಪ ಮೊಯಿಲಿ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಅನಂತಕುಮಾರ್, ಶ್ರೀ ಎಲ್.ಕೆ. ಅದ್ವಾನಿ, ಶ್ರೀ ಅರುಣ್ ಜೇಟ್ಲಿ, ಶ್ರೀಮತಿ ಸುಷ್ಮಾ ಸ್ವರಾಜ್ ಮೊದಲಾದವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಮಾನ್ಯ ಸಂಸದರಾದ ಅನಂತಕುಮಾರ್ ಮತ್ತು ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದಲ್ಲಿ ನಿಯೋಗವು ಮಾನ್ಯ ಪ್ರಧಾನ ಮಂತ್ರಿಗಳಾದ ಮನಮೋಹನ್‌ಸಿಂಗ್ ಅವರನ್ನು ಸಂಸತ್ ಭವನದ ಪ್ರಧಾನಮಂತ್ರಿಗಳ ಕಛೇರಿಯಲ್ಲಿ ಭೇಟಿ ಮಾಡಿ ಮನವಿಗಳನ್ನು ಸಲ್ಲಿಸಿತು. ಮೂರೂ ಮನವಿಗಳ ಬಗ್ಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದ ಪ್ರಧಾನಿಗಳು ರಾಷ್ಟ್ರೀಯ ಜಲ ನೀತಿಯನ್ನು ಅಂತಿಮಗೊಳಿಸಲು ಎಲ್ಲಾ ಮುಖ್ಯಮಂತ್ರಿಗಳು ಹಾಗೂ ಸರ್ವಪಕ್ಷಗಳ ಸಭೆಯನ್ನು ಶೀಘ್ರದಲ್ಲಿ ಕರೆಯುವುದಾಗಿ ತಿಳಿಸಿದರು. ರಾಷ್ಟ್ರೀಯ ಉದ್ಯೋಗ ನೀತಿಯನ್ನು ಸಂಬಂಧಪಟ್ಟ ಸಚಿವರಿಗೆ ಪರಿಶೀಲಿಸಲು ನಿರ್ದೇಶಿಸುವುದಾಗಿ ತಿಳಿಸಿ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕುರಿತಂತೆ ಪ್ರತಿಕ್ರಿಯಿಸುತ್ತಾ ಮಾತೃಭಾಷಾ ಶಿಕ್ಷಣದ ಅಗತ್ಯವನ್ನು ಪ್ರಸ್ತಾಪಿಸಿದ ಪ್ರಧಾನಿಗಳು ಶಿಕ್ಷಣದ ಆಯ್ಕೆಯನ್ನು ಆಯಾ ಪೋಷಕರಿಗೆ ಬಿಡುವುದೇ ಸೂಕ್ತ ಎಂದು ಅಭಿಪ್ರಾಯಪಟ್ಟರು. ಕರ್ನಾಟಕ ರಾಜ್ಯವು ಅಭಿವೃದ್ಧಿ ಮತ್ತು ಪ್ರಗತಿಯ ದೃಷ್ಟಿಯಿಂದ ಮಾದರಿ ರಾಜ್ಯವಾಗಿದ್ದು, ಆ ರಾಜ್ಯದ ಬುದ್ಧಿಜೀವಿಗಳು, ಸಾಹಿತಿಗಳು ಮತ್ತು ಕಲಾವಿದರ ನಿಯೋಗವನ್ನು ಭೇಟಿ ಮಾಡಿದ್ದು ತಮಗೆ ಸಂತೋಷವನ್ನು ನೀಡಿದೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಈ ಪ್ರಯತ್ನ ಸಫಲವಾಗಲಿ, ರಾಷ್ಟ್ರೀಯ ನೀತಿಗಳು ಶೀಘ್ರವಾಗಿ ಜಾರಿಗೊಳ್ಳಲಿ ಎಂದು ಹಾರೈಸುತ್ತೇವೆ.

# ಜೆ.ಎಸ್.ಎಸ್. ನೊಯಿಡಾದಲ್ಲಿ ಹೊರನಾಡ ಕನ್ನಡಿಗರ ಕನ್ನಡ ಸಂಸ್ಕೃತಿ ಉತ್ಸವ



ಜೆ.ಎಸ್.ಎಸ್. ಎ.ಟಿ.ಇ, ನೊಯಿಡಾದಲ್ಲಿ ನಡೆದ ಹೊರನಾಡ ಕನ್ನಡಿಗರ ಕನ್ನಡ ಸಂಸ್ಕೃತಿ ಉತ್ಸವ ಅತ್ಯಂತ ವಿಜೃಂಭಣೆ ಯಿಂದ ನೆರವೇರಿತು. ಕಾರ್ಯಕ್ರಮವನ್ನು ಶ್ರೀ ಹಂಪಾ ನಾಗರಾಜಯ್ಯನವರು ಉದ್ಘಾಟಿಸಿದರು ಹಾಗು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಡಾ. ಮುಖ್ಯಮಂತ್ರಿ ಚಂದ್ರುರವರು ವಹಿಸಿದ್ದರು.

ಶ್ರೀ ಹಂಪಾ ನಾಗರಾಜಯ್ಯನವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಭೌಗೋಳಿಕವಾಗಿ ಕನ್ನಡ ನಾಡಿನ ಒಳಗಡೆ ಇದ್ದರೂ ಮಾನಸಿಕವಾಗಿ ಹಾಗು ಭಾವನಾತ್ಮಕವಾಗಿ ಭಾರತದ ಉದ್ದಗಲಕ್ಕೂ ಹಾಗೂ ವಿದೇಶಗಳಲ್ಲೂ ಸಹ ಹರಡಿಕೊಂಡಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಚಲನಚಿತ್ರ ನಿರ್ದೇಶಕರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಅವರು ಮಾತನಾಡುತ್ತ, ಇಂತಹ ಸುಂದರವಾದ ಶೈಕ್ಷಣಿಕ ವಿದ್ಯಾಲಯವನ್ನು ನಿರ್ಮಿಸಲು ಕಾರಣರಾದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಪರಿಕಲ್ಪನೆಯನ್ನು ನೆನೆಸಿಕೊಳ್ಳುವಂತಹ ಅಗತ್ಯತೆಯನ್ನು ಒತ್ತಿ ಹೇಳುತ್ತಾ, ಈ ಸಂಸ್ಕೃತಿ ಉತ್ಸವಕ್ಕೆ ಕಾರಣಕರ್ತರಾದ ಶ್ರೀ ಮುಖ್ಯಮಂತ್ರಿ ಚಂದ್ರು ಮತ್ತು ಅವರ ಬಳಗವನ್ನು ಅಭಿನಂದಿಸಿದರು.

ನಂತರ ಪ್ರೊ. ಎಮ್. ಹೆಚ್. ಕೃಷ್ಣಯ್ಯ ನವರು ಮಾತನಾಡುತ್ತ, ಕನ್ನಡದ ಯುನಿಕೋಡ್ ಅನ್ನು ಗೂಗಲ್ ಹಾಗೂ ಮೈಕ್ರೊಸಾಫ್ಟ್‌ನಂತಹ ತಂತ್ರಾಶ ಸಂಸ್ಥೆಗಳಲ್ಲಿ ಅಳವಡಿಸಿಕೊಂಡು ವಿಶ್ವದಾದ್ಯಂತ ಪ್ರಚಾರಪಡಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತದೆ. ಎಂದು ಹೇಳಿದರು.

ಶ್ರೀ ಬಿ. ಸುರೇಶ್ ರವರು ಮಾತನಾಡುತ್ತಾ, ನುಡಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಗಣಕ ಜಗತ್ತಿನಲ್ಲಿ ಮುಂದಿನ ತಲೆಮಾರಿನ ವರೆಗೂ ಕೂಡ ಶಾಶ್ವತಗೊಳಿಸಿದಾಗ ಮಾತ್ರ ಕನ್ನಡದ ಜೊತೆಗೆ ಬದುಕಲು ಸಾದ್ಯ ಎಂದು ಹೇಳಿದರು.

ಖ್ಯಾತ ಜಾನಪದ ರಾದ ಡಾ. ರಂಗಾರೆಡ್ಡಿ ಕೋಡಿರಾಂಪುರ ರವರು ಮಾತನಾಡಿ, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ವ್ಯಕ್ತಿತ್ವ ವಿಕಸನಕ್ಕೆ ನೆರವಾಗುತ್ತದೆ ಎಂದು ಹೇಳುತ್ತಾ, ಜನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದ್ದು ಲೋಕದ ಅಂಕು ಡೊಂಕುಗಳನ್ನು ತಿದ್ದಲು ಪರಿಣಾಮಕಾರಿಯಾಗಿ ಉಪಯೋಗಿಸುವ ಅಗತ್ಯತೆಯನ್ನು ತಿಳಿ ಹೇಳಿದರು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಾ. ಮುಖ್ಯಮಂತ್ರಿ ಚಂದ್ರು ರವರು ಮಾತನಾಡುತ್ತಾ, ನಾಡು, ನುಡಿ, ಗಡಿ ವಿಚಾರದಲ್ಲಿ ಎಲ್ಲಾ ರಾಜ್ಯದವರು ತಮ್ಮ ಧ್ಯೇಯ ಹಾಗೂ ತಮ್ಮ ಸಂಸ್ಕೃತಿ, ಭಾಷೆಗಳ ಜೊತೆಯಲ್ಲಿ ಏಕತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ಯಾವುದೇ ಭಾಷೆಯನ್ನು ದ್ವೇಷಿಸುವ ಅಗತ್ಯವಿಲ್ಲವೆಂದು ಹೇಳಿದರು.

ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಜೆ.ಎಸ್.ಎಸ್. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಟಿ. ಎನ್. ನಾಗಭೂಷಣ್‌ರವರು ಮಾಡಿದರು ಹಾಗೂ ಕಾಲೇಜಿನ ಕುಲಸಚಿವರಾದ ಶ್ರೀ ಎಸ್. ಎಸ್. ಶಿರೂರ್‌ರವರು ವಂದಿಸಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಅತ್ಯಂತ ಅದ್ಭುತವಾಗಿ ಖ್ಯಾತ ಕಿರುತೆರೆ ನಟರಾದ ಶ್ರೀ ನಾಗರಾಜ ಮೂರ್ತಿಯವರು ನಡೆಸಿಕೊಟ್ಟರು. ಹಾಗು ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುವ ರೀತಿಯಲ್ಲಿ ಕಾರ್ಯಕ್ರಮದ ಸಂಚಾಲಕರಾದ ಶ್ರೀ ಎನ್.ಎಸ್. ಮನೋಜ್ ಕುಮಾರ್ ರವರು ಕಾರ್ಯ ನಿರ್ವಹಿಸಿದರು.

ಇದಾದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಶ್ರೀಮತಿ ವೀಣಾ ಮತ್ತು ತಂಡದವರು ಕನ್ನಡ ಗೀತೆಗಳ ನೃತ್ಯ ರೂಪಕವನ್ನು ನಡೆಸಿಕೊಟ್ಟರು, ನಂತರ ಶ್ರೀ ಲಕ್ಷ್ಮಿನಾರಾಯಣ ಮತ್ತು ತಂಡದವರು ಹಾಗೂ ಶ್ರೀ. ಯುವರಾಜ್ ಮತ್ತು ಶ್ರೀಮತಿ ವೀಣಾಮರಡೂರ ರವರ ಕಂಠ ಸಿರಿಯಲ್ಲಿ ಮೂಡಿಬಂದ ಜಾನಪದ ಗಾಯನಗಳು ಕನ್ನಡ ಸಂಸ್ಕೃತಿಯ ಸೊಬಗನ್ನು ಎತ್ತಿ ಹಿಡಿದವು. ನೂರಕ್ಕೂ ಹೆಚ್ಚು ಪ್ರಸಿದ್ಧ ಜಾನಪದ ಕಲಾವಿದರಿಂದ ಜಾನಪದ ವೈಭವದ ವೈವಿಧ್ಯಮಯ ಪ್ರದರ್ಶನವಾಯಿತು.

❑ **ನಟರಾಜ್, ನೊಯಿಡಾ**

# ಮುಂಬೈ ಕರ್ನಾಟಕ ಸಂಘದ ಏಕಾಂಕ ನಾಟಕ ಸ್ಪರ್ಧೆಗೆ ದೆಹಲಿಯ 'ಕನಸು' ನಾಟಕ

ಮುಂಬೈ ಕರ್ನಾಟಕ ಸಂಘವು ಆಯೋಜಿಸಿರುವ 17ನೇ ಅಖಿಲ ಭಾರತ ಕುವೆಂಪು ಸ್ಮಾರಕ ಕನ್ನಡ ಏಕಾಂಕ ನಾಟಕ ಸ್ಪರ್ಧೆಯು ಜನವರಿ 18, 19 ಮತ್ತು 20ರಂದು ಜರುಗಲಿದೆ. ಈ ಬಾರಿಯ ದೆಹಲಿ ಕರ್ನಾಟಕ ಸಂಘದ ಏಕಾಂಕ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ವಿಜೇತ 'ಕನಸು' ನಾಟಕ ತಂಡವು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಮುಂಬೈಗೆ ತೆರಳುತ್ತಿದೆ. ಪ್ರಥಮ ನಿರ್ದೇಶನ ಬಹುಮಾನ ವಿಜೇತರಾದ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ನಾಟಕ ಉಪಸಮಿತಿಯ ಸಂಚಾಲಕ ಟಿ.ಎಂ. ಮೈಲಾರಪ್ಪ ಅವರು ನಾಗರಾಜ ಕೋಟೆ ವಿರಚಿತ 'ಕನಸು' ನಾಟಕದ ನಿರ್ದೇಶನದ ಹೊಣೆ ಹೊತ್ತು ಉತ್ಸಾಹೀ ತಂಡದೊಂದಿಗೆ ಜನವರಿ 19ರಂದು ಪ್ರದರ್ಶನ ನೀಡಲಿದ್ದಾರೆ. ಈ ತಂಡದ ವ್ಯವಸ್ಥಾಪಕರಾಗಿ ಸಂಘದ ಉಪಾಧ್ಯಕ್ಷ ಬಿ.ಕೆ. ಬಸವರಾಜ್ ಅವರು ನಿರ್ವಹಣೆಯ ಹೊಣೆ ಹೊತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಪರವಾಗಿ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವ ನಾಟಕ ತಂಡಕ್ಕೆ ಹಾರ್ದಿಕ ಶುಭಾಶಯಗಳು. ಉತ್ತಮ ಪ್ರದರ್ಶನ ನೀಡಿ ತಂಡದ 'ಕನಸು' 'ನನಸಾಗಿ' ಬಹುಮಾನ ವಿಜೇತರಾಗಲಿ ಎಂದು ಶುಭ ಹಾರೈಸುತ್ತೇವೆ.



# ಅತ್ಯಾಚಾರ ಮರು ಹುಟ್ಟು ಪಡೆದ 'ಯಮುನೆಯರು'

ದೆಹಲಿಯಲ್ಲಿ ಈಚೆಗೆ ನಡೆದ ಬಹುಚರ್ಚಿತವಾದ ಆ ಬರ್ಬರ ಮಾನಭಂಗದ ಘಟನೆ ಇಡೀ ರಾಷ್ಟ್ರದ ಜನಮಾನಸವನ್ನು ಬುಡ ಸಮೇತ ಅಲ್ಲಾಡಿಸಿಬಿಟ್ಟಿದೆ. ಆ ಘಟನೆಯ ವಿವರಗಳು ಕಾಳ್ಗಿಚ್ಚಿನಂತೆ ನಾಡಿನುದ್ದಕ್ಕೂ ಹೊರನಾಡುಗಳಲ್ಲೂ ಹಬ್ಬಿ ಬಹುಕೃತ ಮನಸ್ಸುಗಳನ್ನು ಆಳದಲ್ಲಿ ಕಲಕಿ, ಆ ಆಳಗಳಲ್ಲಿ ಅವಿಸಿಕೊಂಡಿದ್ದ ಆದಿಮ ಭೀತಿಗಳನ್ನು ರೋಷಗಳನ್ನು ಅಗ್ನಿಪರ್ವತದಂತೆ ಆಸ್ಫೋಟಿಸಿಬಿಟ್ಟಿದೆ. ಉಗ್ರ ಪ್ರತಿಭಟನೆಗಳ, ಆರೋಪ – ಪ್ರತಿ ಆರೋಪಗಳ ಹೆಬ್ಬಲೆಗಳು ನಮ್ಮೆಲ್ಲರನ್ನು ಆವರಿಸಿದೆ. ನಾವು ಸ್ಥಿರವೆಂದುಕೊಂಡಿದ್ದ 'ನಾಗರಿಕ' ಜಗತ್ತಿನ ನೆಲ ನಮ್ಮ ಕಾಲಡಿಯಲ್ಲಿ ಕರಗಿದಂತಾಗಿ ನಾವೆಂದೂ ಊಹಿಸಲಾಗದಂತಹ ಬಿರುಗಾಳಿ ನಮ್ಮನ್ನು ಎತ್ತೆತ್ತಲೋ ತೂರಾಡಿಸುತ್ತಿದೆ. ನಿನ್ನೆಯವರೆಗೆ ಮರ್ಯಾದಸ್ತಿಕೆಯ ಮೌನ ತಳೆದಿದ್ದ ಮಹಿಳೆಯರು, ಮಕ್ಕಳು, ಪುರುಷರು ಆ ಘಟನೆಯ ನೇರ ಶಿಕಾರಿಗಳು ತಾವೇ ಆಗಿರುವಂತೆ ಹತೋಟಿ ಮೀರಿದ ಕ್ರೋಧದಿಂದ, ಆಕ್ರೋಶದ ಮುಖಭಾವದಿಂದ ನಗರಮಧ್ಯಗಳಲ್ಲಿ, ಪತ್ರಿಕೆಗಳ ಪುಟಗಳಲ್ಲಿ, ಮಾಧ್ಯಮಗಳಲ್ಲಿ, ಅಂತರ್ಜಾಲದ ಸೈಟುಗಳಲ್ಲಿ ಪ್ರತಿಭಟಿಸಹತ್ತಿದ್ದಾರೆ. ಲಾಠಿಯೇಟುಗಳನ್ನು, ಗ್ಯಾಸ್ ಷೆಲ್ಲುಗಳನ್ನು, ನೀರಿನಗನ್ನುಗಳನ್ನು ಲೆಕ್ಕಿಸದೆ ಬೀದಿಗಿಳಿಯುತ್ತಾರೆ. ಇವರಾರೂ ಬಾಡಿಗೆಯ ಜನರಲ್ಲ. ಘಟನೆಯ ಬರ್ಬರತೆಯನ್ನು ಪರೋಕ್ಷ ಮಾಧ್ಯಮಗಳ ಮೂಲಕ ಗ್ರಹಿಸಿ ತಮಗೆ, ತಮ್ಮ ಮಕ್ಕಳಿಗೆ, ಅಕ್ಕ–ತಂಗಿಯರಿಗೆ, ಹೆಂಡತಿಯರಿಗೆ, ಪ್ರೇಯಸಿಯರಿಗೆ, 'ಬಲಿಯಾದ ಹುಡುಗಿ'ಗಾದ ಗತಿ ಬರಬಹುದೆಂಬ ಆತಂಕದಲ್ಲಿ ಅನಿವಾರ್ಯವೆಂಬಂತೆ, ಅಂತಿಮಾಸ್ತ್ರವೆಂಬಂತೆ ಪ್ರತಿಭಟನೆಯೊಳಗೆ ಧುಮುಕಿದ್ದಾರೆ.

ಈ ದುರಂತದ ಘಟನೆ ನಮ್ಮ ಪ್ರಗತಿಯ ಬೆನ್ನಿಗಂಟಿರುವ, ನಮ್ಮ ನಾಗರಿಕ ಆವರಣದ ಹಿಂದೆ ಅವಿತಿರುವ ಬರ್ಬರತೆಯ ಸಂಕೇತವಾಗಿಬಿಟ್ಟಿದೆ. ಪುಣ್ಯಭೂಮಿಯಲ್ಲಿ ನಡೆದ ಕ್ರೂರ ಮಾನಭಂಗದ ಘಟನೆ ಇದೊಂದೇ ಅಲ್ಲ. ಈ ಘಟನೆ ನಡೆದ ತಿಂಗಳ ಹಿಂದೆ ದೆಹಲಿಯ ಪೊಲೀಸು ಠಾಣೆಗಳಲ್ಲಿ ಮೂರು ಮಾನಭಂಗಗಳ ಪ್ರಕರಣಗಳು ದಾಖಲಾದವು. ಆ ಮಾನಭಂಗಗಳ ಬಲಿಗಳಿಗೆ ಏನಾಯಿತು? ಪ್ರತಿಭಟನೆಕಾರರಾಗಲೀ ಮಾಧ್ಯಮದವರಾಗಲೀ ತಲೆಕೆಡಿಸಿಕೊಂಡಿಲ್ಲ. ಅದಾದ ಮೂರು ದಿನಗಳ ನಂತರ ಮಸೂರಿಯಲ್ಲಿ ಹದಿನೇಳರ ಹರಯದ ಹುಡುಗಿಯನ್ನು ಮೂವರು ಧೂರ್ತರು ಮಾನಭಂಗ ಮಾಡಿದ್ದರು. ಆಕೆಗೇನಾಯಿತು? ಕೆಲವೇ ತಿಂಗಳ ಹಿಂದೆ ದೆಹಲಿಯ ಅನಾಥಾಶ್ರಮವೊಂದರಲ್ಲಿ 12ಕ್ಕೂ ಕಡಿಮೆ ವಯಸ್ಸಿನ ಹುಡುಗ ಹುಡುಗಿಯರನ್ನು ಲೈಂಗಿಕವಾಗಿ ದುರುಪಯೋಗ ಪಡಿಸಿಕೊಂಡಿದ್ದು ಪತ್ತೆಯಾಯಿತು. ಆ ಘಟನೆಯ ಬಲಿಗಳಿಗೇನಾಯಿತು?

ಫಲಾನುಭವಿಗಳಿಗೆ ಯಾವ ಸಜಾ ದೊರಕಿತು? ಮನೋರಮಾ ಎಂಬ ಹುಡುಗಿಯ ಮಾನಭಂಗ ಮತ್ತು ಕೊಲೆಯ ನಂತರ ಇಡೀ ಮಣಿಪುರದ ಜನತೆ ಸಿಡಿದೆದ್ದರು. ಪರಿಣಾಮವೇನಾಯಿತು? ಹೀಗೆ ನಮ್ಮನ್ನು ನಾವು ಕೇಳುತ್ತಾ ಹೋದಾಗ ಮಹಾರಾಷ್ಟ್ರದ ಖೇರ್ಲಂಜಿ ಗ್ರಾಮದಲ್ಲಿ ಒಂದು ಕುಟುಂಬದ ದಲಿತ ಹೆಂಗಸರ ಗ್ಯಾಂಗ್ ರೇಪ್, ಆ ನಂತರ ಅವರೊಂದಿಗೆ ಆ ಕುಟುಂಬದ ಗಂಡಸರು ಮತ್ತು ಮಕ್ಕಳ ಬರ್ಬರ ಕೊಲೆ ಒಂದು ಮನರಂಜನಾ ಪ್ರಸಂಗವೆಂಬಂತೆ ಮೇಲುಜಾತಿಯ ಮೌನ ಪ್ರೇಕ್ಷಕರ ಸಮಕ್ಷಮದಲ್ಲಿ ನಡೆದದ್ದು ನೆನಪಾಗುತ್ತದೆ. ಆ ಘಟನೆಯ ಆರೋಪಿಗಳಿಗೇನಾಯಿತು?

ಉತ್ತರಾಖಂಡದ ಚಳವಳಿಯ ಹೆಣ್ಣುಮಕ್ಕಳ ಸಾಮೂಹಿಕ ಮಾನಭಂಗ ಕುಪ್ರಸಿದ್ಧವಾದ ಮೀರಟ್ ಕರಾಳ ಪ್ರಕರಣದಲ್ಲಿ ಕಾನೂನಿನ ಠೇಕೇದಾರರ ಬಲಪ್ರಯೋಗದಿಂದ ನಡೆಯಿತಲ್ಲ, ಆ ಘಟನೆಯ ದುಷ್ಕರ್ಮಿಗಳಿಗೆ ಯಾವ ಸಜೆ ದೊರಕಿತು? ಮಾನಭಂಗದಿಂದ ಜರ್ಝರಿತರಾಗಿ ಆ ಹೆಣ್ಣುಮಕ್ಕಳು ತಮ್ಮ ಗಂಡಂದಿರ, ಮಕ್ಕಳ, ಪರಿವಾರದವರ ಬಳಿಗೆ ಹಿಂತಿರುಗಿದಾಗ ಅವರ ಭವಿಷ್ಯ ಹೇಗಾಯಿತು? ದಿನನಿತ್ಯ ಬೃಹತ್ ಮಾಧ್ಯಮಗಳಲ್ಲಿ ಮಾತ್ರವಲ್ಲದೆ ಸಣ್ಣಸಣ್ಣ ಪ್ರಾದೇಶಿಕ ಪತ್ರಿಕೆಗಳಲ್ಲಿ ವರದಿಯಾಗುವ ಎಷ್ಟು ಘಟನೆಗಳಲ್ಲಿ ನೊಂದವರಿಗೇನಾಯಿತು, ನೋಯಿಸಿ ಕೊಂದವರಿಗೇನು ಶಿಕ್ಷೆಯಾಯಿತು? ಆ ಬಗ್ಗೆ ಓದಿ ತಿಳಿದ ನಾವಾಗಲಿ ಅಥವಾ ಆ ಘಟನೆಯ ಬಗ್ಗೆ ಪ್ರಾಮಾಣಿಕ ಕಾಳಜಿಯಿಂದ ಪ್ರತಿಭಟಿಸಿದ ಸಂಘಟನೆಯವರಾಗಲಿ ಮುಂದಿನ ಪರಿಣಾಮದ ಬೆನ್ನುಹತ್ತಿಲ್ಲ.

ಕೇಸುಗಳು ಪೋಲೀಸು ಠಾಣೆಗಳಲ್ಲಿ ದಾಖಲಾಗಿ, ಪತ್ರಿಕೆಗಳಲ್ಲಿ ವರದಿಯಾದ ಮಾನಭಂಗದ ಘಟನೆಗಳು ಮಾತ್ರ ನಿಜವಾಗಿ ನಡೆದಿರುವ ಎಲ್ಲ ಮಾನಭಂಗದ ಘಟನೆಗಳಲ್ಲ. ದಾಖಲಾಗದ, ವರದಿಯಾಗದ ಸಹಸ್ರಾರು ಮಾನಭಂಗಗಳ ಮೌನ ಇತಿಹಾಸವೂ ಬಹಳ ದೀರ್ಘವಾದುದು. ಇಂತಹ ಅನ್ಯಾಯಗಳು ಯಾಕೆ ಸಾರ್ವಜನಿಕ ವಲಯಗಳಲ್ಲಿ ಚರ್ಚಿತವಾಗದೆ ದೆಹಲಿಯ ಒಂದು ಘಟನೆ ಇಷ್ಟು ಮಹತ್ವ ಪಡೆಯುತ್ತಿದೆ ಎಂಬ ಸಾಮಯಿಕ ಪ್ರಶ್ನೆಯನ್ನು ಅರುಂಧತಿ ರಾಯ್ ಕೇಳಿದ್ದಾರೆ. ಅಂದ ಮಾತ್ರಕ್ಕೆ ದೆಹಲಿಯ ಕರಾಳ ಘಟನೆಯ ಅಕ್ಷಮ್ಯ ಬರ್ಬರತೆ ಕಡಿಮೆಯೆಂದಾಗಲೀ, ನಡೆಯುತ್ತಿರುವ ಪ್ರತಿಭಟನೆಗಳು ನಿಷ್ಪ್ರಯೋಜಕವೆಂದಾಗಲಿ ಅಲ್ಲ. ದೆಹಲಿಯ ರೇಪ್ ಘಟನೆ ಸ್ತ್ರೀವಿರೋಧಿ ಅಪರಾಧಗಳ ಪ್ರಕ್ಷುಬ್ಧ ಸಾಗರದ ಒಂದು ಕಪ್ಪು ಹನಿ ಮಾತ್ರ. ಅಥವಾ ಮಾನಭಂಗವೆಂಬ ಕ್ರೂರ ರಕ್ಕಸನಿಗೆ ಲಕ್ಷಾಂತರ ಮೋರೆಗಳು, ಲಕ್ಷಾಂತರ ದಾಡೆಗಳು, ಕೋಟ್ಯಂತರ ಕೈಗಳು ಮತ್ತು ಕೋಟ್ಯಂತರ ತೀಕ್ಷ್ಣ ನಖಗಳು.

ಒಂದು ಗಣತಿಯ ಪ್ರಕಾರ ಮಹಾರಾಷ್ಟ್ರವೊಂದರಲ್ಲೇ ಪ್ರತಿ ವರ್ಷ 3500 ಮಾನಭಂಗಗಳು ವರದಿಯಾಗುತ್ತವೆ. ಇದರಲ್ಲಿ ಮಾನಭಂಗಕ್ಕೊಳಗಾಗುವರು ಬಹುತೇಕ ದಲಿತ ಮಹಿಳೆಯರು. ಮಾನಭಂಗವನ್ನೆಸಗುವವರಲ್ಲಿ ಸಜೆ ಅನುಭವಿಸುವವರ ಸಂಖ್ಯೆ ನಗಣ್ಯ. ಅಧಿಕ ಸಂಖ್ಯೆಯ ದುಷ್ಕರ್ಮಿಗಳು ಕಾನೂನಿನ ಕಿಟಕಿ–ಕಿಂಡಿಗಳಿಂದ ಪರಾರಿಯಾಗಿ ಬಿಡುತ್ತಾರೆ. ಮಾನಭಂಗಕ್ಕೆ ಅಧಿಕಸಂಖ್ಯೆಯಲ್ಲಿ ಬಲಿಯಾಗುವವರು ಆದಿವಾಸಿ ಹೆಂಗಸರು. ಮಾನಭಂಗ ಪ್ರಕರಣಗಳಲ್ಲಿ ಬಹುತೇಕ ಘಟನೆಗಳು ಜರುಗುವುದು ಕುಟುಂಬಗಳೊಳಗೆ.

ಮಾನಭಂಗಕಾರರಲ್ಲಿ ಮಹಿಳೆಯರ ಹತ್ತಿರದ ಸಂಬಂಧಿಗಳದೇ ಮೇಲುಗೈ. ಅಥವಾ ರಕ್ತ ಸಂಬಂಧಿಗಳದು. ಬಹಳ ಸಲ ಆಸುಪಾಸಿನ ಜನಗಳದು. ಕುಟುಂಬದೊಳಗಡೆ ಅಥವಾ ಆಸುಪಾಸಿನಲ್ಲಿ ನಡೆಯುವ ಬಲಾತ್ಕಾರಗಳು ಬಯಲಿಗೆ ಬರದಂತೆ ಅಯಾ ಪರಿವಾರದವರೇ ಎಚ್ಚರಿಕೆ ವಹಿಸುತ್ತಾರೆ, ಹುಡುಗಿಯ ಭವಿಷ್ಯದ ದೃಷ್ಟಿಯಿಂದ, ಸುಗಮವಾಗಿ ಮದುವೆಯೆಂಬುದೊಂದು ಆಗಿಬಿಡಲಿ ಎಂಬ ದೃಷ್ಟಿಯಿಂದ, ಮುಂದೆ ಅವಳಿಗೆ ಮಕ್ಕಳಾದರಾಯಿತು, ಎಲ್ಲಾ ಸರಿಹೋಗುತ್ತದೆ ಎಂಬ ಭರವಸೆಯಿಂದ.

ದೆಹಲಿಯ ಪ್ರಕರಣ ಘಟಿಸಿದಾಗಲಾಯ್ತು, ಭಾರತ ಪ್ರಗತಿಯ ಹೆದ್ದಾರಿಯಲ್ಲಿ ಶರವೇಗದಿಂದ ಮುನ್ನುಗ್ಗುತ್ತಿದೆಯೆಂದು ಭಾವಿಸಲಾಗುತ್ತಿರುವ ಶುಭ ಸಂದರ್ಭದಲ್ಲಿ, ವರ್ಲ್ಡ್‌ಬ್ಯಾಂಕಿನ ಅಂಕಿ ಅಂಶಗಳ ಆಧಾರದ ಮೇರೆಗೆ ಮುಂದುವರಿದ ರಾಷ್ಟ್ರಗಳೂ ಭಾರತ ಬಂಡವಾಳಹೂಡಿಕೆಗೆ ಮತ್ತು ಮಾರುಕಟ್ಟೆಯ ವಿಕಾಸಕ್ಕೆ ಆದರ್ಶ ರಾಷ್ಟ್ರವೆಂದು ನಂಬಿರುವ ಪ್ರಸಂಗದಲ್ಲಿ ಇಂಥಾ ಘಟನೆಗಳು ಭಾರತ–



ಕ್ಕೆ ಕಳಂಕಪ್ರಾಯವಾಗುತ್ತದಲ್ಲ ಎಂದು ಭಾರತದ ಮತ್ತು ಹೊರನಾಡುಗಳ ಉದ್ಯೋಗಸಾರ್ವಭೌಮರಿಗೆ ಚಿಂತೆ. ಮಾನಭಂಗಕಾರರರಿಗೆ ಗಲ್ಲು ಶಿಕ್ಷೆ ಇನ್ನೂ ಏಕಾಗಿಲ್ಲ ಎಂದು ಇನ್ನು ಕೆಲವರ ಚಿಂತೆ. ಇಂತಹ ಘಟನಾವಳಿಗಳ ಪುನರಾವರ್ತನೆಯನ್ನು ಹೇಗೆ ತಡೆಯುವುದು ಎಂಬುದು ಕೆಲವರ ಚಿಂತೆ.

ಈ ಘಟನೆ ಹೊತ್ತಿಸಿರುವ ಬೆಂಕಿಯಲ್ಲಿ ತಮ್ಮ ರಾಜಕೀಯ ಲಾಭದ ರೊಟ್ಟಿಯನ್ನು ಹೇಗೆ ಸುಟ್ಟುಕೊಳ್ಳಬಹುದು, ತಮ್ಮ ಬೇಳೆಕಾಳನ್ನು ಹೇಗೆ ಬೇಯಿಸಿಕೊಳ್ಳುವುದು ಎಂದು ಇತರ ಕೆಲವರ ಚಿಂತೆ. ಹೀಗೆ ಇಡೀ ದುರ್ಘಟನೆಯನ್ನು ಖಂಡಿಸುತ್ತಿರುವವರಲ್ಲಿ ಎಲ್ಲರಿಗೂ ತಮ್ಮದೇ ಆದ ಕಾರಣಗಳಿವೆ, ಪ್ರೇರಣೆಗಳಿವೆ, ಲೆಕ್ಕಾಚಾರಗಳಿವೆ.

ಇನ್ನು ಕೆಲವು ಮಹನೀಯರು (ಮತ್ತು ಮಹಿಳೆಯರೂ!) ಮಹಾನ್ ಜ್ಞಾನಿಗಳಂತೆ ಪೋಸು ಕೊಡುತ್ತಾ ಬಲಿಯಾದ ಹುಡುಗಿಯ ತಲೆ ಮೇಲೆ ತಪ್ಪು ಹೊರಿಸುತ್ತಿರುವುದು ಇಡೀ ಸಂದರ್ಭದ ಅತ್ಯಂತ ಕ್ರೂರ ವ್ಯಂಗ್ಯ. ಅವರ ಪ್ರಕಾರ, ಆ ಹುಡುಗಿ ಹುಷಾರಾಗಿರಬೇಕಾಗಿತ್ತು. ಅಷ್ಟು ರಾತ್ರಿಯಲ್ಲಿ ಮನೆ ಬಿಟ್ಟು ಕ್ರೂರ ಹೊರಜಗತ್ತಿಗೆ ಹೋಗಬಾರದಾಗಿತ್ತು. ಗಂಡಸರಲ್ಲಿ ಕಾಮೋದ್ರೇಕವುಂಟಾಗದ ಹಾಗೆ ಮೈ ತುಂಬ ಬಟ್ಟೆ ಹಾಕಿಕೊಳ್ಳಬೇಕಾಗಿತ್ತು. ಖಾಸಗಿ ಬಸ್ಸನ್ನೇರಬಾರದಾಗಿತ್ತು. ದೆಹಲಿಯ ಒಬ್ಬ ಮಹಿಳಾ ವಿಜ್ಞಾನಿ ಇನ್ನೂ ಮುಂದೆ ಹೋಗಿ ಅಪ್ಪಣೆ ಕೊಡಿಸಿದರು: 'ಆರು ಜನ ಗಂಡಸರು ಮೇಲೆರಗಿ ಬಂದಾಗ ಆ ಹುಡುಗಿ ಪರಿಸ್ಥಿತಿಯನ್ನು ಕಿಲಾಡಿತನದಿಂದ ನಿಭಾಯಿಸಬೇಕಾಗಿತ್ತು; ಅವರ ಜೊತೆ ತಾನೇ ಸಹಕರಿಸಿಬಿಟ್ಟಿದ್ದರೆ ಆ ಮಹಾನುಭಾವರು ಕಡೇ ಪಕ್ಷ ಅವಳ ಕರುಳುಗಳನ್ನು ಜಖಂ ಮಾಡುತ್ತಿರಲಿಲ್ಲ'. ಇನ್ನೊಬ್ಬರು ಘೋಷಿಸಿದರು: 'ಪ್ರತಿಭಟನೆ ಮಾಡುವ ಹುಡುಗಿಯರು, ಡಿಸ್ಕೊ ಡಾನ್ಸ್‌ಗೆ ಹೋಗುತ್ತಾರೆ, ಮೇಕ್‌ಅಪ್ ಮಾಡಿಕೊಳ್ಳುತ್ತಾರೆ. ಆದ್ದರಿಂದ ಅವರಿಗೆ ಪ್ರತಿಭಟನೆ ಮಾಡುವ ಹಕ್ಕಿಲ್ಲ'.

ದುರಂತನಾಟಕವೊಂದರ ಯಕಃಶ್ಚಿತ್ ವಿವಿಧ ವಿದೂಷಕರಂತೆ ಕಾಣುವ ಇಂಥಾ ಜನರ ಮಾತನ್ನು ಕೇಳಿ ನಗುವುದೂ ಕಷ್ಟವಾಗುತ್ತಿದೆ. ಯಾಕೆಂದರೆ ಈ ಪ್ರಕರಣ ಮತ್ತು ಅದಕ್ಕೆ ಬಂದಿರುವ ಉಗ್ರ ಪ್ರತಿಕ್ರಿಯೆಗಳು (ಅದೇ ರೀತಿ ಹಾರಿಕೆಯ ಹೇಳಿಕೆಗಳು) ನಾವು ಜಾಣಗುರುಡುತನದಿಂದ ಮತ್ತೆ ಮತ್ತೆ ಮರವೆಯೊಳಗೆ ತಳ್ಳುವ ನಮ್ಮ ಸಮಾಜದ ಲೈಂಗಿಕ ರಾಜಕಾರಣದ ಭಯಾನಕ, ಕರಾಳ ಮುಖ ನಮ್ಮೆಲ್ಲರಿಗೂ ಕಾಣುವಂತೆ ಮಾಡಿದೆ. ಆ ಬಗ್ಗೆ ಎಚ್ಚರಿಕೆಯ ಗಂಟೆಯನ್ನು ಬಾರಿಸಿದೆ. ಇಂಥಾ ಘಟನೆಗಳ ಬಗ್ಗೆ ಅರಿವನ್ನು ಮೂಡಿಸುತ್ತಿದೆ. ತಪ್ಪಿತಸ್ಥರಿಗೆ ಕಾನೂನು ರೀತ್ಯಾ ಸಜಾ ಆಗಬೇಕೆಂಬುದು ಅಗತ್ಯ. ಆದರೆ ಅವರೆಲ್ಲರನ್ನೂ ಗಲ್ಲಿಗೇರಿಸಿದ ಮಾತ್ರಕ್ಕೇ ಮಾನಭಂಗಗಳ ಪುನರಾವರ್ತನೆ ನಿಲ್ಲುವುದಿಲ್ಲ. 1978ರಲ್ಲಿ ಮಾನಭಂಗ ಮತ್ತು ಕೊಲೆಗಳನ್ನೆಸಗಿ ಸಿಕ್ಕಿ ಬಿದ್ದ ಬಿಲ್ಲಾ ಮತ್ತು ರಂಗಾ ಎಂಬ ಗೂಂಡಾಗಳಿಗೆ 1984ರಲ್ಲಿ ಮೃತ್ಯುದಂಡವನ್ನು ಜಾರಿಗೊಳಿಸಲಾಯಿತು. ಅಂದ ಮಾತ್ರಕ್ಕೇ ಎಳೆಯರ ಕೊಲೆ ಮತ್ತು ಮಾನಭಂಗಗಳು ನಿಲ್ಲಲಿಲ್ಲ.

ನಮ್ಮ ಮುಂದಿರುವ ಮುಖ್ಯ ಪ್ರಶ್ನೆಗಳು ಇವು: ಹೆಂಗಸರ ಮಾನಭಂಗಗಳನ್ನು ಇನ್ನೆಂದೂ ಜರುಗದಂತೆ ತಡೆಯುವುದು ಹೇಗೆ? ಪೊಲೀಸು ಪಡೆಯ ಸಚೇತನೀಕರಣ ಮತ್ತು ಸಾರ್ವಜನಿಕರಿಗೆ ತಿಳಿವಳಿಕೆ ನೀಡಿಕೆಯ ಎರಡು ಪರಿಹಾರಗಳನ್ನು ಅಮೆರಿಕಾದಲ್ಲಿ ಪ್ರಯತ್ನಿಸಲಾಯಿತು. ಇದರ ಪರಿಣಾಮಗಳು ತಜ್ಞರ ಅಧ್ಯಯನದ ಪ್ರಕಾರ, ಪೋಲಿಸರ ಸಚೇತನೀಕರಣದಿಂದ ಅಂಥಾ ಪ್ರಯೋಜನವಾಗಲಿಲ್ಲ. ಬದಲಾಗಿ ಸಾರ್ವಜನಿಕರಿಗೆ ತಿಳಿವಳಿಕೆ ನೀಡುವ ಕ್ರಮ ಬಹುಮಟ್ಟಿಗೆ ನಿರೀಕ್ಷಿತ ಸುಧಾರಣೆ ತಂದಿತು. ಆದ್ದರಿಂದ ಸರ್ಕಾರ ಮತ್ತು ಜನತೆ ನಮ್ಮ ದೇಶದಲ್ಲೂ ಕೂಡ ಸಾರ್ವಜನಿಕರಿಗೆ ಈ ಬಗ್ಗೆ ಮಾಹಿತಿ ಮತ್ತು ತಿಳಿವಳಿಕೆ ನೀಡಿಕೆಯ ಜವಾಬ್ದಾರಿಯನ್ನು ಬಹಳ ಗಂಭೀರವಾಗಿ ದೀರ್ಘಕಾಲೀನ ಯೋಜನೆಯಾಗಿ ತೆಗೆದುಕೊಳ್ಳಬೇಕು. ದೆಹಲಿ ಘಟನೆ ಉಂಟುಮಾಡಿರುವ ಚರ್ಚೆಗಳ ಕಾವು ಈ ಪ್ರಯತ್ನದ ಪ್ರಾರಂಭಕ್ಕೆ ಭದ್ರ ಬುನಾದಿ ಹಾಕಿದೆ. ಈಗ ಈ ಪ್ರಕ್ರಿಯೆಗೆ ಚಾಲನೆ ಕೊಡದಿದ್ದರೆ ಹಿಂದಿನ ಅನೇಕ ಈ ರೀತಿಯ ಪ್ರಕರಣಗಳ ವಿಷಯದಲ್ಲಿ ನಡೆದಂತೆ ಸಾರ್ವಜನಿಕರ ಪ್ರತಿಭಟನೆ ಮತ್ತು ಪರಿಹಾರದ ಬೇಡಿಕೆ ಆರಂಭಶೂರತ್ವದಲ್ಲಿ ಪರ್ಯವಸಾನವಾಗುವ ಅಪಾಯವಿದೆ.

ಅದೇ ಅಧ್ಯಯನ ಮುಂದುವರಿದು ಹೋಗಿ ಹೇಳುತ್ತದೆ: ತಿಳಿವಳಿಕೆಯನ್ನು ಹೆಚ್ಚಿಸುವುದಕ್ಕಿಂತಾ ಮುಖ್ಯವಾದದ್ದು, ಸಾಮಾಜಿಕ ನಡವಳಿಕೆಯಲ್ಲಿ ಮತ್ತು ಚೇತನದಲ್ಲಿ ಅತಿಸೂಕ್ಷ್ಮವಾಗಿ ಹಾಸುಹೊಕ್ಕಾಗಿರುವ ಗಂಡಾಳಿಕೆಯ ಮೌಲ್ಯಗಳ ಮೂಲೋತ್ಪಾಟನೆ ಮಾಡಬೇಕಾದುದು. ಇದು ದೀರ್ಘ ಕಾಲೀನ ಪ್ರಕ್ರಿಯೆ ಮತ್ತು ಅಂತಿಮ ಸಮಾಧಾನ. ದೆಹಲಿಯ ಹುಡುಗಿಯ ಮಾನಭಂಗದ ವಿರುದ್ಧ ಪ್ರತಿಭಟನಕಾರರಲ್ಲಿ ಕೆಲವರು ಪೋಲೀಸರನ್ನು 'ನೀವೆಲ್ಲಾ ಬಳೆ ತೊಟ್ಟುಕೊಳ್ಳಿ ಹೋಗಿ' ಎಂದು ಹಂಗಿಸುತ್ತಿದ್ದರಂತೆ. ಇಂಥಾ ಬೈಗುಳಗಳೇ ಮೂಲತಃ ಸ್ತ್ರೀವಿರೋಧಿ ಮಾನಸಿಕತೆಯಿಂದ ಬಂದುದೆಂಬುದು ಅವರಿಗೆ ಹೊಳೆಯಲಿಲ್ಲ. ಯಾಕೆಂದರೆ ಗಂಡಿನ ಪಾರಮ್ಯ ನಮ್ಮ ಭಾಷೆ–ಸಂಸ್ಕೃತಿಗಳ ಅಂತರಾಳದಲ್ಲಿ ಬೇರೂರಿದೆ. ಹೆಂಗಸರನ್ನು 'ಚೀಸು ಬಡೀ ಹೈ ಮಸ್ತ್ ಮಸ್ತ್' ಆಗಿ ಚಿತ್ರಿಸುವ ಸಿನಿಮಾಗಳೂ, ಸರುಕುಗಳ ವಿತರಣೆ ಸಾಧನವಾಗಿ ನೋಡುವ ಜಾಹಿರಾತುಗಳೂ ಬಲಾತ್ಕಾರದ ಬುನಾದಿಗಳನ್ನು ನಿರ್ಮಿಸುತ್ತಿರುತ್ತವೆ.

ಮಹಿಳೆಯರ ಬಲಾತ್ಕಾರದ ಘಟನೆಗಳನ್ನು ಪ್ರತ್ಯೇಕ ಸಮಸ್ಯೆಯಾಗಿ ನೋಡುವ ಅಗತ್ಯವಿದೆಯಾದರೂ ಅದರ ಜೊತೆಗೆ ತಳುಕುಹಾಕಿಕೊಂಡ ಇತರ ಶೋಷಣಾ ನೆಲೆಗಳನ್ನು ಮರೆಯುವಂತಿಲ್ಲ. ವರ್ಗ, ಜಾತಿ, ಜನಾಂಗಮೂಲವಾದ ಶೋಷಣಾನೆಲೆಗಳು ಬಲಾತ್ಕಾರಕ್ಕೆ ಪೋಷಕಗಳಾಗಿರುವುದು ಲಭ್ಯವಿರುವ ಅಂಕಿ–ಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಆದ್ದರಿಂದ ಈ ಪೀಡೆಗಳ ನಿವಾರಣೆಯೂ ಬಲಾತ್ಕಾರ ನಿವಾರಣೆಯ ಬಹುಮುಖ್ಯ ಅಂಗ. ಕಾನೂನಿನ ಬಲೆಯಿಂದ ಬಚಾವಾದ ಬಲಾತ್ಕಾರಕಾರರ ಜೊತೆಗೆ ಅಮೆರಿಕಾದಲ್ಲಿ ನಡೆಸಿದ ವ್ಯಾಪಕ ಸಂದರ್ಶನದಲ್ಲಿ ಆ ರುಸ್ತುಮರೆಲ್ಲಾ ಹೆಂಗಸಿಗೆ ಎಷ್ಟು ಹಿಂಸೆಯಾಗುತ್ತಿತ್ತೋ ಅಷ್ಟು ಮಜಾ ಸಿಗುತ್ತಿತ್ತೆಂದು ಕೊಚ್ಚಿಕೊಂಡಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗಾರರಿಗೆ ದೊರಕುವ ಮಜಾ ಕೂಡಾ ಇದೇ ನಮೂನೆಯದು.

ನಮ್ಮ ಮುಂದಿನ ಇನ್ನೊಂದು ಪ್ರಶ್ನೆ ಅತ್ಯಂತ ಮಾನವೀಯವಾದುದು: ಅದು ಬಲಾತ್ಕಾರ ಪೀಡಿತ ಮಹಿಳೆಯರ ಭವಿಷ್ಯವನ್ನು ಕುರಿತದ್ದು. ಒಮ್ಮೆ ಬಲಾತ್ಕಾರಕ್ಕೊಳಗಾದ ಹೆಣ್ಣು ಆ ನಂತರ ಜೀವಂತ ಹೆಣವಾಗಿ ಬದುಕಬೇಕಾಗುತ್ತದಲ್ಲಾ ಎಂದು ಒಬ್ಬ ಪ್ರಸಿದ್ಧ ಮಹಿಳಾ ರಾಜಕಾರಣಿ ಕಳವಳ ವ್ಯಕ್ತಪಡಿಸಿದ್ದಾರೆ. ಇಂಥಹ 'ಅಯ್ಯೋಪಾಪ' ಭಾವನೆ ಮಾನಭಂಗಪೀಡಿತರ ವಿಷಯದಲ್ಲಿ ಅತ್ಯಂತ ನೇತ್ಯಾತ್ಮಕ ಮತ್ತು ಕ್ರೂರ. ಮಾನಭಂಗದಂಥ ಹಿಂಸ್ರ ಅನುಭವವನ್ನು ಹಾದು ಬಂದ ಹೆಂಗಸರು ಎಲ್ಲರಂತೆ ತಲೆಯೆತ್ತಿ ಬದುಕುವಂಥ ಪುನರ್ವಸತೀಕರಣ ಕ್ರಮಗಳೂ, ಮನೋಧರ್ಮಗಳೂ ಕುಟುಂಬಗಳಲ್ಲಿ ಮತ್ತು ಸಮಾಜದಲ್ಲಿ ನಿರ್ಮಾಣವಾಗಬೇಕು.

ಉತ್ತರಾಖಂಡದ ಪರಿಸರಪರ ಆಂದೋಲನಾನಿರತ ಮಹಿಳೆಯರು ತಮ್ಮ ಹಿಮಾಲಯದ ಸೀಮೆಗಳಿಂದ ಗುಂಪುಗುಂಪಾಗಿ ಹೊರಟು ತಮ್ಮ ಪ್ರತಿಭಟನೆಯ ಗಮ್ಯಸ್ಥಾನವಾದ ದೆಹಲಿಗೆ ಕಾಲುನಡಿಗೆಯಲ್ಲಿ ಹೋಗುವ ಹಾದಿಯಲ್ಲಿ ಮೀರಟ್‌ನ ಬಳಿಯ ಹೊಲಗದ್ದೆಗಳ ಆಸುಪಾಸಿನಲ್ಲಿ ರಾತ್ರಿ ಹೊತ್ತು ಬಿಡಾರ ಹೂಡುವರು. ಅವರ ಮೇಲೆ ರಾತ್ರೋರಾತ್ರಿ ಗುಂಪಾಗಿ ಕಾನೂನಿನ ಠೇಕೇದಾರರು ಎರಗಿ ಸಾಮೂಹಿಕ ಮಾನಭಂಗ ಮಾಡಿದರು. ಆ ಬಲಾತ್ಕಾರ ಮಾಡಿದವರು ಕಾನೂನಿನ ಹಿಡಿತದಿಂದ ಬಚಾವಾಗಿಬಿಟ್ಟರು.

ಆದರೆ ಆ ಸಾಮೂಹಿಕ ಬಲಾತ್ಕಾರಕ್ಕೊಳಗಾದ ಮಹಿಳೆಯರ ಮುಂದಿನ ಜೀವನವೇನಾಯಿತು? ಇದು ನನ್ನ ಆತ್ಮೀಯ ಮಿತ್ರರೂ ಉತ್ತರಾಖಂಡದ ಸಾಮಾಜಿಕ ಆಂದೋಲನದ ಸಕ್ರಿಯ ಕಾರ್ಯಕರ್ತರೂ ಆದ ತ್ರಿಪನ್ ಸಿಂಗ್ ಚೌಹಾಣ್ ಅವರ 'ಯಮುನಾ' ಎಂಬ ಹಿಂದಿ ಕಾದಂಬರಿಯ ಹುರುಳು. ಆಂದೋಲನದ ನೆನಪು ಗಾಢವಾಗಿರುವ ಹಿಮಾಲಯದ ಗಡವಾಲ್ ಮತ್ತು ಕುಮಾವೊ ಪ್ರದೇಶಗಳಲ್ಲಿ ಈ ಕಾದಂಬರಿ ಮನೆಮಾತಾಗಿದೆ.

ಕಥಾನಾಯಕಿ ಯಮುನಾ ಸಮಕಾಲೀನ ಇತಿಹಾಸದ ಅತ್ಯಂತ ಘೋರ ಸಾಮೂಹಿಕ ಮಾನಭಂಗ ಘಟಿಸಿದ ಆ ರಾತ್ರಿ ದುರಾಚಾರಕ್ಕೆ ಬಲಿಯಾಗಿ ತನ್ನೂರಿಗೆ ಹಿಂತಿರುಗುತ್ತಾಳೆ. ಆಂದೋಲನಕ್ಕೆ ಹೊರಟಾಗ ತನ್ನ ತಿಂಗಳ ಮಗುವನ್ನು ಗಂಡನ ಜೊತೆ ಬಿಟ್ಟು ಬಂದಿರುತ್ತಾಳೆ. ಆದರೆ ಈಗ ಗಂಡನ, ಮಗನ ಮುಖ ನೋಡುವ ಧೈರ್ಯ ಅವಳಿಗಿಲ್ಲ.

ಮಗುವಿಲ್ಲದ ಬಾಣಂತಿತನಕ್ಕಾಗಿ ತಾಯ ಮನೆ ಸೇರುತ್ತಾಳೆ. ತಾಯಿ ಮಗಳು ಇಬ್ಬರಿಗೂ ಒಬ್ಬರೊಬ್ಬರ ಮುಖ ನೋಡುವುದೂ ಕಷ್ಟವಾಗಿರುತ್ತದೆ. ಜೊತೆಗೆ ತನ್ನ ಎದೆಯಲ್ಲಿನ ಹಾಲನ್ನು ಮಗುವಿಗೆ ಕುಡಿಸಲವಕಾಶವಿಲ್ಲದೆ ಅದು ಒತ್ತತೊಡಗುತ್ತದೆ. ಅದನ್ನು ಕಳೆದುಕೊಳ್ಳುವ ಸಲುವಾಗಿ ಕಾಡಿಗೆ ಹೋಗಿ ಕಾಡಿನ ಗಿಡಮರಗಳೂ ತನ್ನ ಶಿಶುಗಳೆಂದು ಬಗೆದು ಅವುಗಳ ಬುಡಗಳಿಗೆ ತನ್ನೆದೆ ಹಾಲನ್ನು ಹಿಂಡತೊಡಗುತ್ತಾಳೆ. ತಾನು ಕೇವಲ ಒಬ್ಬ ಮಾನಭಂಗವಾದ ಹೆಣ್ಣಲ್ಲ, ಇಡೀ ಕಾಡಿನ ತಾಯಿ ಎಂಬ ಭಾವನೆ ಬರತೊಡಗಿ ಧೈರ್ಯ ತಾಳುತ್ತಾಳೆ. ತನ್ನನ್ನು ಗಾಢವಾಗಿ ಪ್ರೀತಿಸುವ ಗಂಡನ ಮನೆಗೆ ಹಿಂತಿರುಗುತ್ತಾಳೆ. ಎಷ್ಟೇ ಪರಸ್ಪರ ಪ್ರೀತಿ ಇದ್ದರೂ ಅವರಿಬ್ಬರೂ ಸ್ವಸ್ಥ ದಾಂಪತ್ಯ ಜೀವನಕ್ಕೆ ಮರುಳುವಲ್ಲಿ ಪಟ್ಟ ಪಡಿಪಾಟಲುಗಳನ್ನು ಕಾದಂಬರಿ ಹೃದ್ಯವಾಗಿ ಚಿತ್ರಿಸುತ್ತದೆ. ಈ ದೀರ್ಘ ಪ್ರಯತ್ನದ ಫಲವಾಗಿ ಅವರಿಬ್ಬರ ದಾಂಪತ್ಯ ಪ್ರೇಮ ಮೊದಲಿಗಿಂತಲೂ ಗಾಢವಾಗುತ್ತದೆ. ತ್ರಿಪನ್ ಹೇಳಿದ ಪ್ರಕಾರ ಆ ಯಮುನಾ ಕೇವಲ ಕಾದಂಬರಿಯ ಪಾತ್ರವಲ್ಲ. ಒಬ್ಬ ನಿಜ ವ್ಯಕ್ತಿ. ಉತ್ತರಾಖಂಡದ ಉದ್ದಗಲ ಅಂಥಹ ಎಷ್ಟೋ ಯಮುನಾರಿದ್ದಾರೆ. ತಮ್ಮ ಸೋಲೊಪ್ಪದ ಧೈರ್ಯದಿಂದ, ಮನೆಯವರ ಬೆಂಬಲದಿಂದ ಅಂಥವರಲ್ಲಿ ಬಹು ಮಂದಿ ಆ ದುಃಸ್ವಪ್ನದಿಂದ ಪಾರಾಗಿ ಕೌಟುಂಬಿಕ ಜೀವನಕ್ಕೆ ವಾಪಸಾಗಿರುವುದಲ್ಲದೆ ಮತ್ತೆ ಆಂದೋಲನದ ಕಣಕ್ಕೆ ಧುಮುಕಿದ್ದಾರೆ.

❑ ಕೃಪೆ : ಪ್ರಜಾವಾಣಿ

**ಪ್ರೊ. ಎಚ್.ಎಸ್. ಶಿವಪ್ರಕಾಶ್**

# ದುರುಳರ ಕರಾಳ ಸಂತೆಯಲ್ಲಿ ಹೆಣ್ಣಿನ ಜೀವನದ ಮೌಲ್ಯ???



ಎಲ್ಲಿ ಸ್ತ್ರೀಯನ್ನು ಗೌರವದಿಂದ ಕಾಣುತ್ತೇವೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ! ಹಹಹ.. ನಿಜವಾಗಿಯೂ ನಗೆಯು ಬರುತಿದೆ. ಹಾಗಾದ್ರೆ ಅಂತಹ ಆ ಕಾಲ ಎಲ್ಲಿ ಹೋಯಿತು ??? ಮತ್ತೆ ಯಾಕೆ ಹೀಗಾಯಿತು ?? ಇನ್ನೂ ಆಗ್ತಾನೂ ಇದೆಯಲ್ಲ?? ಇಲ್ಲಿ ಹೆಣ್ಣು ಎನ್ನುವ ಜೀವ ಭ್ರೂಣದಲ್ಲಿದ್ದಾಗಲೂ ಸುರಕ್ಷಿತಳಿಲ್ಲಾ.. ಹುಟ್ಟಿದ ಮೇಲಂತೂ ಇಲ್ಲವೇ ಇಲ್ಲ. ಯಾಕೆ?? ಇತ್ತೀಚೆಗೆ ಯಾಕೋ ಮಾನವನಲ್ಲಿ ಇರಬೇಕಾದ ಯಕಃಶ್ಚಿತ್ ಪ್ರಾಥಮಿಕ ಗುಣ, ಆಚಾರ,ವಿಚಾರ, ವರ್ತನೆ, ನಡವಳಿಕೆ ಮತ್ತು ನೈತಿಕತೆ ಕಂಡೂ ಕಾಣದಂತೆ ಮಾಯವಾಗ್ತಾ ಇದೆ. ಇದನ್ನು ನೀವೂ ಒಪ್ಪುತ್ತೀರಿ ತಾನೆ??

ಬಾಂಬುಗಳ ಸುರಿಮಳೆಯಲ್ಲಿ ತಲ್ಲಣಗೊಳ್ಳುತ್ತಿದ್ದ ದೆಹಲಿ ಇಂದು ಅತೀ ಭೀಕರವಾದ, ಅಮಾನುಷ ಕಾರಣಕ್ಕೆ ತತ್ತರಿಸಿ ಹೋಗಿದೆ. ಇದಕ್ಕೆ ಒಂದೇ ಒಂದು ಕಾರಣ–ಸಾಮೂಹಿಕ ಬಲಾತ್ಕಾರ. ತನ್ನ ಜೀವಕ್ಕಾಗಿ ಹೋರಾಡುತ್ತಿದ್ದ 'ದಾಮಿನಿ'ಯನ್ನು ಸಿಂಗಾಪೂರಕ್ಕೆ ಕರೆದೊಯ್ದರೂ ಅವಳ ದೇಹಸ್ಥಿತಿ ಅಲ್ಲಿ ಸರಿಹೋಗದೇ ಡಿಸೆಂಬರ್ 29 ರಂದು ಬೆಳಿಗ್ಗೆ 2 ಗಂಟೆಗೆ ಕೊನೆಯುಸಿರೆಳೆದಳು. ಅರಳಿದ ಮೊಗ್ಗು ಪರಿಮಳ ಬೀರುವುದಕ್ಕೂ ಮುನ್ನ ಆ ಪಾಪಿಗಳ ಕೈಯಿಂದ ನಲುಗಿ ಹೋಯಿತಲ್ಲಾ. ತಂದೆ ತಾಯಿಯರ ಮುದ್ದಿನ ಕಂದಮ್ಮ ಘೋರ ನೋವನ್ನು ಅನುಭವಿಸುತ್ತಾ ಕೊನೆಯುಸಿರೆಳೆಯಬೇಕಾಯಿತಲ್ಲಾ. ಇದು ನ್ಯಾಯವೇ?? ಛೇ! ಇದಕ್ಕೆ ಕೊನೆಯಿಲ್ಲವೇ??

ಒಂಟಿ ಹೆಣ್ಣು ದಾಮಿನಿಯ ಮೇಲೆ ಅಟ್ಟಹಾಸ ಹಾಕಿ ಅತ್ಯಾಚಾರಗೈದ ನರ ರಾಕ್ಷಸರ ರುಂಡ ಚಂಡಾಡುವ ಬದಲು ಗೂಳೆಯಂತೆ ಬಿಟ್ಟು ಬಿಟ್ಟಿದ್ದಾದ್ರೂ ಯಾಕೆ??

ಈ ಅತ್ಯಾಚಾರ ಕೇವಲ ದೈಹಿಕವಾಗಿಯೇ ಆಗಿರದೆ, ಮಾನಸಿಕವಾಗಿ, ನೈತಿಕವಾಗಿಯೂ ಆಗಿದೆ ಎಂಬುದು ನನ್ನ ಅನಿಸಿಕೆ. ಹೆಣ್ಣನ್ನು ಗೌರವ ಭಾವದಿಂದ ನಡೆಸಿಕೊಳ್ಳುವ ಜವಾಬ್ದಾರಿ ನಮ್ಮ ಸಮಾಜದ್ದು ಅಲ್ಲವೇ? ಹೆಣ್ಣು ತನ್ನೆಲ್ಲಾ ಕಾಲಘಟ್ಟಗಳಲ್ಲಿ ಬರುವ ತಂದೆ, ಅಣ್ಣ, ತಮ್ಮ, ಗೆಳೆಯ, ಗಂಡ, ಮಾವ, ಭಾವ, ಮೈದುನ, ಮಗ ಹೀಗೆ ಹತ್ತು ಹಲವು ಅವತಾರಗಳಲ್ಲಿರುವ ಗಂಡಸರನ್ನು ನಂಬುತ್ತಾಳೆ. ಆದರೆ ಇದನ್ನು ನೋಡಿದಾಗಿನಿಂದ, ಇಲ್ಲಿ ನಡೆದ ಪ್ರಸಂಗ ನೆನೆಯುತ್ತಲೇ ನಾವ್ಯಾರನ್ನ ನಂಬಬೇಕು? ಎಂಬ ಪ್ರಶ್ನೆ ಸತತವಾಗಿ ಕಾಡ್ತಾ ಇದೆ. ಇವರಲ್ಲಿ ಯಾರು ಸಭ್ಯರು ಎಂಬ ಅನುಮಾನ ಕಾಡುತ್ತದೆ! ದಿನ ಬೆಳಗಾದರೆ ಹೊರಗೆ ದುಡಿಯಲು ಹೋಗುವ ಮಹಿಳೆಯರು, ಕಲಿಯಲು ಊರು ಬಿಟ್ಟು ಬಂದ ತರುಣಿಯರು, ಕಾಲೇಜಿಗೆ ಹೋಗುವ ಕನ್ಯೆಯರು, ಇವರಲ್ಲಿ ಯಾರು ಈ ಹೀನ ಯುಗದಲ್ಲಿ ಸುರಕ್ಷಿತರಾಗಿದ್ದಾರೆ ಹೇಳಿ ?? ಹೆಣ್ಣು ಮಕ್ಕಳನ್ನು ಕಳಿಸಿ ಮನೆಯಲ್ಲಿ ದುಗುಡದಿಂದ ಕೈ ಸೆರಗಿಗೆ ಒರೆಸುತ್ತಾ ಕೂತ ತಾಯಂದಿರ ಎದೆಯೊಳಗೆ ಭೂಕಂಪದ ನಡುಗು ಬರದೇ ಇರುತ್ತದೆಯೇ?? ಬೆಳಿಗ್ಗೆ ಹೋದ ಮಗಳ ಹೆಜ್ಜೆ ಸಪ್ಪಳ ಕೇಳಿದೊಡೆ ಒಮ್ಮೆ ಒಳ ಬಂದರೆ ಸಾಕೆಂಬ ಹರಕೆ ದಿನಾಲೂ ಆ ತಾಯಿ ಹೊರುತ್ತಾಳೆ. ಟಿವಿಯಲ್ಲಿ, ದಿನಪತ್ರಿಕೆಗಳಲ್ಲಿ , ಅಷ್ಟೇ ಅಲ್ಲಾ ಅಕ್ಕಪಕ್ಕದ ಗೆಳತಿಯರಿಂದ ಬರೇ ಇಂತಹ ಮಾತುಗಳನ್ನೇ ಕೇಳುತ್ತಾ ಕುಳಿತ ಮನೆಯವರಾದ್ರೂ ಹ್ಯಾಗೆ ಶಾಂತಿಯಿಂದ ದಿನ ಕಳೆಯೋಕೆ ಸಾಧ್ಯ??

ಕಳೆದ 24 ವರ್ಷಗಳಿಂದ ನಾನು ಈ ಹೀನ ಕೃತ್ಯವೆಸಗಿದ ದೇಶದ ರಾಜಧಾನಿ ಅಲ್ಲಲ್ಲಾ ಅತ್ಯಾಚಾರದ ಉತ್ತುಂಗವಾದ ದೆಹಲಿಯಲ್ಲೇ ವಾಸಿಸುತ್ತಾ ಇದ್ದೇನೆ. ಇಲ್ಲಿ ನಾವು ದಿನ ನಿತ್ಯ ಒಂದಲ್ಲಾ ಒಂದು ರೀತಿಯ ದುಗುಡದಿಂದ ನಮ್ಮ ಜೀವನ ಸಾಗಿಸುತ್ತಾ ಇದ್ದೇವೆ. ಸಹಜವಾದ ಬದುಕು ಮರೆತೇ ಹೋಗಿದೆ ಅನ್ನಬಹುದು. ಅಂತೂ ಬಾಂಬುಗಳನ್ನು ಎದುರಿಸುತ್ತಾ ಮತ್ತೆ ಏನೂ ಆಗದಂತೆ ನಗುನಗುತ್ತ ನಮ್ಮ ದಿನನಿತ್ಯದ ಜೀವನ ನಡೆಸುತ್ತಿರುವಾಗ ಸುನಾಮಿಯಂತೆ ಒಮ್ಮೆಲೇ ಅಬ್ಬರಿಸುತ್ತಾ ಬಂದ ಈ ಹೀನ ಕೃತ್ಯವು ನಮ್ಮೆಲ್ಲರ ಜೀವನವನ್ನೇ ಅಲ್ಲೋಲಕಲ್ಲೋಲವಾಗಿಸಿಬಿಟ್ಟಿದೆ. ಇದು ಉತ್ತರ ಭಾರತದಲ್ಲಿ ಅದರಲ್ಲೂ ದೆಹಲಿಯಲ್ಲಿ ಪಾರ್ಥೇನಿಯಂ ತರಹ ಬೆಳೀತಾನೇ ಇದೆ. ಇವರು ಎಸಗುವ ಹೀನಕೃತ್ಯಗಳಿಗೆ ಮುಖ್ಯ ಕಾರಣ ಇಲ್ಲಿಯ ಇತಿಹಾಸವೇನೋ ಎಂದು ಒಮ್ಮೊಮ್ಮೆ ನನಗೆ ಅನಿಸುತ್ತದೆ. ಅದೆಷ್ಟೋ ಜನರನ್ನು ಕೊಂದು, ರುಂಡವನ್ನು ಚಂಡಾಡಿದಂತಹ ಈ ಇಂದ್ರಪ್ರಸ್ತದಲ್ಲಿ ರಕ್ಕಸರಲ್ಲದೇ ಇನ್ನ್ಯಾರು ಜನಿಸುವರು ಹೇಳಿ? ರಕ್ತ ಪಿಪಾಸಿಗಳು ಜೊತೆಗೆ ಕಾಮಪಿಪಾಸಿಗಳಲ್ಲದೇ ಸಾಮಾನ್ಯ ಜನರು ಹ್ಯಾಗೆ ಹುಟ್ಟಿಯಾರು?

ಹುಟ್ಟಿದ ಹಸುಗೂಸಿನಿಂದ ಹಿಡಿದು ಮುದಿವಯಸ್ಸಿನ ಮಹಿಳೆಯನ್ನೂ ಬಿಡರು ಈ ಕಾಮಿಗಳು. ಮೊನ್ನೆ ನಮ್ಮ ಪಕ್ಕದ ಮನೆಯ ಕೆಲಸದವಳ 2 ವರ್ಷದ ಮಗಳ ಮೇಲೆ ಹಣ್ಣು ಮಾರುವ 20 ವರ್ಷದ ವ್ಯಕ್ತಿ ಅತ್ಯಾಚಾರ ಎಸಗುತ್ತಿದ್ದಾಗ ಸಿಕ್ಕು ಬಿದ್ದ. ಈಗ ಜೈಲಿನಲ್ಲಿ ಬಿದ್ದಿದ್ದಾನೆ. ಹೂಂ.. ಇಲ್ಲಂತೂ ದಿನಾಲೂ ಒಂದಿಲ್ಲಾ ಒಂದು ರೀತಿಯಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ ಹಾಗೂ ಶೋಷಣೆ ಆಗ್ತಾನೇ ಇದೆ. ಇದಕ್ಕೆ ಕೊನೆ ಎಂದು? ಬಸ್ಸು, ಮೆಟ್ರೋ, ಆಫೀಸು, ಮಾರ್ಕೆಟ್.. ಇನ್ನೂ ಯಾವ ಜಾಗ ಸುರಕ್ಷಿತವಾಗಿದೆ ನಮಗೆ ಅಂತಾನೇ ತಿಳೀತಾ ಇಲ್ಲಾ.

ನಾಲ್ಕು ದಿನಗಳ ಹಿಂದೆ ಸಫ್ದರ್‌ಜಂಗ್ ಆಸ್ಪತ್ರೆಗೆ ಹೋಗಿದ್ದೆ. ಆದರೆ ಟಿವಿ ಹಾಗೂ ಪೋಲೀಸರ ದಂಗೆ ಶುರುವಾಗಿ ಒಳಗೆ ಹೋಗಲಾಗದೇ ಹೊರಗಿಂದಾನೇ ನೋಡಬೇಕಾಯ್ತು. ಅಲ್ಲಿ ನಡೆಯುತ್ತಿದ್ದ ಸಂಗತಿ ನಿಮಗೆ ಹೇಳಬಯಸುವೆ. ಎಲ್ಲಕ್ಕೂ ಹೆಚ್ಚಿಗೆ ಅಂದ್ರೆ ಅಲ್ಲಿ ಟಿವಿಯಲ್ಲಿ, ದಿನಪತ್ರಿಕೆಯಲ್ಲಿ ತಮ್ಮ ಮುಖ ಬರಬೇಕೆಂದು ಒದ್ದಾಡುವ ಜನರನ್ನು ನೋಡಿ ತಮ್ಮ ಸುದ್ದಿ ಮೊದಲು ಬಿತ್ತರಿಸಬೇಕೆಂಬ ಪೈಪೋಟಿಯನ್ನು ನೋಡಿ ನಗುಬಂತು. ಒಳಗಡೆ ಆ ಹುಡುಗಿ ಉಸಿರಾಡಲೂ ಆಗದೇ ಒದ್ದಾಡುತ್ತಿದ್ದರೆ, ಇಲ್ಲಿ ಇವರು ತಮ್ಮ ಪ್ರಸಿದ್ಧಿಗಾಗಿ ಆಡುವ ನಾಟಕ ನೋಡಿ ಮನಸ್ಸಿಗೆ ತುಂಬಾ ಬೇಜಾರಾಯ್ತು.

ಆದರೆ ಅದೇ ಇಂಡಿಯಾ ಗೇಟ್ ಹಾಗೂ ಜಂತರ್ ಮಂತರ್ ಬಳಿ ಹಗಲು–ರಾತ್ರಿ ಪ್ರದರ್ಶನ ಮಾಡುತ್ತಾ, ಪ್ರತಿಭಟನೆ ಮಾಡಿ ಈ ಹೋರಾಟದಲ್ಲಿ ಪಾಲ್ಗೊಂಡಿದ್ದವರಲ್ಲಿ ಒಂದು ರೀತಿಯ ಭಯವೇನೋ ಇತ್ತು. ಆದರೆ ಈ ಬಾರಿ ಅಲ್ಲಿ ವಿಶೇಷವಾಗಿ ನೆರೆದಿದ್ದ ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಹಾಗೂ ನಮ್ಮಂತಹ ಮಹಿಳೆಯರಲ್ಲಿ ಒಂದು ರೀತಿಯ ಆತ್ಮವಿಶ್ವಾಸ ಎದ್ದು ಕಾಣುತಿತ್ತು. ವಯಸ್ಸಾದವರೂ ಬಂದು ಈ ಹೀನಕೃತ್ಯಕ್ಕೆ ನ್ಯಾಯ ನೀಡಿರೆಂದು ಕೇಳುತ್ತಿದ್ದುದ್ದನ್ನು ನೋಡಿದಾಗ, ಹೀಗೆ ಎಲ್ಲರೂ ಒಗ್ಗಟ್ಟಾದರೆ ನ್ಯಾಯ ಖಂಡಿತ ಸಿಗುತ್ತದೆಂಬ ವಿಶ್ವಾಸ ಇನ್ನಷ್ಟು ಅಧಿಕವಾಯಿತು. ಅದೂ ಅಲ್ಲದೆ ಕೊರೆಯುವ ಚಳಿಯಲ್ಲಿ ತಣ್ಣೀರು ಸುರಿದರೂ, ಪೋಲೀಸರ ಲಾಠಿಗೆ ಮೈಯೊಡ್ಡಿದರೂ ಜಗ್ಗದೇ ನಿಂತ ಜನಸ್ತೋಮವನ್ನು ನೋಡಿ–ಅಂತೂ ಭಾರತಮ್ಮನ ಮಕ್ಕಳು ಎಚ್ಚರಾದರು ಎನಿಸಿತು. ಆದರೆ ಈ ಹೋರಾಟಕ್ಕೆ ವಿರಾಮ ಹಾಡುವಂತೆ ಆ ಹುಡುಗಿಯನ್ನು ಸಿಂಗಾಪೂರಕ್ಕೆ ಕರೆದೊಯ್ದಾಗ ಅನಿಸಿದ್ದು ಒಂದೇ.. ಈ ಸಮಸ್ಯೆಗೆ ಪರಿಹಾರ ತೋಚದೇ ಪಲಾಯನದ ನೆಪವಿದು ಎಂದು. ಆಯ್ತು.. ಆ ಧೀರ ಮಹಿಳೆ ಪರದೇಶದಲ್ಲಿ ನರಳಿ ನರಳಿ ಅಸುನೀಗಿಯಾಯ್ತು. ಅಮಾನುಷತ್ವಕ್ಕೆ ಒಂದು ಹೆಣ್ಣಿನ ಬಲಿ. ಮುಂದೆ ಯಾರು????????

ಇನ್ನು ಯಾವಾಗ ಆ ಹುಡುಗಿಗೆ ನ್ಯಾಯ ದೊರೆಯುತ್ತೆ ಅಂತ ನೋಡಬೇಕು. ಅವಳ ಆತ್ಮಕ್ಕೆ ಶಾಂತಿ ದೊರೆಯುವುದೋ ಇಲ್ಲವೋ?? ಕಾರಣ ಇನ್ನು ಶುರುವಾಗುತ್ತವೆ. ಎಡೆಬಿಡದ ವಾದಗಳು...ಸಾಕ್ಷಿಗಳು.. ಕೋರ್ಟು.. ಮುಂದಕ್ಕೆ ಹಾಕುವ ದಿನಾಂಕಗಳು .. ತನಿಖೆ.. ಕೋರ್ಟಿನಿಂದ ..ಕೋರ್ಟಿಗೆ? ಮುಂದೆ. ಸುಪ್ರೀಂ ಕೋರ್ಟ್ ನಲ್ಲಿ ಮರಣ ದಂಡನೆ ಶಿಕ್ಷೆ ಕೊಟ್ಟ ಮೇಲೆ.. ಮತ್ತೆ ರಾಷ್ಟ್ರಪತಿಗಳಿಗೆ ಪ್ರಾಣ ದಯಾ ಭಿಕ್ಷೆಗೆ ಅರ್ಜಿ.... ಎಲ್ಲಾ ಮುಗಿಯುವ ಹೊತ್ತಿಗೆ ಅದೆಷ್ಟು ವರ್ಷಗಳು ತಗಲುತ್ತವೆಯೋ ಆ ಭಗವಂತನೇ ಬಲ್ಲ. . .ಹೀಗೆ ಮುಂದೂಡುತ್ತಿದ್ದಂತೆ ನಾವೆಲ್ಲಾ ಈ ಪ್ರಕರಣವನ್ನು ಮರೆತೇ ಹೋಗಿರುತ್ತೇವೆ. ಮತ್ತೊಂದು ಪ್ರಕರಣದವರೆಗೆ ತೆಪ್ಪಗೆ ಇದ್ದು ಬಿಡುತ್ತೇವೆ. ಆದರೆ ಇದು ಪ್ರತಿಸಲದಂತಾಗಬಾರದು. ಇನ್ನು ಮಾತ್ರ ಆ ತಪ್ಪನ್ನು ಮಾಡದೇ ನಮ್ಮ ಕೊರಳ ಕೂಗನ್ನು, ನಮ್ಮ ಹೃದಯದ ಮಾತನ್ನು ಸರಕಾರಕ್ಕೆ ತಿಳಿಯುವವರೆಗೂ ಸುಮ್ಮನಿರಬಾರದು. ಇಂದು ಇಡೀ ದೇಶವೇ ಇದಕ್ಕೆ ಪ್ರತಿಭಟನೆ ಸೂಚಿಸಲು 'ಕಪ್ಪು ದಿನ'ವನ್ನು ಆಚರಿಸಿದೆ. ದೇಶದ ಮೂಲೆ ಮೂಲೆಯಿಂದ ಕೇಳಿ ಬರುತ್ತಿರುವ ಒಕ್ಕೊರಲಿನ ಪ್ರತಿಧ್ವನಿ–'ಅತ್ಯಾಚಾರಿ'ಗಳನ್ನು ಗಲ್ಲಿಗೇರಿಸಿ' ಎಂದು. ಆದರೆ ಅಷ್ಟಾದರೆ ಸಾಕಾ?? ಸ್ನೇಹಿತರೆ, ಇಂತಹ ದೌರ್ಜನ್ಯ ಎಸಗಿದ ಈ ಪಾಪಿಗಳನ್ನು ಹೀಗೇ ಬಿಡಬಾರದು. ಗಲ್ಲು ಇವರಿಗಲ್ಲ. ಚಿತ್ರಹಿಂಸೆ ಕೊಟ್ಟು ಕ್ಷಣ ಕ್ಷಣವೂ ಸಾಯುವಂತಹ ಕಠಿಣ ಶಿಕ್ಷೆ ವಿಧಿಸಬೇಕು. ಅತ್ಯಾಚಾರದಿಂದ ನಮಗೆ ಮುಕ್ತಿ ಸಿಗಬೇಕಾದರೆ ನಾವೇ ನಮ್ಮ ಸುರಕ್ಷತೆಯನ್ನು ಸ್ವತಃ ಮಾಡಿಕೊಳ್ಳಬೇಕು. ಪರಾವಲಂಬಿಯಾಗದಿರಿ ಗೆಳತಿಯರೇ 'ಓಬವ್ವನಾಗಿ'–'ಚೆನ್ನಮ್ಮ'ನಾಗಿ.. ನಿಮ್ಮ ಮಾನಕ್ಕಾಗಿ, ನಿಮ್ಮ ಅಧಿಕಾರಕ್ಕಾಗಿ ನೀವೇ ಹೋರಾಡಬೇಕು. ಅಂಜದೆ, ಅಳುಕದೆ ನೀವಾಗಿ ಮುಂದೆ ಬರಬೇಕು.

❑ ಸವಿತಾ ಇನಾಮದಾರ್

# ‘ಹ್ಯಾಟ್ರಿಕ್ ನಿರ್ದೇಶಕ’ ನಾಗೇಂದ್ರ ಮಾಗಡಿ ಅವರಿಗೆ ಅಭಿನಂದನೆ



ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕ ನಾಗೇಂದ್ರ ಮಾಗಡಿಯವರನ್ನು ದೆಹಲಿ ಕರ್ನಾಟಕ ಸಂಘ ಡಿಸೆಂಬರ್ 10 ರಂದು ಸಂಜೆ ಆತ್ಮೀಯವಾಗಿ ಸನ್ಮಾನಿಸಿತು. ದೆಹಲಿ ರಾಜ್ಯ ಸರಕಾರದ ಸಾಹಿತ್ಯ ಅಕಾಡೆಮಿಯು ಈ ಬಾರಿಯ ಅಂಬೇಡ್ಕರ್ ಫೆಲೋಶಿಪ್ ಪುರಸ್ಕಾರವನ್ನು ನಾಗೇಂದ್ರ ಮಾಗಡಿಯವರಿಗೆ ನೀಡಿದ್ದು, ಈ ಸಂದರ್ಭದಲ್ಲಿ ಅವರು ಸಂಘಕ್ಕೆ ಭೇಟಿ ನೀಡಿದ್ದರು.  ಈವರೆಗೆ ಸುಮಾರು 12 ಚಿತ್ರಗಳನ್ನು ನಿರ್ದೇಶಿಸಿರುವ ನಾಗೇಂದ್ರ ಅವರ ನಿರ್ದೇಶನದ ರೇಣುಕಾದೇವಿ ಮಹಾತ್ಮೆ, ಓಳು ಸಾರ್ ಬರೀ ಓಳು ಹಾಗೂ ಧರ್ಮದೇವತೆ ಚಲನಚಿತ್ರಗಳು ಸತತವಾಗಿ ಶತದಿನೋತ್ಸವ ಕಂಡು ದಾಖಲೆ ನಿರ್ಮಿಸಿವೆ. ದೆಹಲಿ ಕರ್ನಾಟಕ ಸಂಘದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ನಾಗೇಂದ್ರ ಅವರು ತಾನು ಜನ ಸಮೂಹದಿಂದ ಬೆಳೆದು ಬಂದು ಎಳವೆಯಲ್ಲೇ ನಾಟಕ ರಂಗದ ಕಡೆಗೆ ಆಕರ್ಷಿತನಾಗಿದ್ದೆ. ಖ್ಯಾತ ನಟ ದಿ. ಟೈಗರ್ ಪ್ರಭಾಕರ್ ಅವರು ಪ್ರೋತ್ಸಾಹ ನೀಡಿದ ಫಲವಾಗಿ ಚಲನಚಿತ್ರಗಳಲ್ಲಿ ಯಶಸ್ವಿಯಾದೆ ಎಂದು ಸ್ಮರಿಸಿದರು.  ನಾಗೇಂದ್ರ ಅವರನ್ನು ಅಭಿನಂದಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು, ತಾವು ಬಹಳ ಹಿಂದೆ ಟೈಗರ್ ಪ್ರಭಾಕರ್ ಅವರ ಸಿನಿಮಾದ ಚಿತ್ರೀಕರಣವನ್ನು ವೀಕ್ಷಿಸಿದ ಘಟನೆಯನ್ನು ನೆನೆದು, ಅವರ ಶಿಷ್ಯ ಈಗ ಎತ್ತರಕ್ಕೆ ಬೆಳೆದ ಬಗೆಯನ್ನು ಶ್ಲಾಘಿಸಿದರು. ನಾಗೇಂದ್ರರ ಸರಳತೆ ಮತ್ತು ಅವರ ಆಪ್ತ ಭೇಟಿಗೆ ಡಾ.ಹೆಗಡೆ ಸಂತಸ ವ್ಯಕ್ತಪಡಿಸಿದರು.

ರಾಜಕೀಯ ಮುಖಂಡರಾದ ನಾರಾಯಣ ಸ್ವಾಮಿ ಉಪಸ್ಥಿತರಿದ್ದರು. ವೃತ್ತಿಯಲ್ಲಿ ವಕೀಲರೂ, ಪ್ರವೃತ್ತಿಯಲ್ಲಿ ಸಿನಿಮಾ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಕಲ್ಮೇಶ್ ಹಾವೇರಿಪೇಟ್ ಅವರು ಈ ಸಂದರ್ಭದಲ್ಲಿ ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿದರು. ನಾಗೇಂದ್ರ ಅವರ ಬಹುಕಾಲದ ಒಡನಾಡಿ ಹಾಗೂ ಸಂಘದ ಉಪಾಧ್ಯಕ್ಷರಾದ ಬಿ.ಕೆ. ಬಸವರಾಜ್ ಅವರು ನಾಗೇಂದ್ರ ಮಾಗಡಿಯವರನ್ನು ಪರಿಚಯಿಸಿದರು. ವೈ. ಅವನೀಂದ್ರನಾಥ್ ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು.

❑ ಡಾ.ವೈ. ಅವನೀಂದ್ರನಾಥ್ ರಾವ್

## ಹಿರಿಯ ನ್ಯಾಯವಾದಿ ಶ್ರೀ ಎಂ. ವೀರಪ್ಪ ವಿಧಿವಶ



ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿ, 80ರ ಹರೆಯದ ಶ್ರೀ ಎಂ. ವೀರಪ್ಪ ಅವರು ಜನವರಿ 6, ಭಾನುವಾರದಂದು ದೆಹಲಿಯಲ್ಲಿ ನಿಧನರಾದರು. ಕಳೆದ 5 ದಶಕಗಳಿಗೂ ಹೆಚ್ಚು ಕಾಲ ದೆಹಲಿಯಲ್ಲಿ ವಾಸವಾಗಿದ್ದ ವೀರಪ್ಪ ಅವರು ದೆಹಲಿ ಕನ್ನಡಿಗರಿಗೆ ಚಿರಪರಿಚಿತರು. ಜನವರಿ 13, 1933ರಂದು ಮಂಗಳೂರಿನ ಕಂಕನಾಡಿಯಲ್ಲಿ ಜನಿಸಿದ ವೀರಪ್ಪನವರು ಬೆಂಗಳೂರಿನ ಸರಕಾರಿ ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ. ಪದವಿಯನ್ನು ಪಡೆದರು. 60ರ ದಶಕದಲ್ಲಿ ದೆಹಲಿಗೆ ಬಂದ ಅವರು ‘ಅಮೃತ್ ಬಾಜಾರ್’ ದಿನಪತ್ರಿಕೆಯ ಕಾನೂನು ವರದಿಗಾರರಾಗಿ ಸೇವೆ ಸಲ್ಲಿಸಿದರು. ಆನಂತರ ಸುಪ್ರೀಂ ಕೋರ್ಟಿನ ವಕೀಲರಾಗಿ ಸೇವೆ ಸಲ್ಲಿಸಲು ಆರಂಭಿಸಿದ ವೀರಪ್ಪ ಅವರು ಸತತ 30 ವರ್ಷಗಳ ಕಾಲ ಕರ್ನಾಟಕದ ಸರಕಾರದ ಕೌನ್ಸಿಲರ್ ಆಗಿ ತಮ್ಮ ಸೇವೆಯನ್ನು ಸಲ್ಲಿಸಿದರು.

ಹೊರನಾಡ ಕನ್ನಡಿಗರಾಗಿ ವೀರಪ್ಪ ಅವರಿಗೆ ಕನ್ನಡ ನಾಡು–ನುಡಿಯ ಬಗ್ಗೆ ಅಪಾರ ಅಭಿಮಾನ. 1986–87ರ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ ಹಾಗೂ 1989–91ರ ಸಾಲಿನಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ದೆಹಲಿಯ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶ್ರೀ ವೀರಪ್ಪ ಅವರಿಗೆ 2011ರ ಸಾಲಿನ ದೆಹಲಿ ಕರ್ನಾಟಕ ಸಂಘದ ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನೇರ ನಡೆ ನುಡಿಯ ನ್ಯಾಯವಾದಿ ವೀರಪ್ಪ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ಪ್ರಾರ್ಥಿಸುತ್ತೇವೆ.


**Saujanya Printing Press**

A HOUSE OF QUALITY PRINTING

D-47, Okhla Industrial Area, Phase-I,
New Delhi - 110 020
Phone : 40520770, 26815778
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಸ್ಮರಣಾರ್ಥ ಅಂಚೆ ಚೀಟಿ ಲೋಕಾರ್ಪಣೆ



ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವನ್ನು ಸಂಸ್ಥಾಪಿಸಿದರು. ಪೂಜ್ಯರು ಯುದ್ಧಸನ್ನದ್ಧರಾಗಿದ್ದ ಇಬ್ಬರು ರಾಜರುಗಳ ನಡುವೆ ಶಾಂತಿಮಂತ್ರವನ್ನು ಬೋಧಿಸಿದ ಕರುಣಾಳುಗಳು. ಕರ್ನಾಟಕದ ಸುತ್ತೂರು ಮತ್ತು ತಮಿಳುನಾಡಿನ ಉತ್ತರ ಮೇರೂರು ಶಿಲಾಶಾಸನಗಳಲ್ಲಿ ಇವರ ಕುರಿತಾದ ಉಲ್ಲೇಖಗಳಿವೆ.

ಆದಿಜಗದ್ಗುರು ತಮ್ಮ ಬದುಕಿನುದ್ದಕ್ಕೂ ದಾರ್ಶನಿಕರಾಗಿ, ಸಂತರಾಗಿ ಲೋಕಸಂಗ್ರಹ ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು. 10ನೆಯ ಶತಮಾನದ ದಕ್ಷಿಣ ಭಾರತದಲ್ಲಿ ರಾಜಕೀಯ ಪ್ರಕ್ಷುಬ್ಧತೆಯ ಕಾಲ, ತಮಿಳುನಾಡಿನ ರಾಜರಾಜ ಚೋಳನಿಗೂ ಕರ್ನಾಟಕದ ಗಂಗರ ದೊರೆ ನಾಲ್ಕನೆಯ ರಾಚಮಲ್ಲನಿಗೂ ತಲಕಾಡಿನ ನಡುವೆ ಯುದ್ಧವಾಗಿ ಬಿಡುವಂತಿದ್ದ ವಿಸ್ಫೋಟಕ ಪರಿಸ್ಥಿತಿಯನ್ನು ತಿಳಿಗೊಳಿಸಿ ಶಾಂತಿಯನ್ನು ನೆಲೆಗೊಳಿಸಿದರು. ಇಬ್ಬರು ರಾಜರೂ ವಿನೀತರಾಗಿ ಮಾಡಿಕೊಂಡ ಕೋರಿಕೆಯ ಮೇರೆಗೆ ಸುತ್ತೂರಿನಲ್ಲಿ ಶ್ರೀಮಠವನ್ನು ಸ್ಥಾಪಿಸಿದರು. ಹೀಗೆ ಈ ಪೀಠವು ಶಾಂತಿ, ಸಹಿಷ್ಣುತೆ, ನೆಮ್ಮದಿಗಳ ಕೇಂದ್ರವಾಗಿ ಒಡಮೂಡಿದೆ. ಆದಿಜಗದ್ಗುರುಗಳು ಜೀವನ ಮತ್ತು ಧರ್ಮಗಳ ನಡುವೆ ಸಮನ್ವಯವನ್ನು ತಂದ ಮಹಾನ್ ಮಾನವತಾವಾದಿಗಳು. ಕಪಿಲಾ ನದಿತೀರದಲ್ಲಿ ಸ್ಥಾಪಿಸಿದ ಧರ್ಮಪೀಠದ ಮುಖಾಂತರ ಅವರು ಸಹಸ್ರಾರು ಜನ ಮುಮುಕ್ಷುಗಳ ಜೀವನವನ್ನು ಪ್ರಭಾವಿತಗೊಳಿಸಿದರು. ಆನಂತರ ಬಂದ ಗಂಗರು, ವಿಜಯನಗರದ ದೊರೆಗಳು, ಮೈಸೂರಿನ ಅರಸರು ಶ್ರೀಮಠಕ್ಕೆ ಭಕ್ತಿಭಾವಗಳಿಂದ ನಡೆದುಕೊಂಡರು. ಶ್ರೀಮಠದ ಆಧ್ಯಾತ್ಮಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕಿದ ಶ್ರೀಗಳವರು 11ನೆಯ ಶತಮಾನದ ಆದಿಭಾಗದಲ್ಲಿ ಕರ್ನಾಟಕದ ಧಾರ್ಮಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ತಮ್ಮ ವಿಶಿಷ್ಟ ಗುರುತನ್ನು ದಾಖಲಿಸಿದ್ದರು.

ಕ್ರಿ.ಶ. 960 ರಿಂದ 1042 ರವರೆಗೆ ಜೀವಿಸಿದ್ದ ಈ ಮಹಾನ್ ಶಿವಯೋಗಿಗಳ ಸಂಸ್ಮರಣೆಗಾಗಿ ಭಾರತ ಸರ್ಕಾರದ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯದ ಅಂಚೆ ಇಲಾಖೆಯು ಬೆಂಗಳೂರಿನಲ್ಲಿ ಡಿಸೆಂಬರ್ 21 ರಂದು 5 ರೂ. ಮುಖಬೆಲೆಯ ಅಂಚೆಚೀಟಿಯನ್ನು ಬಿಡುಗಡೆ ಮಾಡಿತು.

'ಹತ್ತನೇ ಶತಮಾನದಲ್ಲಿ ಗಂಗರು ಮತ್ತು ಚೋಳರ ನಡುವಿನ ರಾಜಕೀಯ ಸಂಘರ್ಷವನ್ನು ತಪ್ಪಿಸಿದ ಶಿವರಾತ್ರಿಯೋಗೀಶ್ವರ ಸ್ವಾಮೀಜಿಗಳ ತತ್ವವನ್ನು ಪ್ರಸಕ್ತ ಎದುರಾಗುವ ರಾಜಕೀಯ ಬಿಕ್ಕಟ್ಟಿನ ಪರಿಹಾರದ ಮಂತ್ರವಾಗಿ ಅಳವಡಿಸಿಕೊಳ್ಳುವ ಅಗತ್ಯವಿದೆ' ಎಂದು ಕೇಂದ್ರ ಸಚಿವ ಎಂ. ವೀರಪ್ಪ ಮೊಯಿಲಿ ಅಭಿಪ್ರಾಯಪಟ್ಟರು.

ಬೆಂಗಳೂರಿನ ಜೆ.ಎಸ್.ಎಸ್. ಶಾಲೆಯಲ್ಲಿ ಆದಿಜಗದ್ಗುರು ಶಿವರಾತ್ರೀಶ್ವರ ಶಿವಯೋಗಿ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ ಹಾಗೂ ಘನಲಿಂಗ ಶಿವಯೋಗಿ ಸಭಾಭವನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ದೇಶದಲ್ಲಿರುವ ಸದೃಢ ಆಧ್ಯಾತ್ಮ ಚಿಂತನೆಯಿಂದಲೇ ಜಾಗತಿಕವಾಗಿ ಮುಂದುವರಿದ ರಾಷ್ಟ್ರಗಳು ಆಕರ್ಷಿತವಾಗಿವೆ. ಇತಿಹಾಸ ಮತ್ತು ಪುರಾಣದಲ್ಲಿರುವ ಮಹೋನ್ನತ ವಿಚಾರಗಳನ್ನು ಅರಿತುಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕು' ಎಂದು ಕರೆ ನೀಡಿದರು.

'ಪರಂಪರೆ ಮತ್ತು ಆಧುನಿಕತೆಯ ನಡುವೆ ಸಮನ್ವಯತೆ ಸಾಧಿಸಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ತನ್ನದೇ ಪಾತ್ರ ವಹಿಸುತ್ತಿರುವುದು ಶ್ಲಾಘನೀಯ' ಎಂದರು.

ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಅವರು 'ಕೇವಲ ವೀರಶೈವ ಮಠವಲ್ಲದೇ ಎಲ್ಲ ಜನಾಂಗದವರ ಹಿತರಕ್ಷಣೆಗೆ ದುಡಿಯುತ್ತಿರುವ ಸುತ್ತೂರು ಮಠ, ಮಠ ಪರಂಪರೆಯಲ್ಲೇ ವಿಶೇಷ ಸ್ಥಾನ ಪಡೆದಿದೆ. ಅಮೆರಿಕ, ಮಾರಿಷಸ್ ಸೇರಿದಂತೆ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸರ್ಕಾರ ಮಾಡಬೇಕಾದ ಶಿಕ್ಷಣ ಕ್ರಾಂತಿಯನ್ನು ಮಠ ವಹಿಸಿಕೊಂಡಿರುವುದಕ್ಕೆ ಸಂತಸವೆನಿಸುತ್ತದೆ' ಎಂದು ಹರ್ಷ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಎಂ.ವಿ. ರಾಜಶೇಖರನ್, ಅಂಚೆ ಸೇವಾ ಮಂಡಳಿ ಸದಸ್ಯೆ ಯಶೋಧರಾ ಮನೆನ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ ಇತರರು ಉಪಸ್ಥಿತರಿದ್ದರು.

# ಸಮತೋಲನ ಪೌಷ್ಠಿಕ ಆಹಾರ ಆರೋಗ್ಯಕರ ಬದುಕಿಗೆ ಅತ್ಯವಶ್ಯಕ

"ಸಮತೋಲನ ಆಹಾರ ಸೇವಿಸಿದಾಗ ಮಾತ್ರ ನಮ್ಮ ದೇಹಕ್ಕೆ ಬೇಕಾದ ಜೀವಸತ್ವಗಳು ದೊರೆತು ರೋಗರಹಿತ ಶರೀರ ನಮ್ಮದಾಗುತ್ತದೆ. ಆಹಾರ ಸೇವಿಸುವುದು ಕೇವಲ ಪ್ರಮಾಣವಾಗಿರದೇ ಪೌಷ್ಠಿಕಾಂಶದಿಂದ ಕೂಡಿರಬೇಕು. ದೇಹಾರೋಗ್ಯಕ್ಕೆ ಅಲ್ಲದೇ ಅದರ ಬೆಳವಣಿಗೆಗೆ ವಿಟಾಮಿನ್ಸ್ ಅತ್ಯವಶ್ಯಕ. ಹುಟ್ಟಿದ ಮಗುವಿನಿಂದ ಹಿಡಿದು ವೃದ್ಧರವರೆಗೂ ಇದರ ಅರಿವು ಅಗತ್ಯ' ಎಂದು ಡಾ. ಸಾಧನ ಭಾಗವತ್ ಅವರು ತಿಳಿಸಿದರು. ಅಂತರ ರಾಷ್ಟ್ರೀಯ ಎನ್.ಜಿ.ಒ. Global alliance for improved Nutrition ನಲ್ಲಿ ಸೇವೆ ಸಲ್ಲಿಸುತ್ತಿರುವ ಶಿವಮೊಗ್ಗ ಜಿಲ್ಲೆಯ ಸಾಗರದ ಡಾ. ಸಾಧನ ಭಾಗವತ್ ಅವರು ಡಿಸೆಂಬರ್ 19ರಂದು ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸಭೆಯಲ್ಲಿ ಭಾಗವಹಿಸಿ ಪೌಷ್ಠಿಕಾಂಶವನ್ನೊಳಗೊಂಡ ಆಹಾರದ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳ ಆಹಾರ ಸೇವನೆಯೇ ಬದಲಾಗಿದ್ದು, ಪೌಷ್ಠಿಕಾಂಶದ ಕೊರತೆಯಿಂದಾಗಿ ಅನಗತ್ಯವಾದ ಔಷಧಿಗಳನ್ನು ಸೇವಿಸುತ್ತಿದ್ದಾರೆ. ಅಲ್ಲದೇ ಮಕ್ಕಳಲ್ಲಿ ಇದರ ಕೊರತೆಯಿಂದಾಗಿ ಅಂಗವಿಕಲತೆ ಉಂಟಾಗುವ ಸಾಧ್ಯತೆ ಇದೆ. ಪ್ರಕೃತಿದತ್ತವಾದ ಉತ್ತಮ ಆಹಾರ ಸೇವನೆ ರೋಗ ಮುಕ್ತ ಬದುಕಿಗೆ ಪೂರಕ ಎಂಬುದಾಗಿ ತಿಳಿಸಿದ ಸಾಧನ ಅವರು ಮಕ್ಕಳು, ಮಹಿಳೆಯರು ಹಾಗೂ ಗರ್ಭಿಣಿ ಸ್ತ್ರೀಯರು ಸೇವಿಸಬೇಕಾದ ಆಹಾರ ಕ್ರಮಗಳ ಬಗ್ಗೆ ವಿವರಿಸಿದರು. ಎ.ಬಿ.ಸಿ.ಡಿ. ವಿಟಾಮಿನ್, ಪ್ರೋಟೀನ್, ಕೊಬ್ಬು, ಖನಿಜಾಂಶ, ಕಾರ್ಬೋಹೈಡ್ರೇಟ್, ಕಬ್ಬಿಣದ ಅಂಶಗಳುಳ್ಳ ಸಸ್ಯಾಹಾರಿ, ಮಾಂಸಾಹಾರಿ ಸಮತೋಲನ ಆಹಾರದ ಬಗ್ಗೆ ತಿಳುವಳಿಕೆ ನೀಡಿದರು. ಸದಸ್ಯೆಯರು ಕೇಳಿದ ಪ್ರಶ್ನೆಗಳಿಗೆ ಹೆಚ್ಚಿನ ಮಾಹಿತಿ ನೀಡಿದರು.



ಸಭೆಯ ಪ್ರಾರಂಭದಲ್ಲಿ ಅಧ್ಯಕ್ಷೆ ಸ್ವರ್ಣಲತಾ ಮೃತ್ಯುಂಜಯ ಅವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಸುಗುಣಾ ನಾಗೇಶ್ ಅವರು ವಂದಿಸಿ ನೆನಪಿನ ಕಾಣಿಕೆ ನೀಡಿದರು. ಸಭೆಯ ಮುಕ್ತಾಯದ ನಂತರ ಸದಸ್ಯೆಯರು ನ್ಯೂ ರಾಜೇಂದ್ರನಗರದಲ್ಲಿರುವ ಮಹಿಳಾ ಆಶ್ರಮದಲ್ಲಿರುವ ವೃದ್ಧೆಯರಿಗೆ ಕಂಬಳಿ ಮತ್ತು ಆಹಾರ ಪದಾರ್ಥಗಳನ್ನು ವಿತರಿಸಿದರು.

❑ ಸ್ವರ್ಣಲತಾ ಮೃತ್ಯುಂಜಯ

# ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್‌ಗೆ ಕೆ.ಟಿ. ಗಣೇಶ್ ಪ್ರಾಂಶುಪಾಲರಾಗಿ ನೇಮಕಾತಿ



1981ರ ಡಿಸೆಂಬರ್ ತಿಂಗಳಲ್ಲಿ ಸಣ್ಣ ಹುದ್ದೆಯೊಂದರಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸಲು ಬಂದ ಹುಡುಗ ಆ ಸಂಸ್ಥೆಯ ಪ್ರಾಂಶುಪಾಲರಾಗುವ ಕನಸನ್ನು ಸಹ ಕಂಡಿರಲಾರ. 1981ರಲ್ಲಿ ಕಾರಕೂನನಾಗಿ ಸೇರಿದ ಹುಡುಗ ಕೇವಲ 8 ತಿಂಗಳಲ್ಲೇ ಆಗಿನ ಪ್ರಾಂಶುಪಾಲರಾಗಿದ್ದ ಶ್ರೀ ಹಲಗೇಕರ್ ಅವರ ನೆಚ್ಚಿನ ಸಹಾಯಕನಾದ. ಆಡಳಿತ ವರ್ಗದವರಿಗೂ ಆ ಹುಡುಗನ ಮೇಲೆ ಎಲ್ಲಿಲ್ಲದ ಒಲವು. ಚುರುಕು, ನೇರ, ದಕ್ಷ, ಪ್ರಾಮಾಣಿಕ, ಆಡಳಿತ ವರ್ಗ ಕನ್ನಡದ ಈ ಹುಡುಗನನ್ನು ಸಂಸ್ಥೆಯಲ್ಲಿ ಉಳಿಸಿಕೊಳ್ಳುವ ಯೋಚನೆ ಮಾಡುತ್ತಿದ್ದಾಗಲೇ, ಶ್ರೀ ಹಲಗೇಕರ್ ಅವರ ಸಲಹೆಯೋ ಎಂಬಂತೆ, ಈ ಹುಡುಗ ಶಾಲೆ ಬಿಟ್ಟು ಕಾಶ್ಮೀರಕ್ಕೆ ಹೋಗಿ ಯೋಗಾಭ್ಯಾಸದ ತರಬೇತಿ ಪಡೆದ. 1983ರಲ್ಲಿ ದೆಹಲಿಗೆ ಮರಳಿ, ಯೋಗ ಗುರುವಾಗಿ ಸೇರಿದ್ದ ಕೊಡುಗು ಜಿಲ್ಲೆಯ ವಿರಾಜಪೇಟೆಯ ಶ್ರೀ ಕೆ.ಟಿ. ಗಣೇಶ್ ಅವರೇ ಆ ಹುಡುಗ.

1983 ರಿಂದ 1996ರ ತನಕ ಯೋಗ–ಗುರುವಾಗಿ (ಟಿಜಿಟಿ), ಎಲ್ಲಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಮಕ್ಕಳಿಗೆ ಅಚ್ಚುಮೆಚ್ಚಿನ ಗುರು, ಶಿಸ್ತಿನ ವಿಷಯದಲ್ಲಿ ಗಣೇಶ್ ಬಹಳ ಕಟ್ಟು–ನಿಟ್ಟು. ಈ ಮಧ್ಯೆ, ಇತಿಹಾಸ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

1996ರಲ್ಲಿ ಇತಿಹಾಸ ಶಾಸ್ತ್ರದ ಪೋಸ್ಟ್ ಗ್ರ್ಯಾಜುಯೇಟ್ ಹುದ್ದೆ ತೆರವಾದಾಗ, ಸಹಜವಾಗಿ ಇದು ಕೆ.ಟಿ. ಗಣೇಶ್ ಅವರ ತೆಕ್ಕೆಗೆ ಬಿತ್ತು. ಅವಿರತ ದುಡಿಮೆ, ಮನವಿಟ್ಟು ಕೆಲಸ, ಅದು ಪಾಠವಾದರೂ ಸರಿ, ಶಾಲೆಯಲ್ಲಿ ಎನ್.ಸಿ.ಸಿ.ಯನ್ನು ಪರಿಚಯಿಸಿ ನೇತೃತ್ವ ವಹಿಸುವುದಾದರೂ ಸರಿ, ಗಣೇಶ್ ಹಿಂದುಳಿಯುವುದಿಲ್ಲ. ಒಂದು ವಿಷಯ ಮನಸ್ಸಿಗೆ ಬಂದರೆ, ಅದೇ ಹತ್ತಿ, ಅದೇ ನೂಲು; ಕಪಟವಿಲ್ಲದ ನೇರ ಮಾತು. ಈ ಎರಡು ಗುಣಗಳು ಬೆರೆತಾಗ, ಕೆಲವರಿಗೆ ಅದು ಹಿಡಿಸುವುದಿಲ್ಲ. ಗಣೇಶ್ ಅವರ ಮನಸ್ಸನ್ನು ಅರ್ಥಮಾಡಿಕೊಂಡವರು ಅವರ ಅಭಿಮಾನಿಗಳಾಗುತ್ತಾರೆ. ಈ ಕಾರಣದಿಂದಾಗಿಯೇ, ಕನ್ನಡ ಶಾಲೆಗೆ ಬರುವ ಹಳೆಯ ವಿದ್ಯಾರ್ಥಿಗಳೆಲ್ಲಾ, ಮೊದಲು ಹುಡುಕುವುದು ಶ್ರೀ ಕೆ.ಟಿ. ಗಣೇಶ್ ಅವರನ್ನು. ಹೊರಗೆಷ್ಟು ಗಂಭೀರತೆ ತೋರಿಸಿದರೂ ಅವರ ಪಾಠ ಕೇಳುವುದೆಂದರೆ ವಿದ್ಯಾರ್ಥಿಗಳಿಗೆ ಆನಂದ. ಹಾಗಾಗಿ ಅದೆಷ್ಟೋ ವರ್ಷಗಳಲ್ಲಿ ನೂರಕ್ಕೆ ನೂರರ ಫಲಿತಾಂಶ ಬಂದಿದೆ.

ಉಪ ಪ್ರಾಂಶುಪಾಲರ ಹುದ್ದೆಗಾಗಿ ಭಡ್ತಿಯ ವಿಷಯ ಬಂದಾಗ, ಆಡಳಿತ ವರ್ಗದ ಮೊದಲ ಆಯ್ಕೆ ಶ್ರೀ ಕೆ.ಟಿ. ಗಣೇಶ್ ಆಗಿದ್ದರು. ಆದರೆ, ಕನ್ನಡ ಶಾಲೆಯಲ್ಲಿ ಉಪ ಪ್ರಾಂಶುಪಾಲರ ಹುದ್ದೆಯನ್ನು ಕನ್ನಡಿಗರಿಗಾಗಿ ಮೀಸಲಾಗಿಡಬಾರದೆಂದು ಹಿರಿಯ ಅಧ್ಯಾಪಕಿ ಒಬ್ಬರು ಕೋರ್ಟಿನ ಮೆಟ್ಟಿಲೇರಿದ್ದರಿಂದ, ಅವರು 2005ರಿಂದ ಹಂಗಾಮಿ ಉಪ ಪ್ರಾಂಶುಪಾಲರಾಗಿಯೇ ಮುಂದುವರಿಯಬೇಕಾಯಿತು.

ಕಳೆದ ಎರಡೂವರೆ ವರ್ಷಗಳಿಂದ ಪ್ರಿನ್ಸಿಪಾಲ್ ಇನ್‌ಚಾರ್ಜ್ ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಕೆ.ಟಿ. ಗಣೇಶ್ ಅವರು ಡಿಸೆಂಬರ್ 24, 2012ರಂದು ನೂತನ ಪ್ರಾಂಶುಪಾಲರಾಗಿ ನೇಮಿಸಲ್ಪಟ್ಟಿದ್ದಾರೆ. ಶಾಲೆಯಲ್ಲಿ ಒಮ್ಮತದ ಹಾಗೂ ಸೌಹಾರ್ದ ವಾತಾವರಣ ಏರ್ಪಟ್ಟಿದೆ. 7ಮಂದಿ ಹೊಸ ಅಧ್ಯಾಪಕರುಗಳು ನೇಮಿಸಲ್ಪಟ್ಟಿದ್ದಾರೆ. ಫಲಿತಾಂಶದತ್ತ ಹೆಚ್ಚಿನ ಗಮನ ಹರಿಸಲಾಗಿದೆ. ರಾಜ್ಯ ಮಟ್ಟದ ವಿಜ್ಞಾನ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. 'ಅಭಿವ್ಯಕ್ತ' ಎಂಬ ಪತ್ರಿಕೆಯಲ್ಲಿ ಮಕ್ಕಳ ಬರವಣಿಗೆಗೊಂದು ವೇದಿಕೆ ಲಭಿಸಿದೆ. ಶಾಲೆಯ ಒಳಗೂ ಹೊರಗೂ ಸಿಸಿಟಿವಿ ಅಳವಡಿಸಲಾಗಿದೆ. ಹೆಚ್ಚುವರಿ ಶಿಕ್ಷಕರನ್ನು ನೇಮಿಸಿ, ಸರ್ವತೋಮುಖ ಅಭಿವೃದ್ಧಿ ಪ್ರಾರಂಭವಾಗಿದೆ. ವಿಶೇಷವಾಗಿ ಮಕ್ಕಳಲ್ಲಿರುವ ಚಿತ್ರಕಲೆ ಹಾಗೂ ಒಳಮನಸ್ಸನ್ನು ತೆರೆದಿಡುವ ವಿಶೇಷ ಪ್ರಯತ್ನವನ್ನು ಈಗಿನ ಡ್ರಾಯಿಂಗ್ ಟೀಚರ್ ಜ್ಯೋತಿ ಪೊದ್ದಾರ್ ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಇಕೋ ಕ್ಲಬ್, ಎನ್‌ಸಿಸಿ, ಹಲವಾರು ಸ್ಪರ್ಧೆಗಳು, ಕ್ರೀಡಾ ಚಟುವಟಿಕೆಗಳು, ಕೌನ್ಸೆಲಿಂಗ್–ಹೀಗೆ ಹಲವು ಯೋಜನೆಗಳು ಮತ್ತು ಕಾರ್ಯಕ್ರಮಗಳು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ನಡೆಸುವ ಕನ್ನಡ ಶಾಲೆಯ ಏಳಿಗೆಯ ಮೈಲುಗಲ್ಲುಗಳಾಗಿವೆ.

ಕಳೆದ ಎರಡೂವರೆ ವರ್ಷಗಳಿಂದ ಇನ್‌ಚಾರ್ಜ್ ಪ್ರಿನ್ಸಿಪಾಲ್ ಆಗಿ ಸಮರ್ಥವಾಗಿ ಕೆಲಸ ನಿರ್ವಹಿಸಿದ್ದಾರೆ. ಶಿಕ್ಷಣ ಸಂಸ್ಥೆಯ ಸುವರ್ಣ ಜಯಂತಿ ಮಹೋತ್ಸವದ ಸಫಲತೆಗಾಗಿ ಬಹಳಷ್ಟು ದುಡಿದಿದ್ದಾರೆ. ಮುಂದಿನ ಸುಮಾರು ಮೂರು ವರ್ಷಗಳ ಕಾಲ ಇವರ ಅನುಭವದ ಲಾಭ ದೆಹಲಿ ಕನ್ನಡ ಶಾಲೆಗೆ ಸಿಗಲಿದೆ. ಸವಾಲುಗಳನ್ನು ಎದುರಿಸಿ, ಸಂಸ್ಥೆಯ ಏಳಿಗೆಗಾಗಿ ದುಡಿಯುವ ಒಬ್ಬ ಪ್ರಾಮಾಣಿಕ ವ್ಯಕ್ತಿಯ ಒಮ್ಮತದ ನೇಮಕಾತಿ ಸಹಜಾನಂದಕರ.

ಪ್ರಾಂಶುಪಾಲ ಕೆ.ಟಿ. ಗಣೇಶ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

❑ ಸರವು ಕೃಷ್ಣ ಭಟ್

# ದೆಹಲಿ ಕನ್ನಡ ಶಾಲೆಯ ವಿಶಿಷ್ಟ ವಾರ್ಷಿಕೋತ್ಸವ

"ಈ ವರ್ಷದ ವಾರ್ಷಿಕೋತ್ಸವದಲ್ಲಿ ನವೀನತೆ ಇತ್ತು, ವಿಶಿಷ್ಟವಾಗಿತ್ತು; ಚೆನ್ನಾಗಿತ್ತು" ಇದು ಮಕ್ಕಳ ಹೆತ್ತವರ ಅನಿಸಿಕೆ. ಚಟುವಟಿಕೆಗಳ ಸರಮಾಲೆಯೊಂದಿಗೇ ವಾರ್ಷಿಕೋತ್ಸವವೂ ನಡೆಯಿತು. ಇದೇ ಸಂದರ್ಭದಲ್ಲಿ, ಕನ್ನಡ ಶಾಲೆಯ ವರ್ಣರಂಜಿತ ಪತ್ರಿಕೆ 'ಅಭಿವ್ಯಕ್ತ' ಬಿಡುಗಡೆಗೊಂಡಿದೆ.

ವಾರ್ಷಿಕೋತ್ಸವದ ಸಂದರ್ಭದಲ್ಲಿ ರಾಜ್ಯ ಮಟ್ಟದ ಸೈನ್ಸ್ ಎಕ್ಸಿಬಿಶನ್‌ನಲ್ಲಿ ಬಹುಮಾನ ಪಡೆದ ಮಾಡೆಲ್‌ಗಳ ಪ್ರದರ್ಶನವೂ ಇತ್ತು. ಗೆದ್ದವರಿಗೆ ನಗದು ಬಹುಮಾನಗಳನ್ನು ನೀಡಲಾಯಿತು.

ಮ್ಯಾನೇಜರ್ ಹಾಗೂ ಉಪಾಧ್ಯಕ್ಷ ಶ್ರೀ ಬಸವರಾಜ್ ಎಸ್. ಮೇಟಿ ಸ್ವಾಗತ ಭಾಷಣ ಮಾಡಿದರು. ಗೌರವ ಕಾರ್ಯದರ್ಶಿ ಶ್ರೀ ಆಂಜನಿ ಗೌಡ ಹಾಗೂ ಖಜಾಂಚಿ ಶ್ರೀ ಸಿ.ಆರ್. ಶ್ರೀನಿವಾಸ ಅತಿಥಿಗಳಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಶಾಲೆಯ ಪ್ರಾಂಶುಪಾಲ ಶ್ರೀ ಕೆ.ಟಿ. ಗಣೇಶ್ ಶಾಲೆಯ ಅಭಿವೃದ್ಧಿ ಕುರಿತಾದ ವರದಿಯನ್ನೊಪ್ಪಿಸಿದರು.

ಮಕ್ಕಳ ಮನಸ್ಸನ್ನು ಅಭಿವ್ಯಕ್ತಗೊಳಿಸುವ 'ಅಭಿವ್ಯಕ್ತ' ಮಾಸಿಕ ಪತ್ರಿಕೆಯನ್ನು ಔಟ್‌ಲುಕ್ ಪತ್ರಿಕೆಯ ಸಂಪಾದಕ ಶ್ರೀ ಕೃಷ್ಣ ಪ್ರಸಾದ್ ಬಿಡುಗಡೆಗೊಳಿಸಿದರು. ಸಾಧನೆಗೆ ಸ್ವ–ಪ್ರಯತ್ನವೇ ಮುಖ್ಯವೆಂದು ವಿವರಿಸಿದ ಕೃಷ್ಣ ಪ್ರಸಾದ್ ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡರು.

ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಶಾಲೆಯ ಮಕ್ಕಳ ಅಭಿವೃದ್ಧಿಗಾಗಿ ವಿದ್ಯಾರ್ಥಿವೇತನ ಹಾಗೂ ಸಹಾಯ ಧನ ನೀಡಿದೆ. ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಕೊಡಮಾಡುವ ಪ್ರೋತ್ಸಾಹಕ ನಿಧಿಯನ್ನು ಸಹ ವಿತರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ಜಂಟಿ ಕಾರ್ಯದರ್ಶಿ ಶ್ರೀ ಡಿ.ವಿ. ಪ್ರಸಾದ್, ಐ.ಎ.ಎಸ್., ಅವರು ಶುಭ ಹಾರೈಸಿ ಮಕ್ಕಳಿಗೆ ಬಹುಮಾನಗಳನ್ನು ವಿತರಿಸಿದರು.



'ಅಭಿವ್ಯಕ್ತ' ಮಾಸಿಕ ಪತ್ರಿಕೆಯನ್ನು ಬಿಡುಗಡೆ ಮಾಡುತ್ತಿರುವ ಔಟ್‌ಲುಕ್ ಪತ್ರಿಕೆಯ ಸಂಪಾದಕ ಶ್ರೀ ಕೃಷ್ಣ ಪ್ರಸಾದ್

ಅಧ್ಯಕ್ಷತೆ ವಹಿಸಿದ್ದ ಶ್ರೀ ಸರವು ಕೃಷ್ಣ ಭಟ್ ಶಾಲೆಯ ಅಭಿವೃದ್ಧಿಯಲ್ಲಿ ಹೆತ್ತವರ ಹೆಚ್ಚಿನ ಪಾಲ್ಗೊಳ್ಳುವಿಕೆಗಾಗಿ ವಿನಂತಿಸಿದರು. ಶಾಲಾ ಮಕ್ಕಳೇ ಸಂಯೋಜಿಸಿದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂತು.

❑ ಆಂಜನಿ ಗೌಡ

# ತುಳುಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಲು ಸಂಸದರ ವಿಶೇಷ ಸಭೆ



ತುಳು ಭಾಷೆಯನ್ನು ಸಂವಿಧಾನದ ಎಂಟನೆಯ ಪರಿಚ್ಛೇದದಲ್ಲಿ ಸೇರಿಸುವ ಕುರಿತು ರಾಜಧಾನಿ ದೆಹಲಿಯಲ್ಲಿ ಮುಂದಿನ ಫೆಬ್ರವರಿ ತಿಂಗಳ 24ರಂದು ಆಯೋಜಿಸಲು ಉದ್ದೇಶಿಸಲಾದ ಜಾಗತಿಕ ಮಟ್ಟದ ದೆಹಲಿ ತುಳುಸಿರಿ–2013ರ ಪೂರ್ವಭಾವಿಯಾಗಿ ರಾಜ್ಯಸಭಾ ಸದಸ್ಯ ಶ್ರೀ ಆಸ್ಕರ್ ಫೆರ್ನಾಂಡೀಸ್ ನೇತೃತ್ವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರ ಹಾಗೂ ಸಂಸದರೊಂದಿಗೆ ವಿಶೇಷ ಬೆಳಗ್ಗಿನ ಉಪಾಹಾರ ಮತ್ತು ಸಭೆ ನಡೆಯಿತು. ಈ ಮೂಲಕ ಮುಂದಿನ ಸಮಾವೇಶಕ್ಕೆ ವಿಶೇಷ ಚಾಲನೆ ದೊರಕಿದಂತಾಗಿದೆ. ಈ ಸಂದರ್ಭದಲ್ಲಿ ಸಂಸದರನ್ನು ಉದ್ದೇಶಿಸಿ ಮಾತಾಡಿದ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು, ತುಳು ಭಾಷೆ ಮತ್ತು ಸಂಸ್ಕೃತಿ ಅತಿ ವಿಶಿಷ್ಟ ಮತ್ತು ಅನನ್ಯ, ತುಳುಜನರ ಆಚರಣೆಗಳು ವಿಶಿಷ್ಟವಾಗಿದ್ದು ಅವುಗಳು ವೈಜ್ಞಾನಿಕ ತಳಹದಿಯ ಮೇಲೆ ರೂಪುಗೊಂಡಿವೆ. ಅದೇರೀತಿ ತುಳುವಿನ ಭಾಷಾ ಸಂಪತ್ತು ಅತ್ಯಂತ ಹೇರಳವಾಗಿದ್ದು ಅದನ್ನು ಸೂಕ್ತ ರೀತಿಯಲ್ಲಿ ಉಳಿಸಿ ಬೆಳೆಸಬೇಕಾದ ಅಗತ್ಯವಿದೆ, ಕಾರಣ ತುಳುವಿಗೆ ಸಂವಿಧಾನದ ಮಾನ್ಯತೆ ಅಗತ್ಯವಾಗಿದ್ದು ಅದು ಸಾಧ್ಯವಾಗಲು ಎಲ್ಲ ಸಂಸದರೂ ಸಹಕರಿಸಬೇಕಾಗಿದೆ. ಎಂದು ಕೋರಿಕೊಂಡರು.

ತುಳುವನ್ನು ಎಂಟನೇ ಪರಿಚ್ಛೇದದಲ್ಲಿ ಸೇರಿಸುವ ಅಗತ್ಯದ ಕುರಿತು ವಿವರ ನೀಡಿದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಭಾರತದ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಆರಂಭದಲ್ಲಿ 14 ಭಾಷೆಗಳಷ್ಟೇ ಇದ್ದುವು. ಯಾವುದೋ ರಾಜ್ಯದ ಅಧಿಕೃತ ಭಾಷೆಯಾಗದ ಹೊರತು 8ನೇ ಪರಿಚ್ಛೇದದಲ್ಲಿ ಸೇರ್ಪಡೆಗೊಳಿಸುವಂತಿರಲಿಲ್ಲ. ಆದರೆ 2003 ರಲ್ಲಿ ಸಂವಿಧಾನದಲ್ಲಿ ತಿದ್ದುಪಡಿ ತಂದು ಡೋಗ್ರಿ, ಮೈಥಿಲಿ, ಸಂತಾಲಿ ಮತ್ತು ಬೋಡೋ ಭಾಷೆಗಳನ್ನು ಸೇರಿಸಲಾಯಿತು. ತುಳು ಈ ಭಾಷೆಗಳಷ್ಟೇ ಶ್ರೀಮಂತವಾದುದು, ಮತ್ತು 50 ಲಕ್ಷಕ್ಕೂ ಹೆಚ್ಚು ಜನ ಅದನ್ನು ಆಡುವುದರಿಂದ ಅರ್ಹತೆಯ ದೃಷ್ಟಿಯಿಂದ ಅದರಲ್ಲಿ ಕೊರತೆಯೇನೂ ಇಲ್ಲ. ಜನಪ್ರತಿನಿಧಿಗಳು ಒತ್ತಡ ಹಾಕಿ ಈ ಕೆಲಸ ಆಗುವಂತೆ ಮಾಡಿ ಭಾಷಾ ಸಂರಕ್ಷಣೆಯ ವಿಷಯದಲ್ಲಿ ಇತರರಿಗೆ ಮೇಲ್ಪಂಕ್ತಿಯಾಗಬೇಕು ಎಂದರು.

ಪ್ರಾಸ್ತಾವಿಕ ಹಾಗೂ ಸ್ವಾಗತ ಭಾಷಣ ಮಾಡಿದ ತುಳುಸಿರಿ ಸಮಾವೇಶದ ಸಂಚಾಲಕ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಾರ್ಯಕ್ರಮದ ರೂಪುರೇಷೆಯನ್ನು ವಿವರಿಸಿ ಎಲ್ಲಾ ಕನ್ನಡದ ಜನಪ್ರತಿನಿಧಿಗಳು ಈ ಬಾರಿ ತುಳು ಭಾಷೆಯನ್ನು ಎಂಟನೇ ಪರಿಚ್ಛೇದದಲ್ಲಿ ಸೇರಿಸುವ ಬಗ್ಗೆ ಸಂಸತ್ತಿನಲ್ಲಿ ಒತ್ತಡ ಹೇರುವಂತೆ ಕರೆ ಇತ್ತರು.

ಸಭೆಯಲ್ಲಿ ಕೇಂದ್ರ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಎಂ. ವೀರಪ್ಪ ಮೊಯಿಲಿ ಸಂಸದರಾದ ಶ್ರೀ ರಮೇಶ ಜಿಗಜಿಣಗಿ, ಶ್ರೀ ಪಿ.ಸಿ. ಗದ್ದಿಗೌಡರ್, ಶ್ರೀ ಬಸವರಾಜ ಸೇಡಂ, ಶ್ರೀ ಜಯಪ್ರಕಾಶ್ ಹೆಗಡೆ, ಶ್ರೀ ಎಚ್. ವಿಶ್ವನಾಥ್, ಶ್ರೀ ಆಸ್ಕರ್ ಫೆರ್ನಾಂಡೀಸ್, ಶ್ರೀ ಜೆ. ರಾಮಕೃಷ್ಣ, ಶ್ರೀ ಶಿವರಾಮೇ ಗೌಡ, ಶ್ರೀ ಅನಿಲ್ ಲಾಡ್, ಶ್ರೀ ಪಿ.ಸಿ. ಮೋಹನ್, ಶ್ರೀ ಶಿವಕುಮಾರ್ ಉದಾಸಿ, ಕರ್ನಾಟಕ ಸರ್ಕಾರದ ವಿಶೇಷ ಸಮನ್ವಯಾಧಿಕಾರಿ ಶ್ರೀ ಬೈಕೆರೆ ನಾಗೇಶ್, ಮಾಜಿ ಸಂಸದ ಶ್ರೀ ಶಿವಣ್ಣ, ಮಾಜಿ ಸಚಿವ ಶ್ರೀ ಎಚ್.ಎಂ. ರೇವಣ್ಣ, ತುಳುಸಿರಿ ಸಮಾವೇಶ ಸಮಿತಿಯ ಅಧ್ಯಕ್ಷ ಶ್ರೀ ಐ. ರಾಮಮೋಹನ್ ರಾವ್ ಹಾಗೂ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ತುಳುನಾಡಿನ ವಿಶಿಷ್ಟ ಗೋಳಿ ಬಜೆ, ನೀರುಳ್ಳಿ ಬಜೆ, ನೀರ್ ದೋಸೆ, ಕಡ್ಲೆ, ಸಜ್ಜಿಗೆ–ಬಜಿಲ್, ಮತ್ತಿತರ ತಿಂಡಿಗಳಿರುವ ಉಪಾಹಾರ ವ್ಯವಸ್ಥೆಯನ್ನು ಮಾಡಿ ತುಳುಸಂಸ್ಕೃತಿಯ ವಿಶಿಷ್ಟತೆಯನ್ನು ಪ್ರತೀತಗೊಳಿಸಲು ಪ್ರಯತ್ನಿಸಲಾಗಿತ್ತು.

## ಜನಕಪುರಿ ಕನ್ನಡ ಕೂಟದ ಕ್ರೀಡಾ ದಿವಸ

ಜನಕಪುರಿ ಕನ್ನಡ ಕೂಟವು ಡಿಸೆಂಬರ್ 16 ರಂದು ವಾರ್ಷಿಕ ಕ್ರೀಡಾ ದಿವಸವನ್ನು ಜನಕಪುರಿಯ ಫೌಂಟೇನ್ ಪಾರ್ಕ್‌ನಲ್ಲಿ ಏರ್ಪಡಿಸಲಾಗಿತ್ತು. ಮಕ್ಕಳಿಗೆ, ಹೆಂಗಸರಿಗೆ, ಗಂಡಸರಿಗೆ ಅನೇಕ ವೈವಿಧ್ಯಮಯ ಆಟಗಳು ಏರ್ಪಡಿಸಲಾಗಿದ್ದು ಬಂದವರೆಲ್ಲಾ ಉತ್ಸಾಹದಿಂದ ಭಾಗವಹಿಸಿದರು. ಕೂಟದ ಉಪಾಧ್ಯಕ್ಷರಾದ ಶ್ರೀ ಕಾಮತ್, ಜಂಟಿ ಕಾರ್ಯದರ್ಶಿ ಶ್ರೀಮತಿ ಭಾಗ್ಯಶ್ರೀ ಪ್ರಭಾಕರನ್ ಹಾಗೂ ಮೈಸೂರಿನಿಂದ ಬಂದಿದ್ದ ಕಲ್ಪನಾ ಅವರು ಕೂಟದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಲು ಪ್ರಾಯೋಜನೆ ನೀಡಿ ಪ್ರೋತ್ಸಾಹಿಸಿದರು.

❑ **ವೆಂಕಟೇಶ್ ಎಂ.ವಿ.**



ಶ್ರೀ ಮಧ್ವ ಸಂಘ ದೆಹಲಿಯು ಜನವರಿ ತಿಂಗಳ ಅಷ್ಟೋತ್ತರ ಪಾರಾಯಣೆಯನ್ನು 13 ಜನವರಿ 2013ರಂದು ಬೆಳಿಗ್ಗೆ 9.00ರಿಂದ ಹಮ್ಮಿಕೊಂಡಿದೆ. ಸಾಮೂಹಿಕ ಸತ್ಯನಾರಾಯಣ ಪೂಜೆಯು 27 ಜನವರಿ 2013ರ ಭಾನುವಾರದಂದು ನಡೆಯಲಿದೆ. 10 ಫೆಬ್ರವರಿಗೆ ನಡೆಯಲಿರುವ ಶ್ರೀ ಪುರಂದರದಾಸ ಆರಾಧನೆಯ ಪ್ರಯುಕ್ತ ಅವರ ಕೃತಿಯ ಹಾಡುಗಾರಿಕೆ ಸ್ಪರ್ಧೆಯು ಜನವರಿ ಕೊನೆಯ ವಾರ ಹಾಗೂ ಫೆಬ್ರವರಿ ಮೊದಲ ವಾರ ನಡೆಯಲಿದ್ದು ಈ ಬಾರಿಯ ಸ್ಪರ್ಧೆಯಲ್ಲಿ ಮಹಿಳೆಯರೂ ಪಾಲ್ಗೊಳ್ಳಬಹುದಾಗಿದೆ. ಈ ವರ್ಷದ ಮಧ್ವ ನವಮಿಯನ್ನು 19 ಫೆಬ್ರವರಿಯಂದು ಆಚರಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳು ಎ–2/117, ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿರುವ ಶ್ರೀಕೃಷ್ಣ ಮಂದಿರದಲ್ಲಿ ಜರುಗಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಡಾ. ಮಧೂಸೂದನ ರಾವ್ : 98103 57065, ಶ್ರೀ ಪ್ರಾಣೇಶ್ : 98108 26820, ಶ್ರೀ ನಾರಾಯಣ ಕುಲಕರ್ಣಿ : 99718 01407, ಶ್ರೀ ಕೆ.ಆರ್. ರಾಮಮೂರ್ತಿ : 98104 32362, ಶ್ರೀ ನಾರಾಯಣಾಚಾರ: 98104 60497 / 98681 04106. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

# ಸಾಹಿತ್ಯ ಸಂಜೆಯಲ್ಲಿ ಪಟ್ಟಣಶೆಟ್ಟಿ ದಂಪತಿಗಳು



ಕನ್ನಡದ ಖ್ಯಾತ ಕವಿ ಡಾ. ಹೇಮಾ ಪಟ್ಟಣಶೆಟ್ಟಿ ಮತ್ತು ಸಿದ್ದಲಿಂಗ ಪಟ್ಟಣಶೆಟ್ಟಿ ಸಾಹಿತಿ ದಂಪತಿಗಳು ದೆಹಲಿ ಕರ್ನಾಟಕ ಸಂಘ ಡಿಸೆಂಬರ್ 22 ರಂದು ಸೆಮಿನಾರ್ ಹಾಲಿನಲ್ಲಿ ನಡೆಸಿದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ತಮ್ಮ ಬದುಕು, ಸಾಹಿತ್ಯ, ಜೀವನ ಧೋರಣೆಗಳ ಕುರಿತು ಸಾಹಿತ್ಯಾಸಕ್ತರಲ್ಲಿ ಮಾತಾಡಿದರು. ಸಾಹಿತ್ಯ ಅಕಾಡೆಮಿಯ ಮಾಜೀ ಸದಸ್ಯರೂ, ಕನ್ನಡ ಸಲಹಾ ಮಂಡಳಿಯ ಸಂಚಾಲಕರೂ ಆಗಿದ್ದ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ ಅವರಿಗೆ ದೆಹಲಿ ಕರ್ನಾಟಕ ಸಂಘದೊಂದಿಗಿನ ಬಾಂಧವ್ಯ ಬಹಳ ಹಳೆಯದು. ಕನ್ನಡದ ಯಾರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಬಂದಾಗಲೂ ಅವರು ಪುರಸ್ಕೃತರನ್ನು ಸಂಘ-ಕ್ಕೆ ಕರೆತರುವುದಲ್ಲದೇ ಅವರನ್ನು ಸನ್ಮಾನಿಸುವುದರವರೆಗಿನ ಎಲ್ಲ ಸಹಾಯವನ್ನು ಅತ್ಯಂತ ಪ್ರೀತಿಯಿಂದ ಕಾಳಜಿವಹಿಸಿ ಮಾಡುತ್ತಾರೆ. ಈಗಲೂ ಕನ್ನಡದ ಖ್ಯಾತ ಕವಿ ನಾಟಕಕಾರ ಪ್ರೊ.ಎಚ್.ಎಸ್. ಶಿವಪ್ರಕಾಶ್ ಅವರಿಗೆ ಹಾಗೂ ಯುವಕವಿ ಆರಿಫ್ ರಾಜಾ ಅವರಿಗೆ ಪುರಸ್ಕಾರ ಘೋಷಣೆಯಾಗುವ ಕಾಲಕ್ಕೆ ದೆಹಲಿಯಲ್ಲಿದ್ದರು.

ಮೊದಲಿಗೆ ಮಾತನಾಡಿದ ಕವಿಯತ್ರಿ ಡಾ. ಹೇಮಾ ಸ್ತ್ರೀ ಮತ್ತು ಪುರುಷರಲ್ಲಿ, ಪುರುಷನಿಗಿಂತ ಸ್ತ್ರೀಯೇ ಸಶಕ್ತಳಿರುತ್ತಾಳೆ ಎಂಬುದನ್ನು ವಿಜ್ಞಾನವೇ ಪುಷ್ಟೀಕರಿಸಿದೆ, ಸ್ತ್ರೀ ತನ್ನಲ್ಲಿ ಆತ್ಮವಿಶ್ವಾಸವನ್ನು ರೂಢಿಸಿ ಬೆಳೆಸಿಕೊಳ್ಳಬೇಕು ಎನ್ನುತ್ತ ತಮ್ಮ ಕಾವ್ಯಯಾನದಲ್ಲಿ ಪ್ರಭಾವ ಬೀರಿದ ತಮ್ಮ ತಾತ ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ ಅವರನ್ನು ಆಪ್ಯಾಯತೆಯಿಂದ ನೆನೆದರು. ಹತ್ತೊಂಭತ್ತನೆ ಶತಮಾನದ ಕೊನೆಯ ದಶಕದಲ್ಲೇ "ಚಂದ್ರೋದಯ", "ವಾಗ್ದೇವಿ", "ವಾಗ್ಭೂಷಣ" ಪತ್ರಿಕೆಗಳನ್ನು ನಡೆಸಿ ಆ ಕಾಲದಲ್ಲಿಯೇ ಪ್ರಪ್ರಥಮವಾಗಿ ಕನ್ನಡದಲ್ಲಿ ಕಾನೂನು ಪುಸ್ತಕ ಬರೆದ ಹಿರಿಮೆ ಅವರದು. ಹೀಗೆ ಹೇಮಾ ಅವರಿಗೆ ಕಾವ್ಯ-ಸಾಹಿತ್ಯ ರಕ್ತಗತವಾಗಿಯೇ ಬಂದಿದೆ. 80ರ ದಶಕದಲ್ಲಿ ಕನ್ನಡ ಮಹಿಳಾ ಕಾವ್ಯದಲ್ಲಿ ಒಂದು ಹೊಸ ಅಲೆಯೇ ಪ್ರಾರಂಭವಾಗಿತ್ತು ಮತ್ತು ಆ ಅಲೆಯಲ್ಲಿ 1983 ರಲ್ಲಿ ತಮ್ಮ ಮೊದಲ ಕವನ ಸಂಕಲ "ವಿರಹೋತ್ಸವ"ದಿಂದ ಗಮನ ಸೆಳೆದ ಅವರು ಸ್ತ್ರೀ ಸಂವೇದನೆಗಳ ನೆಲೆಯಲ್ಲಿ ತಮ್ಮನ್ನು ವಿಶಿಷ್ಟವಾಗಿ ಗುರುತಿಸಿಕೊಂಡವರು. ತಾಯಿಯಾಗಿ, ಮಗಳಾಗಿ, ಪ್ರೇಯಸಿಯಾಗಿ, ಹೆಂಡತಿಯಾಗಿ, ಸಖಿಯಾಗಿ ಮಹಿಳೆಗೆ ಮಾತ್ರ ವಿಶೇಷವಾದ ಅನುಭವಗಳ ಅಭಿವ್ಯಕ್ತಿ ಸಾಧ್ಯವಾಗಿದ್ದು ಹೇಮಾ ಅವರ ಕಾವ್ಯದಲ್ಲಿ ಈ ಸೂಕ್ಷ್ಮತೆಯನ್ನು ಕಾಣಬಹುದು. ಹೇಮಾ ತಮ್ಮ "ಬಾಳೆಗರ್ಭ" ಕವನ ಸಂಕಲದಿಂದ ನಾಲ್ಕಾರು ಕವಿತೆಗಳನ್ನು ವಾಚಿಸಿದರು.

ಬದುಕು ನೀಡಿದ ತಾಯಿ ಓದಲು ಬಾರದಿದ್ದರೂ ಆಕೆ ತುತ್ತಿನೊಂದಿಗೆ ಉಣಿಸಿದ ವಾತ್ಸಲ್ಯ, ಅಂತಃಕರಣ ಇಂದು ತಮ್ಮನ್ನು ಇಲ್ಲಿವರೆಗೂ ನಡೆಸಿಕೊಂಡು ಬಂದಿದೆ, ಬದುಕು ಬಹಳಷ್ಟನ್ನು ನೀಡಿದೆ ಮತ್ತು ಆ ಬಗ್ಗೆ ತಮಗೆ ಸಂತಸವಿದೆಯೆನ್ನುವ ಸಿದ್ದಲಿಂಗ ಪಟ್ಟಣಶೆಟ್ಟಿ ಅವರು ಬದುಕಿನ ಎಲ್ಲ ಚೆಲುವಿನಲ್ಲೂ ತಾಯಿಯನ್ನು ಕಾಣುವ ಹೆಂಗರುಳಿನ ಕವಿ. ಸಿದ್ದಲಿಂಗ ಪಟ್ಟಣಶೆಟ್ಟಿ ಅವರೂ "ನಿನ್ನ ಮರೆಯೂ ಮಾತು" ಸಂಕಲನದಿಂದ ಕೆಲ ಕವಿತೆಗಳನ್ನು ವಾಚಿಸಿದರು.

ಇದೇ ಸಂದರ್ಭದಲ್ಲಿ ಡಾಕ್ಟರೇಟ್ ಪಡೆದ ವೈ. ಅವನೀಂದ್ರನಾಥ ರಾವ್ ಅವರನ್ನು ಸಿದ್ದಲಿಂಗ ಪಟ್ಟಣಶೆಟ್ಟಿ ಸಂಘದ ಪರವಾಗಿ ಹೂಗುಚ್ಛ ನೀಡಿ ಅಭಿನಂದಿಸಿದರು. ನವದೆಹಲಿಯ ಕೇಂದ್ರ ಸಚಿವಾಲಯ ಗ್ರಂಥಾಲಯದ ಅಧಿಕಾರಿ ವೈ.ಅವನೀಂದ್ರನಾಥ್ ರಾವ್ ಅವರಿಗೆ ಮಧ್ಯ ಪ್ರದೇಶದ ಮಹಾತ್ಮಾ ಗಾಂಧಿ ಚಿತ್ರಕೂಟ ಗ್ರಾಮೋದಯ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದೆ. ಅವನೀಂದ್ರನಾಥ್ ಅವರು ಮಂಡಿಸಿದ "ಭಾರತದ ಸಚಿವಾಲಯ ಗ್ರಂಥಾಲಯಗಳ ಜಾಲ ಮತ್ತು ಸಂಪನ್ಮೂಲ ವಿನಿಮಯಗಳಿಗೆ ಒಂದು ಮಾದರಿ "ಎಂಬ ಮಹಾ ಪ್ರಬಂಧಕ್ಕೆ ಈ ಗೌರವ ಲಭಿಸಿದೆ. ಡಾ. ಆರ್.ಪಿ. ವಾಜಪೇಯಿ ಅವರು ಈ ಸಂಶೋಧನೆಗೆ ಮಾರ್ಗದರ್ಶಕರಾಗಿದ್ದರು. ಅವನೀಂದ್ರನಾಥ್ ಅವರು ತಾವು ಪಿಹೆಚ್‌ಡಿ ಮಾಡುವ ಸಂದರ್ಭದ ನೋವು ನಲಿವುಗಳನ್ನು ಎಲ್ಲರೊಂದಿಗೂ ಹಂಚಿಕೊಂಡರು ಹಾಗೂ ಅಭಿನಂದಿಸಿದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ ಅವರಿಗೂ ಹಾಗೂ ದೆಹಲಿ ಕರ್ನಾಟಕ ಸಂಘಕ್ಕೂ ಕೃತಜ್ಞತೆಗಳನ್ನು ಸಲ್ಲಿಸಿದರು. ಸಾಹಿತ್ಯ ಸಮಿತಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರೂ ಬಹಳ ಕಾಲದ ನಂತರ ಹೀಗೆ ವಿರಾಮವಾಗಿ ಪಟ್ಟಣಶೆಟ್ಟಿ ದಂಪತಿಗಳೊಂದಿಗೆ ಕೆಲಕಾಲ ಕಳೆಯುವ ಅವಕಾಶ ಸಿಕ್ಕಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕವಿ ಸಿದ್ದಲಿಂಗ ಪಟ್ಟಣಶೆಟ್ಟಿ ಅವರಿಗೆ, ಉಪಾಧ್ಯಕ್ಷೆ ಉಷಾ ಭರತಾದ್ರಿ ಹೇಮಾ ಅವರಿಗೆ ಪುಷ್ಪಗುಚ್ಛ ನೀಡಿ ಗೌರವಿಸಿದರು. ಸಂಘದ ಸಾಹಿತ್ಯ ಉಪಸಮಿತಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಸಂಚಾಲಕಿ ರೇಣುಕಾ ನಿಡಗುಂದಿ ಅವರು ಈ ಕಾರ್ಯಕ್ರಮವನ್ನು ನಡೆಸಿದರು. ದೆಹಲಿಯ ತಣ್ಣನೆಯ ಚಳಿಯ ಇಳಿಸಂಜೆಯಲ್ಲಿ ಕಾಫೀ ಹೀರುತ್ತ ಸಾಹಿತಿಗಳಿಬ್ಬರ ಕವಿತೆಗಳನ್ನು ಸವಿಯುವುದರಲ್ಲಿ ಸಮಯದ ಪರಿವೆಯೇ ಇದ್ದಿಲ್ಲ.

❑ **ರೇಣುಕಾ ನಿಡಗುಂದಿ**

# 'ನೃತ್ಯಂ ಡ್ಯಾನ್ಸ್ ಮತ್ತು ಕಲ್ಚರಲ್ ಸೊಸೈಟಿ' ಕಲಾವಿದರಿಂದ ನೃತ್ಯ ಪ್ರದರ್ಶನ

ನೃತ್ಯಂ ಡ್ಯಾನ್ಸ್ ಮತ್ತು ಕಲ್ಚರಲ್ ಸೊಸೈಟಿಯ ಭಾರತೀಯ ಹಾಗೂ ವಿದೇಶಿ ವಿದ್ಯಾರ್ಥಿಗಳಿಂದ ಡಿಸೆಂಬರ್ 21ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನೃತ್ಯ ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಸ್ಥಾಪಕಿ ಹೆಸರಾಂತ ಭರತನಾಟ್ಯ ಗುರು ಶ್ರೀಮತಿ ಪದ್ಮಾ ಸಂಪತ್‌ಕುಮಾರನ್ ಅವರು 1979ರಿಂದ ಭಾರತೀಯರಲ್ಲದೇ ವಿದೇಶಿ ವಿದ್ಯಾರ್ಥಿನಿಯರಿಗೂ ಭರತನಾಟ್ಯವನ್ನು ಕಲಿಸುತ್ತಿದ್ದಾರೆ. ಇವರ ಬಳಿ ನೃತ್ಯಾಭ್ಯಾಸ ಪಡೆದ ರಷ್ಯನ್ ವಿದ್ಯಾರ್ಥಿನಿ ನತಾಲಿಯ ಮಾಸ್ಕೋ ವಿಶ್ವವಿದ್ಯಾಲಯದಲ್ಲಿ ಸರಸ್ವತಿ ನಾಟ್ಯ ಕೇಂದ್ರವನ್ನು ಸ್ಥಾಪಿಸಿ ನೃತ್ಯ ಕಲೆಯನ್ನು ಕಲಿಸುತ್ತಿದ್ದಾರೆ. ತಮಿಳುನಾಡಿನ ಕಲೈಮಾಮನಿ ಪ್ರಶಸ್ತಿ ಮೊದಲಾದ ಪುರಸ್ಕಾರಗಳನ್ನು ಪಡೆದ ಪದ್ಮಾ ಸಂಪತ್ ಅವರು 2012ರಲ್ಲಿ ರಷ್ಯನ್ ರಾಷ್ಟ್ರಪತಿಗಳಿಂದ ಪುಷ್ಕಿನ್ ಮೆಡಲ್ ಪ್ರಶಸ್ತಿಯನ್ನು ಸಹ ಪಡೆದಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ನೃತ್ಯ ಪ್ರದರ್ಶನ ನೀಡಿದ ಕಲಾವಿದರನ್ನು ಶ್ಲಾಘಿಸಿದರು. ನಮ್ಮ ಭಾರತೀಯ ಕಲೆ ವಿದೇಶಿಯರನ್ನೂ ಸೆಳೆಯುವಂತಾಗಿದ್ದು ಹೆಮ್ಮೆಯ ಸಂಗತಿ ಎಂದ ಹೆಗಡೆ ಅವರು ರಷ್ಯನ್ ವಿದ್ಯಾರ್ಥಿನಿ ದಿಹಾರ ಲತ್‌ಘುನೀಯುಳ ಸಾಧನೆಯನ್ನು ಪ್ರಶಂಸಿಸಿದರು. ಹಲವು ಕನ್ನಡದ ಗೀತೆಗಳ ನೃತ್ಯ ಸಂಯೋಜನೆಯ ಅಮೋಘ ನೃತ್ಯ ಪ್ರದರ್ಶನ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.



Delhi Karnataka Sangha's Abhimatha Monthly,
January -2013, Price Rs.1/- RNI Regn. No. 53405/91, DL-SW-1/4016/13-15
Printout Date : January 8th / 9th, Postal Date :10th / 11th, Total Pages-24



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press
C-95, Okhla Industrial Area, Phase-I, New Delhi-110020, Tel: 26815778, 40520770